(Sri M. H. JAYAPRAKASH NARAYAN)

(b) the action taken by the Kadri Police on this incident which took place three days ago ;

(c) the names of the three autorikshaw owners and drivers who assaulted the girl ;

(d) of them, the name of the person who is absconding and the root cause for the assault ?

SRI VEERENDRA PATIL (Chief Minister)

(a) One Sri Narayana is alleged to have assaulted.

(b) A case in Cr. No. 184/70 U/Ss. 447 and 323, IPC, has been registered. Of the three accused, two were arrested and vigorous efforts are being made to apprehend the one absconding accused.

(c) One Autorikshaw bearing No. MYS 6550 is involved in this case and it belongs to one Sri Mathew. The name of the Driver is Sri Prakasa.

(d) The accused Sri Narayana is absconding and the case is under investigation.

CALLING ATTENTION TO A MATTER OF URGENT PUBLIC IMPORTANCE

Re : Publication of Book "Durgah Banda Nawazis a Hindu Temple"

SRI S. RUDRAPPA (Chitapur):–Sir, I call the attention of the Hon. Chief Minister to the situation that has arisen in Hyderabad Karnatak area as a result of publication of a book entitled "Durgah Banda Nawaz is a Hindu Temple."

SRI V. N. PATIL (Humnabad) :—Has it come to the notice of the Hon. Chief Minister that the mischievous publication of the book named "Durga Banda Nawaz is a Hindu Temple" has created great anxiety and disharmony in that area ?

SRI G. CHANDRAKANTH (Bidar) :—Is it right for the Hon. Member to make a lecture and that too, before Government make a statement ?

SRI MANIK RAO PATIL (Deputy Minister for Home) :—Sri, the attention of Government has been drawn to the publication of the book entitled "Durgah Banda Nawaz is a Hindu Temple" by Itihasa Abhyasak Mandal, Gulbarga. Sriyuths Ramash K. Babaladkar and

Anil are its authors. In this book, an attempt has been made to trace the historical development of the building and to show that "Durgah Banda Nawaz" is a Hindu Temple.

The statement contained in this book and opinions expressed therein are being examined, to determine whether it has the effect of promoting enmity between different groups on grouuds of religion, race, language or it is otherwise prejhdicial to maintenance of harmony between different religions, racial or language groups or castes or communities.

SRI V. N. PATIL:- If you go through the statement of the Hon. Deputy minister, you will find that it is self-contradictory. In the first para he has stated that an attempt has been made in this book to trace the historical development of the building to show that "Durgah Banda Nawaz" is a Hindu Temple. That means that the Deputy Minister has come to the conclusion that it is a Hindu Temple and that he does not contemplate any action. In the second para of the statement, he states that the statements contained in this book and opinions expressed therein are being examined. Who are the persons that are examined? What is the machinery which is examining the statements and opinions contained in the book? If the Government feels that there are historical antecedents, what is the need for the Home Ministry to examine to find out where there is anything irrelevent and subversive in the Book to create hatred between communities. I want to read one passage that has been used in the book.

SRI G. CHANDRAKANTH:- I rise to a point of order. I wish to know whether reading from the book can be allowed?

MR. SPEAKER:- Sri V. N. Patil may give just a gist of the passage he intends to read instead of reading the passage itself in the interest of economy of time.

SRI G. CHANDRAKANTH:- Reading a passage torn from the context is an unhealthy precedent. He is leaving certain portions.

MR. SPEAKER:- I have asked Sri Patil to give a summary of the passage.

SRI V. N. PATIL:- I want the direction of the Chair to qoute the relevant passage. I want the protection of the Chair.

MR. SPEAKER:- Reading of a passage is permissible if it is a sort of a quotation. Let the Hon. Member give only a summary.

SRI V. N. PATIL:- I am producing this book from which I am reading.

MR. SPEAKER:- The Rule does not contemplate any question and answer on calling Attention Notice and the statement. As a matter of fact, in order to help the Members, I shall permit one or two clarifications. If that develops in to a debate the purpose of the Rule is defeated. Sri Patil has to realise that position.

SRI BOLA RAGHURAM SHETTY:- Sri Patil is persisting to qoute.

SRI V. N. PATIL:- I do not like this provocation and disturbance when I am on my legs.

MR. SPEAKER:- Sri Patil should not read from the book.

SRI K. H. PATIL:-If under Rule 304, my friend has made reference to a para from a book, and he is prepared to produce that book, cannot the ruling be changed?

MR SPEAKER:- the hon. Member may go through the Rule once again and verify whethr. it applies to private members.

SRI V. N. PATIL:—Not only there is provocation of Hindus in this book saying that this is a Hindu temple but also there is an appeal to the Hindu community to dig the Durgah to bring out the Hindu temple. This creates hatred between the two communities. What I am interested in is communal harmony. Even a small spark will kindle the fire and then when once it is kindled it will be very difficult to extinguish it.

2-30 P.M.

MR. SPEAKER:—Hon'ble Member is making a speech now. The Chief Minsiter has understood him and he will reply. Hon'ble Chief Minister must have gone through this book.

SRI V. N. PATIL:—My question is, has the Government received any representation from different political organisations, social organisations and religious institutions to ban this book which is creating hatred between the two communities and which is creating fear in the minds of Muslim community thatt heir Durgah be willdug and destroyed The next question is, what action the Government contemplates to take to ban this book?

SRI VEERENDRA PATIL (Chief Minister):—It is true that we received some representations with regard to the book that the hon'ble Member is referring to. Some members met me in a delegation when I had been

to Gulbarga last time and I had a detailed discussion with them. Also I had a detailed discussion with the Deputy Commissioner, the Divisional Commissioner and the Police Authorities. I am very happy to say that our local officers have taken prompt action and they referred this matter to Government. In fact, I caught hold of a copy of the book and I brought that book here and immediately asked our Home Secretary to get it examined in consultation with the Law Department. On this occasion I would like to make a humble suggestion and that is that whatever action Government proposes to take, must be backed by legal sanction. It is very easy for anybody to say that this book should be straightway banned, but as Government I want to take action which is based on firm grounds. That is way we are actively considering in the Law Department what action we could take. I am awaiting the advice of the Law Department. As soon as the Law Department tenders advice, in the light of that, whatever action is necessary to be taken in this behalf, we will not hesitate to take.

With regard to the other question, 'what effect this book had in the mind of the people, particularly the minority community, and what steps the Government took in order to maintain communal harmony, I have only to say that although there was a little tension after the publication of this book our local officers acted promptly and gave all protection and consolation to the minority community with the result that whatever was feared would happen after the publication of the book did not actually happen. Nothing has happened; on the other hand our officers have taken all precautions with the result there is perfect communal harmony in Gulbarga So far as banning the book and taking action against the publishers of the bo k is concerned, that is being actively considered here in consultation with the Law Department and on the basis of the advice of the Law Department we will go ahead.

SRI H. SIDDAVEERAPPA:—I am glad to learn that the Leader of the House has taken prompt action, but I would like to say that time is the very essence in this because you cannot stop the sale of the book and the reading of the book by people till you actually ban it and for that you seem to have some difficulty till you get the advice of the Law Department. My suggestion is that the matter may be decided as early as possible.

SRI VEERENDRA PATIL:— I agree with the hon. Member Sri Siddaveerappa. It is not at all our intention to some how or the other, drag on this issue and ask the Law Department to give their advice leizurely. I wanted to know who is the original author of this book. I do not know who he is, but I am told this is not the first book of this author and that he was written several such other books. He has also written a book stating that once upon a time Taj Mahal also was a Hindu Temple. That is why I said that the question of the

(Sri VEERENDAA PATIL)

action to be taken against this book has to be examined by the Law Department. The very fact that we have referred the matter to the Law Department shows our anxiety to see that whatever action is necessary to be taken should be taken in order to maintain communal harmony and we will not hesitate to take that action.

BUSINESS OF THE HOUSE

MR. SPEAKER:-Now this subject is closed. The next item isdiscussion on scarcity conditions in the State. Before we go to that item I have to make one suggestion for the consideration of the House. The next item after the dicussion of the scarcity conditions is the consideration of the Supplementary demands.

SRI K. H. PATIL: We have not received any report of the Business Advisory Committee about it.

MR. SPEAKER: Two Subjects were placed before the Business Advisory Committee The first item was discussion on the scarcity condition and the second item was discussion of the supplementary demands. I have taken care to follow the same order. Probably this discussion will last today and tomorrow. Before this business is over, I shall call a meeting of the Business Advisory Committeewith regard to allotment of time for the work to be taken up thereafter.

As regards the supplementary demands, Hon. Members will note that a major portion of the supplementary demands, nearly Rs. 2 crores is in respect of scarcity works. Therefore my suggestion to Hon. Members is that while participating in the discussion on the supplementary demands they can speak on the scarcity conditions. Therefore, in order to avoid duplication of the discussion, the discussion on the scarcity conditions may be closed now we may take up the discussion of the supplementary demands and during that discussion Members can as well speak on scarcity conditions because a major portion of the supplementary demands, namely Rs. 2 crores, is for scarcity works, this year.

All that the members require in that they should have a chance to speak about scarcity conditions. They can speak about scarcity conditions while speaking on the Supp'ementary Esmates.

SRI AZIZ SAIT :— Sir, the Supplementary Demands are not restricted to famine conditions only,but they also include education, rural development, co-operation, labour and employment, forests, etc.

These supplementary estimates are something like a small budget. Members have to speak about the scarcity conditions in their respective districts. Therefore, scarcity conditions will have to be disussed exclusively.

MR. SPEAKER :— I consulted the Leader of the Congress (R) Sri Siddaveerappa about this. of course he did not commit himself, but he said that it is a good idea. I do not want to stifle the debate. Hon Members who are anxious to speak may speak about scarcity conditions. The Business Advisory Committee allotted only two days for the discussion of scarcity conditions. This is the third day. It is better to finish this debate within a reasonable time By God's grace we had good rains and some members are anxious to go back to their places to attend to agricultural operations We can discuss the Supplementary Estimates along with scarcity conditions today and even tomorrow.

SRI AZIZ SAIT :— When do you propose to adjourn the Assembly?

MR. SPEAKER :— I shall convenue the meeting of the Business Advisory Committee tomorrow and decide. I was in bed for the last 4 to 5 days. I came only this morning and I do not know the developments. I shall ascertain the views of members and consider the matter in the Business Advisory Committee tomorrow.

ಶ್ರೀ ಎನ್. ಹುಚ್ಚ ಮಾಸ್ತಿಗೌಡ :— ಸ್ವಾಮಿ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಚರ್ಚೆಗೆ ಅವಕಾಶ ಮಾಡಕೊಟ್ಟಿರುವುದು ೨ ದಿವಸ ಅನ್ನುವುದು ನಿಜ. ನಿನ್ನೆ ದಿವಸ ಬಹಳ ಹೊತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕದೇ ಇದ್ದುದರಿಂದ ಈ ದಿವಸವು ಮುಂದೆ ಹೋಯಿತು. ಈ ಸದನದಲ್ಲಿ ಕ್ಷಾಮಪೀಡಿತ ಪ್ರದೇಶದಿಂದಲೇ ಬಂದಿರತಕ್ಕಂಥ ಸದಸ್ಯರು ಇದ್ದಾರೆ. ಆದ್ದರಿಂದ ಅವರಿಗೆ ಅವಕಾಶ ಮಾಡಿಕೊಡಬೇಕು.

ಇನ್ನು ಸಪ್ಲಿಮೆಂಟರಿ ಗ್ರಾಂಟ್ಸ್‌ನಲ್ಲಿ ಮಾತನಾಡುವುದು ಬೇರೆ ಅನೇಕ ವಿಷಯಗಳು ಇವೆ. ಇದರಲ್ಲಿ ಬೆರೆಸುವುದಕ್ಕಾಗುವುದಿಲ್ಲ. ಆ ಸಪ್ಲಿಮೆಂಟರಿ ಗ್ರಾಂಟ್ಸ್ ಮೇಲೆ ಮಾತನಾಡುವುದಕ್ಕೆ ತಾವು ಪ್ರಾಮುಖ್ಯತೆ ಕೊಡಬೇಕು. ಈಗ ಕ್ಷಾಮಪೀಡಿತ ಪ್ರದೇಶದಿಂದ ಬಂದಿರತಕ್ಕಂಥ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಿ. ಆಮೇಲೆ ನಿಮ್ಮ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿ ಮುಂದಿನ ಕಾರ್ಯಕಲಾಪಗಳನ್ನು ಯಾಪರೀತಿ ಮಾಡಬೇಕು ಎನ್ನುವುದನ್ನು ಗೊತ್ತು ಮಾಡಬಹುದು ಎಂದು ನಾನು ಹೇಳುತ್ತೇನೆ.

SRI AZIZ SAIT :— Before we switch on the discussion on scarcity conditions, there are two Call Attention notices put on the Agenda as the last item. They can be taken up now.

MR. SPEAKER :—The Hon. Member may know that under the rule, only one Call Attention Notice is permissible per day. In order to help the Hon. Members they have been included, and they will come in the usual course.

SRI AZIZ SAIT :— Sir, my suggestion is that instead of putting them in the last, they could be included after the Question Hour.

MR. SPEAKER :— I shall coneider it.

(MOTION RE: SCARCITY CONDITIONS IN THE STATE DEBATE CONTINUED

ಶ್ರೀ ಬಿ. ಪಿ. ನಂಜಯ್ಯನಮಠ್:— (ಹುನಗುಂದ್) ಅಧ್ಯಕ್ಷ ಮಹಾಶಯರೇ, ನಿನ್ನೆ ದಿವಸ ನನ ಮಾತನ್ನು ಶುರುಮಾಡಿದಾಗ ಈ ಹೊತ್ತಿನ ದಿವಸ ಮಾತನಾಡಬೇಕೆಂದು ಅಧ್ಯಕ್ಷರ ಅಪ್ಪಣೆ ಬಂದ ಪ್ರಕಾರ ನಾನು ಇಂದು ಬರಗಾಲ ಕ್ಷಾಮ ಪರಿಹಾರ ಪರಿಶೀಲನೆಗಾಗಿ, ಈ ಸಮೀಕ್ಷೆ ವರ್ಷದಲ್ಲಿ ಕೆಲವೊಂದು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ.

ಈಗಾಗಲೆ ಎರಡೂ ಕಡೆಯ ಸದಸ್ಯರೂ ನಮ್ಮ ಕರ್ನಾಟಕದಲ್ಲಿ ಇದ್ದಂಥ ಬರಗಾಲ ಪರಿಸ್ಥಿತಿ ಬಗ್ಗೆ ಸಾಕಷ್ಟು ವಿಷಯಗಳನ್ನು ವಿಶಾದವಾಗಿ ಚರ್ಚೆ ಮಾಡಿದ್ದಾಗಿದೆ. ನಾನು ಹೊಸದಾಗಿ ಅಸೆಂಬ್ಲಿಯಲ್ಲಿ ಸೇರಿದ್ದರಿಂದ ಇಡೀ ಕರ್ನಾಟಕದ ಬಗ್ಗೆ ಮಾತನಾಡದೆ ನನ್ನ ಮತದಾರರ ಕ್ಷೇತ್ರದಲ್ಲಿ ಅಂದರೆ ಬಿಜಾಪುರದ ಡಿಸ್ಟ್ರಿಕ್ಟಿನಲ್ಲಿ ಇರುವ ಬರಗಾಲದ ಬಗ್ಗೆ ಮತ್ತು ಅದರ ಪರಿಹಾರದ ಬಗ್ಗೆ ಕೆಲವೊಂದು ವಿಷಯ ಗಳನ್ನು ಇಲ್ಲಿ ಸಾದರುಪಡಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯ ಗೋಳಗುಮ್ಮಟ, ಪಟ್ಟದಕಲ್ಲು, ಬಾದಾಮಿ ಮುಂತಾದ ವಾಸ್ತುಶಿಲ್ಪಗಳು ಹೇಗೆ ಪ್ರಸಿದ್ಧವಾಗಿವೆಯೋ ಅದೇ ರೀತಿ ಬರಗಾಲದ ಸಂಬಂಧದಲ್ಲಿ ಕೂಡ ಪ್ರಸಿದ್ಧವಾಗಿದೆ. ಅದೇ ರೀತಿ ರಾಜಕಾರಣಗಳು ಕೂಡ ಬಿಜಾಪುರ ಜಿಲ್ಲೆಯ ಬವಣೆಯನ್ನು ಹೇಳ ಬೇಕೆಂದರೆ ಬರಗಾಲ ಎನ್ನುವಂಥ ಮಾತು ಬರೆಯಬೇಕಾದರೆ ಬರಗಾಲದ ಮುಂದೆ ಬಿಜಾಪುರ ಜಿಲ್ಲೆ ಬಂದೇ ಬರುತ್ತದೆ.

ಅಧಿಕಾರದಲ್ಲಿ ಇದ್ದಂಥ ಪಕ್ಷದ ಸರ್ಕಾರ ೨೩ ವರ್ಷಗಳಿಂದ ರಾಜ್ಯಭಾರ ಮಾಡಿದರೂ ಕೂಡ. ಆ ಪಕ್ಷದಲ್ಲಿ ಎಷ್ಟೋ ಮಂತ್ರಿಗಳು ಆಗಿ ಹೋದರೂ ಕೂಡ ಬಿಜಾಪುರ ಜಿಲ್ಲೆಯ ಬರಗಾಲದ ಬವಣೆ ಇನ್ನೂವರೆಗೆ ಯಾವರೀತಿಯಿಂದಲೂ ಕಡಿಮೆಯಾಗಿಲ್ಲ. ಬಿಜಾಪುರ ಜಿಲ್ಲೆ ಈ ಸಭಾಭವನಕ್ಕೆ ಎರಡು ಜನ ಮುಖ್ಯ ಮಂತ್ರಿಗಳನ್ನು ಒದಗಿಸಿಕೊಟ್ಟಿದೆ. ಅದೂ ಅಲ್ಲದೆ ಶ್ರೀ ಬಿ. ಟಿ. ಮುರನಾಳ್ ಅವರು ತಮ್ಮ ಸ್ಥಾನವನ್ನು ಖಾಲಿ ಮಾಡಿ ಶ್ರೀ ನಿಜಲಿಂಗಪ್ಪನವರು ಈ ಸಭೆಗೆ ಮುಖ್ಯ ಮಂತ್ರಿಯಾಗುವುದಕ್ಕೆ ಅವಕಾಶ ಮಾಡಿಕೊಟ್ಟರು, ಈಗ ಆ ಜಿಲ್ಲೆಯಿಂದ ಇಬ್ಬರು ಮಂತ್ರಿಗಳಿದ್ದಾರೆ. ಆದರೂ ಕೂಡ ಬಿಜಾಪುರ ಜಿಲ್ಲೆಯ ಬರಗಾಲ ಪರಿಸ್ಥಿತಿ ಬ್ರಿಟಿಷರ ಕಾಲದಲ್ಲಿ ಇದ್ದಂಥ ಪರಿಸ್ಥಿತಿಗಿಂತಲೂ ಯಾವ ರೀತಿಯಿಂದಲೂ ಕಡಿಮೆ ಯಾಗಿಲ್ಲ ಎನ್ನುವ ವಿಷಯವನ್ನು ನಾವು ಎತ್ತಿ ಹೇಳುವಾಗ ೨೩ ವರ್ಷಗಳಿಂದ ಅಧಿಕಾರ ಮಾಡಿಕೊಂಡರು ಬಂದಂಥ ಸರ್ಕಾರದ ಮುಖಕ್ಕೆ ತಮ್ಮ ಕೈಯಿಂದ ತಾವೇ ಮಸಿ ಬಳಿದುಕೊಳ್ಳತಕ್ಕ ಪರಿಸ್ಥಿತಿಯುಂಟಾಗಿದೆ ಬಿಜಾಪುರ ಜಿಲ್ಲೆಯ ವಿಚಾರ ನೋಡಿದಾಗ ಪ್ರತಿ ವರ್ಷ ಬರಗಾಲ ಬರುತ್ತವೆ, ಪ್ರತಿ ವರ್ಷ ಕಾಮಗಾರಿ ಗಳು ನಡೆಯುತ್ತವೆ, ಪ್ರತಿವರ್ಷ ಅಧಿಕಾರಸ್ಥರು ಕೆಲಸ ಮಾಡುತ್ತಾರೆ ಇಷ್ಟಾದರೂ ಅಲ್ಲಿ ಬರಗಾಲ ತಪ್ಪಿಲ್ಲ. ಬಿಜಾಪುರ ಜಿಲ್ಲೆಗೆ ಶಾಶ್ವತವಾದ ಪರಿಹಾರ ಯೋಜನೆಯನ್ನು ನಮಗೆ ಸ್ವಾತಂತ್ರ್ಯ ಕಾಲದಿಂದ ಮಾಡಿದ್ದರೆ ಇಷ್ಟು ಹೊತ್ತಿಗೆ ಎಷ್ಟೋ ಬರಗಾಲ ಪರಿಹಾರವಾಗಿ ಕರ್ನಾಟಕ ಅತ್ಯಂತ ಆನಂದ ಪಡತಕ್ಕ ಮತ್ತು ಪೌರುಷ ಪಟ್ಟುಕೊಳ್ಳತಕ್ಕ ಸಂಗತಿಯಾಗಬಹುದಾಗಿತ್ತು. ಈಗ ನೋಡುವುದಾದರೆ ಬಿಜಾಪುರ ಜಿಲ್ಲೆಯಲ್ಲಿ ಕೇವಲ ಒಂದೆರಡು ತಾಲ್ಲೂಕುಗಳಲ್ಲಿ ಅರ್ಧ ಭಾಗವನ್ನು ಬಿಟ್ಟರೆ ಬಿಜಾಪುರ ಜಿಲ್ಲೆಯಲ್ಲಿ ಪೂರ್ತಿ ಬರಗಾಲವಿದೆ. ಬರಗಾಲ ಬರಬೇಕಾದರೆ ಒಂದೇ ರೀತಿಯಿಂದ ಬರುತ್ತದೆ ಎಂದು ಹೇಳುವುದಕ್ಕಾಗುವು ದಿಲ್ಲ. ಕೆಲವು ಕಡೆ ಮಳೆಯ ಅಭಾವದಿಂದ ಮತ್ತು ಅತಿವೃಷ್ಟಿಯಿಂದಲೂ ಕೂಡ ಬರಗಾಲ ಬರುತ್ತದೆ. ಅದೂ ಅಲ್ಲದೆ ಹವಾಮಾನದಿಂದಲೂ ಕೂಡ ಬರಗಾಲ ಉತ್ಪನ್ನವಾಗುತ್ತದೆ. ಕ್ರಿಮಿಕೀಟಗಳ ಉಪದ್ರವ ದಿಂದ ಬರಗಾಲ ಬೀಳುವ ಸಂಭವವಿರುತ್ತದೆ ಹೀಗೆ ವಿಚಾರ ಮಾಡಿದಾಗ ಇಲ್ಲಿಯವರೆಗೂ ಅನಾವೃಷ್ಟಿ ಯಿಂದಾಗಿ ಬಿಜಾಪುರ ಜಿಲ್ಲೆಯಲ್ಲಿ ಅನೇಕ ತಾಲ್ಲೂಕುಗಳಲ್ಲಿ ಬರಗಾಲ ತಟ್ಟಿದ್ದು, ೧೫ ದಿನಗಳಿಂದ ಧಾರಾಕಾರವಾಗಿ ಮಳೆ ಸುರಿದ ಪರಿಸ್ಥಿತಿಯನ್ನು ನೋಡಿದಾಗ ಮುಂಗಾರು ಮಳೆಯಿಂದ ಅಷ್ಟಿಷ್ಟು ಪೀಕು ಬರುವುದೂ ಸಂಪೂರ್ಣವಾಗಿ ನಷ್ಟವಾಗಿದೆ. ಸೇಂಗ ಮೊಳಕೆ ಹೊರಡುವುದಕ್ಕೆ ಬಂದಿದೆ.

ಬರಗಾಲ ಕಾಮಗಾರಿಗಳನ್ನು ಮಾಡುತ್ತಾರೆ. ಇದರಲ್ಲಿ ಖಡಿ ಮಾಡಿಸುತ್ತಾರೆ, ಲೈನ್ ಹಾಕಿಸುತ್ತಾರೆ. ಕೆಲವೊಂದು ದಿವಸಗಳಲ್ಲಿ ಒಂದು ಸೂಚನೆಯನ್ನು ಕೊಟ್ಟು, ಬರಗಾಲ ಕಾಮಗಾರಿಗಳನ್ನು ನಿಲ್ಲಿಸುತ್ತಾರೆ. ಹಿಂದಿನ ೧೫-೨೦ ವರ್ಷಗಳ ಕಾಮಗಾರಿ ನಡೆದಿರುವ ರೀತಿಯನ್ನು ನೋಡಿದಾಗ, ಬರಗಾಲದ ಕಾಮಗಾರಿಗಳ ಪ್ರಯೋಜನ ಬಡವರನ್ನು ಮುಟ್ಟುವುದಿಲ್ಲ. ಸರ್ವೇ ಸಾಧಾರಣ ನೂರಕ್ಕೆ ೨೫ ಭಾಗದಷ್ಟು ಬಡವರಿಗೆ ಮುಟ್ಟುತ್ತದೆಯೋ ಇಲ್ಲವೋ ಹೇಳುವುದು ಕಷ್ಟ. ಬಡವರಿಗೆ ಮುಟ್ಟುವ ೨೫ ಭಾಗದಲ್ಲಿ ಓವರ್‌ಸಿಯರ್, ಇಂಜಿನಿಯರ್ ಅದರಲ್ಲಿ ದೊಡ್ಡ ಪಾಲನ್ನು ತೆಗೆದುಕೊಳ್ಳುತ್ತಾರೆ. ಅವನ್ನು ನಾನು ಎತ್ತಿ ಹೇಳಬೇಕಾಗಿದೆ. ಈ ವಿಚಾರ ಪ್ರತಿಯೊಬ್ಬರಿಗೂ ಗೊತ್ತು, ಇಲ್ಲಿರತಕ್ಕ ಸಭಾಸದರಿಗೂ ಗೊತ್ತು. ಸರ್ಕಾರ ಅನ್ನುವುದು ಬರಗಾಲ ಪರಿಸ್ಥಿತಿಯಲ್ಲಿ ಸಿಲುಕಿದಂಥ ಬಡವರ ಕೂಡ ಚೆನ್ನಾಟವಾಡತಕ್ಕ ಪ್ರಸಂಗವನ್ನು ನೋಡಿದಾಗ ಎಷ್ಟೋ ಕಡೆ ಬಡವರಿಗೆ ಕೊಡುವಂಥ ಮೂರು ನಾಲ್ಕು ರೂಪಾಯಿಗಳಲ್ಲಿ ಅರ್ಧ ಭಾಗವನ್ನು ಮತ್ತು ಹತ್ತಿಪ್ಪತ್ತು ಜನರನ್ನು ನೇಮಿಸಿಕೊಂಡು ಮಸ್ಟರ್‌ನಲ್ಲಿ ೩೦ ಜನರ ಹೆಸರನ್ನು ಸೇರಿಸಿ ಸರ್ಕಾರದ ಹಣವನ್ನು ಅಪವ್ಯಯ ಮಾಡಿ ಬಡವರ ಹೊಟ್ಟೆಯ ಮೇಲೆ ಏಟು ಕೊಡುತ್ತಾರೆ. ಒಕ್ಕಲಿಗರ ಮತ್ತು ಒಕ್ಕಲುತನದ ಕೂಲಿ ಮಾಡುವವರ ಪರಿಸ್ಥಿತಿ ಹೀಗಾಯಿತು.

ಬಿಜಾಪುರದ ವೈಶಿಷ್ಟವನ್ನು ಹೇಳಬೇಕೆಂದರೆ ಅಲ್ಲಿ ನೂರಕ್ಕೆ ೨೫ ರಷ್ಟು ಜನರು ನೇಕಾರರಿದ್ದಾರೆ. ಅವರು ನೆರಳಿನಲ್ಲಿ ಕುಳಿತು ನೂಲು ನೇಯುವ ಉದ್ಯೋಗ ಮಾಡುವವರು ಇಂಥವರು ಕೈಯಲ್ಲಿ ಗುದ್ದಲಿ, ಸಲಿಕೆ ತೆಗೆದುಕೊಂಡು ಖಡಿ ಹಾಕುವುದು, ಲೈನ್ ಹಾಕುವುದು ಇಂಥ ಕೆಲಸಗಳನ್ನು ಮಾಡಿ ಎಂದರೆ ನೆರಳಿನಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಹೊಂದಿಕೊಂಡಿರುವವರು ಬಿಸಿಲಿನಲ್ಲಿ ಬರಗಾಲದ ಕಾಮಗಾರಿಗಳನ್ನು ಮಾಡಲು ಕಳುಹಿಸಿದರೆ ಅಂಥ ಜನರಿಗೆ ಬರಗಾಲದ ಪರಿಹಾರವನ್ನು ಕೊಟ್ಟಂತಾಗುವುದಿಲ್ಲ ಪ್ರತ್ಯಕ್ಷ ರೀತಿಯಿಂದ ಶಿಕ್ಷೆ ಕೊಟ್ಟಂತಾಗುತ್ತದೆ. ಇದು ನೇಕಾರರ ಪರಿಸ್ಥಿತಿ ಅವರಿಗೆ ಹೊಂದುವಂಥ ಕೆಲಸಗಳನ್ನು ಒದಗಿಸಿಕೊಡಬೇಕು. ನಮ್ಮ ಜಿಲ್ಲೆಯ ಮಂತ್ರಿಗಳಿದ್ದಾರೆ. ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು ಏನೆಂದರೆ ಬರಗಾಲದ ಕಾಮಗಾರಿಕೆಯಲ್ಲಿ ನೇಕಾರರ ಸಲುವಾಗಿ ಪ್ರತ್ಯೇಕವಾದ ಕೆಲಸಗಳನ್ನು ಅವರ ಪರಿಸ್ಥಿತಿಗೆ ಅವರ ಶರೀರಕ್ಕೆ ತಕ್ಕಂತೆ ಒಪ್ಪುವಂಥ ಕೆಲವೊಂದು ಕಾಮಗಾರಿಗಳನ್ನು ಒದಗಿಸಿಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ

ಬರಗಾಲದ ಕಾಮಗಾರಿಗಳಲ್ಲಿ ಮಳೆ ಬರುವವರೆಗೂ ಖಡಿ ಹಾಕುವ ಕೆಲಸ, ಲೈನ್ ತೆಗೆಯುವ ಕೆಲಸ ಇವುಗಳನ್ನು ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆ ಕೆಲಸಗಳು ಪೂರ್ತಿಯಾಗುವವರೆಗೂ ಮಾಡಿದರೆ ಅಡ್ಡಿ ಇಲ್ಲ ಬರಗಾಲದ ಕಾಮಗಾರಿಗಳಲ್ಲಿ ಎಷ್ಟೋ ಹಣ ಅಪವ್ಯಯವಾಗುತ್ತಿದೆ ಎಂದು ಹೇಳಿದ್ದೇನೆ. ಅದರ ಸದುಪಯೋಗವಾಗಬೇಕಾದರೆ ಊರೂರಿಗೆ ಒಂದೊಂದು ಕಮಿಟಿ ಮಾಡಿ ಅಲ್ಲಿಯ ಸೊಸೈಟಿ ಚೇರ್‌ಮನ್‌ರು ಪಂಚಾಯಿತಿ ಸರಪಂಚರು ಮತ್ತು ಇನ್ನಿತರ ಗ್ರಾಮಸ್ಥರು ಕೂಡಿದಂಥ ನಾಲ್ಕೈದು ಜನರ ಕಮಿಟಿ ಆಗಿ, ಆ ಕಮಿಟಿಗೆ ಹಣವನ್ನು ಒದಗಿಸಿ ಅವರ ಮುಖಾಂತರ ಕೆಲಸ ತೆಗೆದುಕೊಳ್ಳಬೇಕು. ಅಧಿಕಾರಸ್ಥರ ಕೈಯಲ್ಲಿ ಇದನ್ನು ಕೊಟ್ಟರೆ ನೂರಕ್ಕೆ ೫೦ ಭಾಗ, ೭೫ ಭಾಗ ಅವರ ಕೈಸೇರಿ ಬರಗಾಲ ಪರಿಹಾರಕ್ಕೆ ಕೊಡುವ ಹಣ ಪೋಲಾಗುತ್ತದೆ.

ಒಕ್ಕಲಿಗರ ಸಲುವಾಗಿ ಹೊಸ ಬಾವಿಗಳನ್ನು ತೆಗೆಸಲಿಕ್ಕೆ, ಅರ್ಧ ಆಗಿರುವ ಬಾವಿಗಳನ್ನು ಪೂರ್ತಿ ಮಾಡಲಿಕ್ಕೆ ಹಣವನ್ನು ಒದಗಿಸಿ ಪ್ರತಿಯೊಂದು ತಾಲ್ಲೂಕಿಗೂ ಒಂದೆರಡು ಬೋರ್‌ವೆಲ್ ಮೆಷಿನ್ ಕಳುಹಿಸಿ ಒಕ್ಕಲಿಗರ ಕೈ ನಿಂತ ಪ್ರಸಂಗದಲ್ಲಿ ಬೋರ್‌ವೆಲ್ ಹಾಕುವುದಕ್ಕೆ ಸಹಾಯ ಮಾಡಿ ಪರಿಹಾರ ನಿಧಿಯಿಂದ ಹಣ ಕೊಡುವ ಕೆಲಸ ಮಾಡಬೇಕು ಆದ್ದರಿಂದ ಇಡೀ ತಾಲ್ಲೂಕಿಗೆ ಶಾಶ್ವತವಾದ ಪರಿಹಾರ ಮಾರ್ಗವಾಗದೆ ಇದ್ದರೂ, ಬಾವಿಯನ್ನು ತೆಗೆಸಿದ ಕುಟುಂಬಕ್ಕಾದರೂ ಪರಿಹಾರ ಮಾರ್ಗವಾಗುತ್ತದೆ. ಈ ರೀತಿಯಿಂದ ಕೆಲವೊಂದು ವಿಧಾಯಕ ಕಾರ್ಯಕ್ರಮಗಳನ್ನು ತೆಗೆದುಕೊಂಡರೆ ಮಾತ್ರ ಬರಗಾಲ ಕಾಮಗಾರಿಯ ಕೆಲಸ ಅಥವಾ ಬರಗಾಲಕ್ಕೆ ಉಪಯೋಗ ಮಾಡಿದಂಥ ಹಣ ಸದ್ವಿನಿಯೋಗವಾಗುತ್ತದೆ,

ನಿನ್ನೆಯ ದಿನ ಮಾತನಾಡಿದ ಶ್ರೀ ಬೊಮ್ಮೇಗೌಡರು ಒಂದು ಮಾತನ್ನು ಹೇಳಿದರು. ಅಮಲ್ದಾರರಿಗೆ ಮಂತ್ರಿಗಳಿಗೆ ಅಂಜುತ್ತಾರೆಂದು ಹೇಳಿದರು. ಅದು ಅಲ್ಲದೆ ಶ್ರೀಮಾನ್ ಕೌಜಲಗಿಯವರು ಇತರ ಮಂತ್ರಿಗಳಿಗೆ ಅಂಜುತ್ತಾರೆಂದು ಕೂಡ ಹೇಳಿದರು. ಅಮಲ್ದಾರರು ಮಂತ್ರಿಗಳಿಗೆ ಅಂಜಬೇಕು. ಆದರೆ ಮಾನ್ಯ ಸದಸ್ಯರು ಹೇಳಿದಂತೆ ತಿರುವು ಮುರುವಾಗಿ ಮಂತ್ರಿಗಳು ಅಮಲ್ದಾರರಿಗೆ ಅಂಜುತ್ತಾರೆ. ನಾನು ಚುನಾವಣೆಯಲ್ಲಿ ನಾಲ್ಕು ಸಲ ಅಪಜಯ ಹೊಂದಿ ಐದನೆಯ ಸಲ ಆರಿಸಿ ಬಂದಿದ್ದೇನೆ. ಅಮಲ್ದಾರರಿಗೆ ಮಂತ್ರಿಗಳು ಏಕೆ ಹೆದರುತ್ತಾರೆಂಬುದನ್ನು ಹೇಳುತ್ತೇನೆ. ಪ್ರತಿಯೊಂದು ಚುನಾವಣೆಯಲ್ಲಿಯೂ ಅಮಲ್ದಾರರ ಪ್ರಭಾವವನ್ನು ಉಪಯೋಗ ಮಾಡಿಕೊಳ್ಳುತ್ತಾರೆ. ನಮ್ಮ ಭಾಗದಲ್ಲಿ ಅಮಲ್ದಾರರು, ಇಂಜಿನಿಯರು ಹತ್ತು ವರ್ಷವಾದರೂ ಒಂದೇ ಕಡೆ ಇದ್ದಾರೆ. ಮೂರು ವರ್ಷಕ್ಕೆ ಮೇಲಟ್ಟು ಒಂದು

(ಶ್ರೀ ಬಿ. ಪಿ. ನಂಜಯ್ಯನಮಠ್)

ಸ್ಥಳದಲ್ಲಿ ಇಡಬಾರದು, ಅವರನ್ನು ಬದಲು ಮಾಡಬೇಕು ಎಂದು ಹೇಳುವಾಗ ಕೆಲವು ಅಧಿಕಾರಿಗಳು ಹತ್ತು ಹತ್ತು ವರ್ಷಗಳು ಒಂದೇ ಕಡೆ ಇದ್ದಾರೆ, ಇರುವುದಲ್ಲದೆ ಇವರ ಮೂಲಕ ಹತ್ತಿಪ್ಪತು ಸಾವಿರರೂಪಾಯಿ ಗಳನ್ನು ಚುನಾವಣೆಗಳಿಗಾಗಿ ಖರ್ಚು ಮಾಡಿಸುತ್ತಿದ್ದಾರೆ.

3-00 P. M.

ಅದಲ್ಲದೆ ,೧೦-೨೦ ಸಾವಿರ ರೂಪಾಯಿಗಳನ್ನು ಕಂಟ್ರಾಕ್ಟರಿಂದ ತೆಗೆದುಕೊಂಡಿರುತ್ತಾರೆ. ಆದುದರಿಂದ ಅವರ ಮನೆಯಲ್ಲಿ ಲಗ್ನವಾದರೆ ಗಂಡಹೆಂಡತಿ ಇಬ್ಬರೂ ಹೋಗಿ ಕೈಯಿಂದ ಖರ್ಚು ಮಾಡುವರು. ಕಂಟ್ರಾಕ್ಟಟು ಮಂತ್ರಿಗಳ ಪರವಾಗಿ ಪ್ರಚಾರಮಾಡುವವರು, ಅಮಲ್ದಾರರು ಮಂತ್ರಿಗಳು ಹೋಗುವಾಗ ಹಿಂದಿನ ಸೀಟಿನಲ್ಲಿ ಕುಳಿತು ಇರುವವರು, ಅವರು ಮಂತ್ರಿಗಳಿಗೆ ಹೆದರುವುದಿಲ್ಲ. ಏಕೆಂದರೆ ಅವರಿಂದ ಮಂತ್ರಿಗಳಿಗೆ ಸಹಾಯ ದೊರೆತಿರುವುದು- ಕುತ್ತಲ್ ಎಂಬ ಒಬ್ಬ ಅಧಿಕಾರಿ ನಾಲ್ಕು ವರ್ಷ ಬಾಗಲುಕೋಟೆಯಲ್ಲಿದ್ದರು, ಆರು ವರ್ಷ ಇನ್ನೊಂದು ಕಡೆ ಇದ್ದರು. ಮುಂದಿನ ಚುನಾವಣೆಗೆ ಅವರಿದ್ದರೆ ಅನುಕೂಲ ಎಂದು ಹಾಗೆ ಅವರನ್ನು ಒಂದೇ ಕಡೆ ಬಹಳ ಕಾಲ ಇಟ್ಟಿದ್ದಾರೆ. ಇಂಥ ಅಮಲ್ದಾರರು ಇರುವಾಗ ಬರಗಾಲ ಕಾಮಗಾರಿ ಹೇಗೆತಾನೆ ಸರಿಯಾಗಿ ನಡೆದೀತು ? ಇಂಥ ಅಧಿಕಾರಿಗಳ ಕೈಗೆ ಹಣ ಕೊಟ್ಟರೆ ಅಪವ್ಯಯವಾಗುವುದು ಎಲ್ಲಿ ಕೆಲಸವಾಗಬೇಕೋ ಆಗುವುದಿಲ್ಲ. ಬೇಕಾದವರಿಗೆ ಕಂಟ್ರಾಕ್ಟ್ ಕೊಡುವರು ಮಂತ್ರಿ ಮಂಡಲ ಈಗಲಾದರೂ ಕೂಡ ಸರಿಯಾಗಿ ಕೆಲಸಮಾಡದಿದ್ದರೆ ಇನ್ನೂ ಸ್ವಲ್ಪವೇ ದಿವಸಗಳಲ್ಲಿ ಅದರಲ್ಲಿರುವ ಮಂತ್ರಿಗಳು ಮನೆಗೆ ಹೋಗುವರು, ಅವರ ಕುರ್ಚಿಗಳು ಖಾಲಿಯಾಗುವುವು, ನಮ್ಮ ಮಿತ್ರರು ಆ ಕುರ್ಚಿಗಳಮೇಲೆ ಕೂಡುವ ಸುದಿನ ಬರುವುದು. ಆದುದರಿಂದ ಈ ಮಂತ್ರಿಗಳು ಮನೆಗೆ ಹೋಗುವುದಕ್ಕೆ ಮುಂಚೆ ಬರಗಾಲದ ಕೆಲಸಗಳನ್ನಾ ಕೆಲವಾದರೂ ಮಾಡಿ ಹೋಗಬೇಕೆಂದು ಇಚ್ಛಿಸುತ್ತೇನೆ. ಬಡವರಿಗೆ ಸರಿಯಾಗಿ ಸಹಾಯ ಮಾಡದಿರುವುದು, ದುಂದುಗಾರಿಕೆ ಮಾಡುವುದು, ಬೇಕಾದವರಿಗೆ ಪ್ರೋತ್ಸಾಹ ಕೊಡುವುದು ಸರಿಯಲ್ಲ. ಅದನ್ನು ಬಿಟ್ಟು ಬಡವರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಕೆಲವು ಕಾಮಗಾರಿಗಳನ್ನಾದರೂ ಕೈ ಕೊಳ್ಳಬೇಕು. ಈಗ ಒಂದೊಂದು ಜಿಲ್ಲೆಯ ಕೆಲಸವನ್ನು ಒಬ್ಬೊಬ್ಬ ಮಂತ್ರಿಗಳು ನೋಡಿಕೊಳ್ಳುವರು, ನಮ್ಮ ಜಿಲ್ಲೆಯವರು ಒಬ್ಬ ಮಂತ್ರಿಗಳು ಮಾತ್ರ ಇದಾರೆ. ಹೀಗೆ ವ್ಯವಸ್ಥೆ ಮಾಡುವಾಗ ಮಂತ್ರಿಗಳು ತಮಗೆ ಬೇಕಾದವರಿಗೆ ಅನುಕೂಲವಾಗುವಂತೆ ಕೆಲಸಗಳನ್ನು ತೆಗೆದುಕೊಳ್ಳುವರು. ಈ ರೀತಿ ಮಾಡುವುದು ಅವಮಾನಕರ ಇದಕ್ಕೆ ಅವಕಾಶವಿಲ್ಲದಂತೆ ತಕ್ಕ ಏರ್ಪಾಡು ಮಾಡಬೇಕು ಇದು ಮಾರ್ಮಿಕವಾದ ವಿಷಯ, ಕೆಲವರು ಎಲ್ಲಾ ಖಾತೆಗಳಲ್ಲೂ ಕೈಹಾಕುವರು. ಇದು ಸರಿಯೇ? ದರ್ಪಮಾಡಿ ಬರಗಾಲದ ಕಾಂಗಾರಿಗೆ ಕೊಟ್ಟ ಹಣವನ್ನು ಅಪವ್ಯಯಮಾಡುತ್ತಿದ್ದಾರೆ. ಸರಿಯಾದ ಅಧಿಕಾರಿಗಳನ್ನು ಹಾಕಬೇಕು, ಸರಿಯಾಗಿ ಕೆಲಸಮಾಡುವವರನ್ನು ವರ್ಗವಾದರೂ ಮಾಡಬೇಕು. ಅಮಲ್ದಾರರಿಗೆ ಈ ಕೆಲಸ ವಹಿಸಿದರೆ ಜನರಿಗೆ ಉಪಯೋಗವಾಗುವುದಿಲ್ಲ, ಹಣ ಅಪವ್ಯಯವಾಗುವುದು

ಮತ್ತೊಂದು ವಿನಂತಿ :—ಬರಗಾಲ ಕಾಮಗಾರಿ ಸಲುವಾಗಿ ಮಾನ್ಯರೆವೆನ್ಯೂ ಮಂತ್ರಿಗಳುಉತ್ತರ ಕೊಡುವರು. ವಿಚಾರಮಾಡಿದಾಗ ಹೆಚ್ಚು ಜನರು ಕೌಜಲಗಿ ಎಂಬ ಮಂತ್ರಿಗಳೇ ಇಲ್ಲ............

ಛೇರ್ಮನ್‌ರವರು :—ಬೇಗನೆ ತಮ್ಮ ಭಾಷಣ ಮುಗಿಸಿ.

ಶ್ರೀ ಬಿ. ಪಿ. ನಂಜಯ್ಯನಮಠ :—ತಮ್ಮ ಅಪ್ಪಣೆಯನ್ನು ಪಾಲಿಸುತ್ತೇನೆ. ನನ್ನ ಮಾತು ಕಟುವಾಗಿರಬಹುದು, ಆದರೆ ಹೇಳಲೇಬೇಕಾಗಿದೆ, ಇದು ಪ್ರತಿಯೊಬ್ಬರೂ ವಿಚಾರಮಾಡಬೇಕಾದ ಸಂಗತಿ. ನಾನು ಮೊದಲನೆಯ ಬಾರಿ ಅಸೆಂಬ್ಲಿಯಲ್ಲಿ ಭಾಷಣ ಮಾಡುತ್ತಿದ್ದೇನೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಅನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ, ಮತ್ತು ನನ್ನ ಭಾಷಣವನ್ನು ಸಾವಧಾನದಿಂದ ಕೇಳಿದ ಮಾನ್ಯ ಸದಸ್ಯರಿಗೆ ಮತ್ತು ಮುಖಂಡರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ . ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ(ಸೊರಬ) :—ಸ್ವಾಮಿ ಅಧ್ಯಕ್ಷರೇ, ಈಗ ಈ ಸದನ ನಮ್ಮ ರಾಜ್ಯದಲ್ಲಿ ಉದ್ಭವವಾಗಿರುವ ಬರಗಾಲ ಅಥವ ಕ್ಷಾಮದ ವಿಚಾರದಲ್ಲಿ ಚರ್ಚೆ ನಡೆಸುತ್ತಿದೆ. ನಮಗೆ ಕೊಟ್ಟಿರುವ ವರದಿ ಪ್ರಕಾರ ಮೈಸೂರು ರಾಜ್ಯದಲ್ಲಿ ಬಹಳ ಹಿಂದೆಯೇ ಬರಗಾಲ ಮತ್ತು ಕ್ಷಾಮ ಕೆಲವು ಕಡೆ ಉದ್ಭವವಾಗಿ ಅನೇಕ ಭಾಗದ ಜನರಿಗೆ ಬಹಳ ತೊಂದರೆಯಾಗಿದೆ ಹಲವಾರು ಭಾಗಗಳಲ್ಲಿ ಈ ತೊಂದರೆ

ಯಿದೆ. ಬರಗಾಲ ಪ್ರಾಯಶಃ ಮೈಸೂರು ರಾಜ್ಯದಲ್ಲಿ ಮೊಟ್ಟಮೊದಲನೆಯ ಸಾರಿ ಬರುತ್ತಿಲ್ಲ, ಹಲವಾರು ವರ್ಷಗಳಿಂದ ಇದೆ ಎಂಬುದು ನಿರ್ವಿವಾದವಾದುದು.

ಇದನ್ನು ಹೋಗಲಾಡಿಸುವುದಕ್ಕೆ ಈಗಾಗಲೇ ಈ ಸದನದ ಹಲವಾರು ಮಾನ್ಯ ಸದಸ್ಯರು ತಮ್ಮ ಸಲಹೆಯನ್ನು ಕೊಟ್ಟಿದ್ದಾರೆ, ಇದಕ್ಕೆ ಖಾಯಂ ಪರಿಹಾರದ ಯೋಜನೆಯನ್ನು ಮಾಡಬೇಕು. ಇದಕ್ಕೆ ಒಂದು ಆಯೋಗ ಸೃಷ್ಟಿಯಾಗಬೇಕು, ಈ ಆಯೋಗಕ್ಕೆ ಸಂಪೂರ್ಣ ಅಧಿಕಾರ ಕೊಡಬೇಕು, ಮೈಸೂರು ರಾಜ್ಯದಲ್ಲಿ ಒಂದು ವೇಳೆ ಮಳೆ ಸಕಾಲಕ್ಕೆ ಬರದಿದ್ದರೆ ಮಳೆ ಅತಿ ಕಡಿಮೆ ಅಥವಾ ಅತಿ ಜಾಸ್ತಿಯಾದರೆ ಅದಕ್ಕೆ ಸೂಕ್ತ ಪರಿಹಾರವನ್ನು ಆಯಾಯಾ ಸಂದರ್ಭಕ್ಕೆ ತಕ್ಕಂತೆ ಕಂಡುಹಿಡಿಯಬೇಕಾಗುತ್ತದೆ. ಮತ್ತು ಸರ್ಕಾರದವರು ತ್ವರಿತವಾಗಿ ಜವಾಬ್ದಾರಿಯಿಂದ ಈ ಕಾರ್ಯನಿರ್ವಹಣೆಯನ್ನು ಯಾವ ಸಂದರ್ಭದಲ್ಲಿ ಯಾದರೂ ಮಾಡಬೇಕು. ಇದು ಎಷ್ಟು ಮಟ್ಟಿಗೆ ಆಗಬೇಕೆಂಬ ವಿಷಯದಲ್ಲಿ ಈ ಕಮಿಷನ್ ಅವರು ತಮ್ಮ ಸಲಹೆಯನ್ನು ಕೊಡಬೇಕು. ಈ ಬಗ್ಗೆ ಮಾನ್ಯಸದಸ್ಯರು ಈಗಾಗಲೇ ಕೊಟ್ಟಿರತಕ್ಕ ಸಲಹೆಯನ್ನು ನಾನು ಅನುಮೋದಿಸುತ್ತೇನೆ. ಸರ್ಕಾರದವರಿಗೆ ಸದನದವರು ಒಪ್ಪಿ ಈ ಹಣವನ್ನು ಕೊಡುತ್ತೇವೆ. ಅಧಿಕಾರಗಳನ್ನು ನಂಬಿ ನಾವು ಅವರಿಗೆ ಈ ಹಣವನ್ನು ಕೊಡುತ್ತೇವೆ. ಹಲವಾರು ಜನ ಸದಸ್ಯರು ಮಾತನಾಡಿದ್ದಾರೆ. ಆ ರೀತಿ ಹಣ ಕೊಟ್ಟಾಗ ಅದು ಪೋಲಾಗದ ರೀತಿಯಲ್ಲಿ ಯಾರಿಗೆ ತಲುಪಬೇಕೊ ಅವರಿಗೆ ತಲುಪಬೇಕೆಂಬ ವಿಷಯದಲ್ಲಿ ಈಗಾಗಲೇ ಹಲವಾರು ಅಭಿಪ್ರಾಯಗಳನ್ನು ವ್ಯಕ್ತಮಾಡಿದಾರೆ. ನಾವು ಇದನ್ನು ಎರಡು ಮೂರು ಭಾಗಗಳಾಗಿ ವಿಶ್ಲೇಷಣೆ ಮಾಡಬಹುದು. ಬರಗಾಲ ಏಕೆ ಬರುತ್ತದೆ ಎಂಬುದು ಒಂದು. ಎರಡನೆಯದು ಇದನ್ನು ಹೋಗಲಾಡಿಸುವುದಕ್ಕೆ ಹಣ ಎಲ್ಲಿಂದ ತರಬೇಕು? ನಮ್ಮ ಹತ್ತಿರ ಅಷ್ಟೊಂದು ಶಕ್ತಿ ಇದೆಯೇ? ಮತ್ತು ಇದನ್ನು ಜಾರಿಗೆ ಕೊಡತಕ್ಕ ವಿಷಯದಲ್ಲಿ ಬರಗಾಲ ಹೋಗಲಾಡಿಸುವುದಕ್ಕೆ ಅಥವಾ ಈ ಒಂದು ಕಷ್ಟ ಪರಿಸ್ಥಿತಿಯನ್ನು ನೀಗಿಸುವುದಕ್ಕೆ ಸರ್ಕಾರದ ಮೆಷಿನರಿ ಹೇಗೆ ಇರಬೇಕು? ಈ ರೀತಿ ಮೂರು ಭಾಗವಾಗಿ ವಿಂಗಡಣೆ ಮಾಡಬಹುದು ಸ್ವಾಮಿ ಅಧ್ಯಕ್ಷರೇ, ರಾಜ್ಯ ಸರ್ಕಾರವನ್ನು ಈಗ ಬಯ್ಯಬಾರದು ಎಂದು ತೀರ್ಮಾನ ಮಾಡಿದ್ದೇನೆ. ಏಕೆಂದರೆ ಅವರನ್ನು ಬೈದಷ್ಟೂ ಕೂಡ ಅವರು ರಫ್ ಸ್ಕಿನ್ ಆಗುತ್ತಾ ಇದ್ದಾರೆ ನಂಜಯ್ಯನಮಠ ಅವರು ಹೇಳಿದ ಒಂದು ವಿಷಯವನ್ನು ನಾನು ಸ್ಪಷ್ಟವಾಗಿ ಅನುಮೋದಿಸುತ್ತೇನೆ. ಬರಗಾಲ ಪೀಡಿತ ವಿಷಯದ ಬಗ್ಗೆ ಆಗಲಿ ಅಥವಾ ಅವಿಶ್ವಾಸದ ಬಗ್ಗೆಯೇ ಆಗಲಿ ಯೋಚನೆ ಮಾಡಿದರೆ ಇವು ಎರಡೂ ಒಂದಕ್ಕೊಂದಕ್ಕೆ ಸಾಮರಸ್ಯ ಹೊಂದಿದೆ. ಏಕೆಂದರೆ ವಿಜಾಪುರ ಡಿಸ್ಟ್ರಿಕ್ಟ್‌ನಲ್ಲಿ ಮಿನಿಸ್ಟರು ಹೋದಾಗ ತಹಸೀಲ್ದಾರರನ್ನು ತಮ್ಮ ಜೀಪಿನಲ್ಲಿ ಹಿಂದೆ ಕೂಡಿಸಿಕೊಳ್ಳುತ್ತಾರೆ ಎಂದು ಹೇಳಿದರು. ತಹಸೀಲ್ದಾರರು ಮಂತ್ರಿಗಳು ಮುಂದೆಯೇ ಕುಳಿತುಕೊಂಡಿರುತ್ತಾರೆ. ಮಿನಿಸ್ಟರನ್ನು ಕಾಣುವುದಕ್ಕೆ ಬಿಡುವುದಿಲ್ಲ. ಇದರ ಅರ್ಥ ಏನು? ಅದೇ ಅಧಿಕಾರಿಯ ಕೈಯಲ್ಲಿ ನಾವು ಇಷ್ಟು ಕೋಟಿ ರೂಪಾಯಿ ಹಣವನ್ನು ಕೊಡುತ್ತಾ ಇದ್ದೇವೆ. ಇದಲ್ಲದೇ ಕೇಂದ್ರದ ನೆರವನ್ನು ಪಡೆಯುತ್ತಾ ಇದ್ದೇವೆ. ಹಣಕಾಸು ಆಯೋಗದಿಂದ ಕೂಡ ಹಣ ಬರುತ್ತಾ ಇದೆ. ಕೇಂದ್ರದಿಂದ ಎಷ್ಟೋ ಬೇಡಿಕೊಂಡು ಹಣವನ್ನು ಸಾಲವಾಗಿ ಪಡೆದು ಕೊಂಡದ್ದೂ ಸಹ ಉಂಟು, ಇದನ್ನೆಲ್ಲ ಅವರ ಹತ್ತಿರ ಕೊಡಬೇಕಾಗಿದೆ. ನಾನು ಎಂ.ಎಲ್.ಎ ಆಗಿ ಶಿವಮೊಗ್ಗ ಜಿಲ್ಲೆಯಲ್ಲಿ ಮಿಡ್ ಡೆ ಮೀಲ್ಸ್ ಕೊಡುವುದಕ್ಕಾಗುವುದಿಲ್ಲ, ಔಷಧೋಪಚಾರಕ್ಕೆ ಹಣ ಹಂಚುವುದಕ್ಕಾಗುವುದಿಲ್ಲ, ರೋಗ ರುಜಿನ ಗಳು ಬಂದಾಗ ಔಷಧಿಗಳನ್ನು ಹಂಚುವುದಕ್ಕಾಗುವುದಿಲ್ಲ. ಇದನ್ನು ಯಾರ ಮೂಲಕ ಮಾಡಿಸಬೇಕು? ಸರ್ಕಾರದ ಮೆಷಿನರಿ ಏನಿದೆ ಅಧಿಕಾರ ವರ್ಗ ಏನಿದೆ ಅವರ ಕೈಯಲ್ಲಿ ಇದನ್ನು ಕೊಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಈ ಅಧಿಕಾರಿಗಳು ಸರಿಯಾಗಿ ಇದ್ದಾರೆಯೇ ಇಲ್ಲವೇ? ಅವರ ಹತ್ತಿರ ಹಣವನ್ನು ಕೊಡಬೇಕೇ ಬೇಡವೆ? ಕೊಡುವುದಕ್ಕೆ ಸಾಧ್ಯವಿಲ್ಲ ಎಂದಾಗ ಯಾವ ಯೋಜನೆಯನ್ನು ತಯಾರು ಮಾಡಬೇಕು ಅಥವಾ ಯಾವ ರೀತಿಯ ತೀರ್ಮಾನ ತೆಗೆದುಕೊಳ್ಳಬೇಕು ಎಂಬುದು ಬಹಳ ಮುಖ್ಯವಾದ ವಿಷಯ. ನಂಜಯ್ಯನಮಠ ಅವರು ಅದೇ ವಿಷಯ ಪ್ರಸ್ತಾಪ ಮಾಡಿದರು, ಸ್ಪಷ್ಟವಾಗಿ ಹೇಳಿದರು ತಹಸೀಲ್ದಾರರು ಹೇಳಿದ ಹಾಗೆ ಮಿನಿಸ್ಟರು ಕೇಳುತ್ತಾರೆ ಎಂದು. ಬರಗಾಲ ಪರಿಹಾರದ ವಿಷಯ ಬಂದಾಗ ತಹಸೀಲ್ದಾರರ ಕೈಯಲ್ಲಿ ಹಣ ಕೊಡ ಬೇಕಾಗುತ್ತದೆ, ಅಸಿಸ್ಟೆಂಟ್ ಕಮಿಷನರ ಕೈಯಲ್ಲಿ ಕೊಡಬೇಕಾಗುತ್ತದೆ. ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

"In order to strengthen the hands of the Deputy Commissioners and to start relief works without delay, an allotment of Rs. 2 crores in addition to budget allotment or Rs. 1.5 crores has been authorised."

(ಶ್ರೀ ಎಸ್. ಬಂಗಾರಪ್ಪ)

ಎರಡುಕೋಟಿ ರೂಪಾಯಿಗಳನ್ನು ಸರ್ಕಾರದವರು ತೆಗೆದಿಟ್ಟಿದ್ದಾರೆ, ಬಹಳ ಸಂತೋಷದ ವಿಷಯ. ಇದಿಷ್ಟೇ ಸಾಲದು, ಕೇಂದ್ರದ ನೆರವು ಕೂಡ ಕೇಳಿದ್ದೇವೆ. ಇದನ್ನೂ ಕೂಡ ಅವರ ಹತ್ತಿರ ಕೊಡುತ್ತೇವೆ. ಡಿ. ಸಿ ಕೈಯಲ್ಲಿ, ತಹಶೀಲ್ದಾರರ ಕೈಯಲ್ಲಿ, ಅಸಿಸ್ಟೆಂಟ್ ಕಮಿಷನರ ಕೈಯಲ್ಲಿ, ಪಿ ಡಬ್ಲ್ಯು ಡಿ ಅವರ ಕೈಯಲ್ಲಿ ಕೊಡುತ್ತೇವೆ. ಅವರು ಹೇಗೆ ಇದ್ದಾರೆ ಅಂತ ಅನ್ನುವುದು ಅಧ್ಯಕ್ಷರಿಗೆ ಗೊತ್ತು. ಮಿನಿಸ್ಟರುಗಳಿಗಂತೂ ಬಹಳ ಚೆನ್ನಾಗಿ ಗೊತ್ತು. ಏಕೆಂದರೆ ನಮಗಿಂತಲೂ ಅವರು ಅನುಭವಸ್ಥರು. ಅವರಿಗೂ ಹೇಳುವುದಕ್ಕೆ ಬೇಕಾದಷ್ಟು ಮನಸ್ಸಿನಲ್ಲಿ ಇದೆ, ಆದರೆ ಹೇಳುವುದಕ್ಕೆ ಆಗುತ್ತಿಲ್ಲ, ಏಕೆಂದರೆ ಆ ಜಾಗದಲ್ಲಿ ಕುಳಿತಿದ್ದಾರೆ. ಈಗ ಶಿವಮೊಗ ಡಿಸ್ಟ್ರಿಕ್ಟ್ ವಿಷಯ ನಾನು ಹೇಳುತ್ತೇನೆ ೨ ಲಕ್ಷದ ೪೦ ಸಾವಿರ ರೂಪಾಯಿ ಅಲ್ಲಿಗೆ ಅಲಾಟ್‌ಮೆಂಟ್ ಆಗಿದೆ. ಇನ್ ಆರ್ಡರ್ ಟು ಸ್ಟ್ರೆಂಗ್ತನ್ ದಿ ಹ್ಯಾಂಡ್ಸ್ ಆಫ್ ದಿ ಡೆಪ್ಯೂಟಿ ಕಮಿಷನರ್ಸ್ ಅಂತ ಹೇಳಿ ಇಲ್ಲಿ ತಾವು ಹೇಳಿದ್ದೀರಿ. ಇದರ ಅರ್ಥ ಏನು, ಶಿವಮೊಗ್ಗ ಜಿಲ್ಲೆಯ ಡೆಪ್ಯೂಟಿ ಕಮಿಷನರು ಆದಿರಾಜಯ್ಯ ಅಂತ ಹೇಳಿ ಒಬ್ಬ ಮಹಾಪುರುಷರು ಇದ್ದಾರೆ, ಬೆಂಗಳೂರು ಡೈರಿ ಹಾಳು ಮಾಡಿದವರು, ಈಗಾಗಲೇ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು 'The Deputy Commissioaer has joined hands with vested interests.' ಅಂತ ಹೇಳಿ ಅವರ ರಿಪೋರ್ಟಿನಲ್ಲಿ ಈಗಾಗಲೇ ಅವರು ಬರೆದಿದ್ದಾರೆ. ಅಂತಹ ಡೆಪ್ಯೂಟಿ ಕಮಿಷನರ ಹ್ಯಾಂಡ್ಸ್ ತಾವು ಸ್ಟ್ರೆಂಗ್ತನ್ ಮಾಡುತ್ತಾ ಇದ್ದೀರಿ. ೨ ಲಕ್ಷದ ೪೦ ಸಾವಿರ ರೂಪಾಯಿಗಳನ್ನು ಕೊಟ್ಟು ಅವರ ಕೈಯನ್ನು ಬಲಮಾಡುತ್ತಾ ಇದ್ದೀರಿ. ಹೀಗಿರುವಾಗ ಈ ಹಣ ಬಡವರಿಗೆ ತಲುಪುತ್ತದೆ ಎಂದು ಯಾವ ಧೈರ್ಯದಿಂದ ಹೇಳಬಹುದು? ಅಂತಹ ವ್ಯಕ್ತಿಗೆ ಹಣ ಕೊಡಬೇಕೇ ಬೇಡವೇ? ನಂಜಯ್ಯನಮಠ ಅವರೂ ಕೂಡ ಇದೇ ವಿಷಯ ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಅಧಿಕಾರಿಗಳು ಸರಿಯಾಗಿದ್ದರೆ ಮಾತ್ರ ಹಣವನ್ನು ಕೊಡಬೇಕು. ಎಲ್ಲಾ ಅಧಿಕಾರಿಗಳೂ ಕೂಡ ಕೆಟ್ಟವರು ಎಂದು ನಾನು ಹೇಳುವುದಿಲ್ಲ ಒಳ್ಳೆಯ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುವವರು ಇದ್ದಾರೆ. ಯಾವ ರೀತಿ ಅವರಿಂದ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ, ಇದನ್ನು ಬಗೆಹರಿಸತಕ್ಕ ದಾರಿ ಏನು ಎಂಬುದನ್ನು ಮಾನ್ಯ ಕೌಜಲಗಿಯವರು ಮತ್ತು ಸರ್ಕಾರದ ಜವಾಬ್ದಾರಿಯನ್ನು ಹೊತ್ತಿರತಕ್ಕವರು ಯೋಚನೆ ಮಾಡಬೇಕು. ಇಲ್ಲದೇ ಹೋದರೆ ೭೨ರ ಚುನಾವಣೆಯಹೊತ್ತಿಗೆ ಇದೆಲ್ಲಾ ಸರಿಹೋಗುತ್ತದೆ. ಅಲ್ಲಿಯವರೆಗೂ ಈ ಸಮಸ್ಯೆಯನ್ನು ಹೀಗೆಯೇ ಬಿಡುವುದಕ್ಕಾಗುವುದಿಲ್ಲ. ಇದಕ್ಕೆ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ.

೧೯೬೭ನೇ ಸಾಲಿನಿಂದ ಹೇಳುತ್ತಾ ಇದ್ದೇನೆ ಅಂಡರ್‌ಗ್ರೌಂಡ್ ವಾಟರ್ ಟ್ಯಾಪ್ ಮಾಡಬೇಕು. ಮಳೆ ಹೆಚ್ಚಾಗಿ ಆಗಬಹುದು, ಅಥವಾ ಕಡಿಮೆಯಾಗಿ ಆಗಬಹುದು. ಇದರ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಟ್ಟಿಲ್ಲ. ಮಳೆ ಬರದೇ ಹೋದಾಗ ನೂರಕ್ಕೆ ಐವತ್ತರಷ್ಟಾದರೂ ಇದರ ಉಪಯೋಗವನ್ನು ಪಡೆದು ಕೊಳ್ಳುವುದಕ್ಕೆ ಸಾಧ್ಯವಿದೆ ಆದ್ದರಿಂದ ರಾಜ್ಯಸರ್ಕಾರದವರು ಕೂಡಲೇ ಇದರ ಕಡೆಗೆ ಗಮನ ಕೊಡಬೇಕು. ಕೊಳವೆ ಬಾವಿಗಳನ್ನು ವ್ಯವಸ್ಥೆ ಮಾಡುವುದಕ್ಕೆ ನಿಗಾ ಕೊಡಬೇಕೆಂದು ಹೇಳುತ್ತೇನೆ. ಇನ್ನು ಯಾವ ಯಾವ ಜಿಲ್ಲೆಯಲ್ಲಿ ಗಂಜಿ ಕೇಂದ್ರಗಳನ್ನು ತೆಗೆಯತಕ್ಕ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಗಂಜಿ ಕೇಂದ್ರಗಳನ್ನು ತೆಗೆಯ ಬೇಕು. ೨ ಕೋಟಿ ರೂಪಾಯಿಗಳಲ್ಲಿ ಬರೀ ರಸ್ತೆಗಳನ್ನು ಮಾಡಿ ಬರಗಾಲದ ಕಾಮಗಾರಿಗಳನ್ನು ಮಾಡಿದರೆ ಅಷ್ಟೇ ಸಾಲದು ಗಂಜಿ ಕೇಂದ್ರಗಳನ್ನು ತೆರೆದು ಬಡವರಿಗೆ ಗಂಜಿ ಸಿಕ್ಕುವ ಹಾಗೆ, ಒಂದು ಯೋಜನೆಯನ್ನುಮಾಡಬೇಕೆಂದು ಹೇಳುತ್ತೇನೆ. ಇನ್ನು ಹೆಚ್ಚು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ ಅಧಿಕಾರಿಗಳ ಬಗ್ಗೆ ಶ್ರೀಮಾನ್ ಕೌಜಲಗಿಯವರು ಶಿವ ಕಣ್ಣು ಬಿಟ್ಟುಕೊಂಡು ನೋಡುತ್ತಾ ಇರುವ ಹಾಗೆ ಯಾವಾಗಲೂ ಅವರ ಮೇಲೆ ಕಣ್ಣಿಟ್ಟು ನೋಡುತ್ತಾ ಇರಬೇಕು. ಒಳ್ಳೆಯಜನ ಇದ್ದರೆ ಅವರಿಗೆ ಸಪೋರ್ಟ್ ಮಾಡುತ್ತೇನೆ ನನಗೆ ಕೆಟ್ಟವರನ್ನು ಕಂಡರೆ ಆಗುವುದಿಲ್ಲ. ಅಧಿಕಾರಿಗಳು ತಪ್ಪು ಮಾಡಿದರೆ ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಡಬೇಕು, ಇಲ್ಲದಿದ್ದರೆ ಕಾನೂನು ಪ್ರಕಾರ ಡಿಸ್‌ಮಿಸ್ ಮಾಡಬೇಕು ಎಂದು ಹೇಳುತ್ತೇನೆ, ಇಷ್ಟುಹೇಳಿ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ಎನ್. ರಾಮಣ್ಣ (ತುರುವೇಕೆರೆ) :—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರೆವಿನ್ಯೂ ಸಚಿವರು ರಾಜ್ಯದ ಅಭಾವ ಪರಿಸ್ಥಿತಿ ಬಗ್ಗೆ ಈ ಸದನದ ಮುಂದೆ ಒಂದು ರಿಪೋರ್ಟನ್ನು ಇಟ್ಟಿದ್ದಾರೆ. ಈ ರಿಪೋರ್ಟಿನಲ್ಲಿ ತುಮಕೂರು ಜಿಲ್ಲೆಯ ಕೆಲವು ಭಾಗಗಳನ್ನು ಮಾತ್ರ ಸೇರಿಸಿದ್ದಾರೆ. ತಿಪಟೂರು, ಚಿಕ್ಕನಾಯಕನ ಹಳ್ಳಿಯನ್ನು ಈ ರಿಪೋರ್ಟಿನಲ್ಲಿ ಸೇರಿಸಿಲ್ಲ. ಮಂತ್ರಿಗಳು ತುಮಕೂರು ಜಿಲ್ಲೆಯಲ್ಲಿ ಮಾತ್ರ ಪ್ರವಾಸ ಮಾಡಿದ್ದರಿಂದ ಬೇರೆ ಜಿಲ್ಲೆಗಳ ಸ್ಪಷ್ಟವಾದ ಚಿತ್ರ ಅವರ ಮನಸ್ಸಿಗೆ ಬರಲಿಲ್ಲವೋ ಏನೋ ಎಂದು ನಾನು ಭಾವನೇ ಮಾಡುತ್ತೇನೆ. ಆದರೆ ಇವೊತ್ತಿನ ದಿವಸ ಎಲ್ಲಾ ಜಿಲ್ಲೆಗಳಲ್ಲೂ ಅಭಾವ ಪರಿಸ್ಥಿತಿ ಕಂಡು ಬರುತ್ತಾ ಇದೆ. ಆದರೆ ಪ್ರತಿ ವರ್ಷವೂ ಸೆಪ್ಟಂಬರ್ ತಿಂಗಳಲ್ಲಿ ಮಾನ ಸಭೆಯಲ್ಲಿ ನಾವು ಕ್ಷಾಮ ಬಂತು ಕ್ಷಾಮ ಬಂತು ಎಂದು ಹೇಳುವುದು ರೂಢಿಯಾಗಿದೆ. ಆದರೆ ನಾನು ಈಗ ಈ ಮಾನ್ಯ ಸಭೆಯ ಸದಸ್ಯನಾದ

ವೇಲೂ ಮೂರು ವರ್ಷಗಳಿಂದ ಚರ್ಚೆ ಮಾಡುತ್ತಲೇ ಇದ್ದೇವೆ. ಇಷ್ಟು ವರ್ಷಗಳ ಅವಧಿಯಲ್ಲಿ ಏನಾದರೂ ಕೆಲಸಕಾರ್ಯಗಳನ್ನು ಮಾಡಿದ್ದೇವೆ ಎಂದರೆ ಏನೂ ಇಲ್ಲ ಎಂದು ನನಗೆ ಅನ್ನಿಸುತ್ತದೆ.

ಇವೊತ್ತಿನ ದಿವಸ ಸಣ್ಣ ಪುಟ್ಟ ಕೆಲಸಗಳನ್ನು ಮಾಡುವುದಕ್ಕೆ ಕ್ಷಾಮದ ಫಂಡಿನಿಂದ ದುಡ್ಡನ್ನು ಕೊಟ್ಟಿದ್ದಾರೆ. ಇದರಿಂದ ಯಾವುದೇ ವಿಧವಾದ ಪ್ರಯೋಜನವಾಗಲಾರದು. ಇವೊತ್ತು ಬೇಕಾದಷ್ಟು ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಮಾಡತಕ್ಕಂಥ ಒಂದು ಅವಕಾಶ ಇದ್ದರೂ ಕೂಡ ಅದಕ್ಕೆ ಸರಕಾರ ಮನಸ್ಸು ಕೊಡುತ್ತಾ ಇಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಎರಡು ಲಕ್ಷ ಮೂರು ಲಕ್ಷ ಖರ್ಚು ಮಾಡಿ ಶಾಶ್ವತವಾದ ಪರಿಹಾರ ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈ ದೇಶದಲ್ಲಿ ಇರತಕ್ಕಂಥ ಏಗಡು ಕೋಟಿ ಪ್ರಜಾಸಂಖ್ಯೆಗೂ ಕೆಲಸ ಕೊಡುವುದಕ್ಕೆ ಸರ್ಕಾರದವರಿಂದ ಸಾಧ್ಯವಾಗುವುದಿಲ್ಲ. ದುಡ್ಡನ್ನು ಕೇಂದ್ರ ಸರಕಾರದವರೇ ಕೊಟ್ಟಿರಲಿ ಅಥವಾ ರಾಜ್ಯ ಸರಕಾರದವರೇ ಕೊಟ್ಟಿರಲಿ ಆ ದುಡ್ಡು ನಮ್ಮದು. ಹೆಡ್‌ನಿಂದ ಈಗಾಗಲೇ ಅನೇಕ ಸ್ನೇಹಿತರುಗಳು ಹೇಳಿದಹಾಗೆ ರಿಲೀಫ್–ಫ್ಯಾಮಿನ್ ಏನು ದುಡ್ಡು ಕೊಡುತ್ತಾರೆ ಅದರಲ್ಲಿ ಅರ್ಧ ಭಾಗದ ಹಣವೆಲ್ಲಾ ಹೊರಟುಹೋಗುತ್ತಿದೆ. ಮೇಲಿನಿಂದ ಹಿಡಿದು ಕೆಳಗಿನ ಅಧಿಕಾರಿಗಳು, ಎಂದರೆ ಏಜೆಂಟರು, ಸಬ್ ಇಂಜಿನಿಯರ್‌ಗಳು, ಅಕೌಂಟ್ಸ್ ಕ್ಲಾರ್ಕ್ಸ್ ಯಾರೇ ಆಗಲೀ ಸರಕಾರದ ಆದೇಶದಂತೆ ಮಣ್ಣಿನ ಕೆಲಸ ಮಾಡುವ ಕೂಲಿಗಾರನಿಗೆ ಒಂದು ರೂಪಾಯಿ ಮೂವತ್ತು ಪೈಸೆ ಕೊಡಬೇಕೆಂದು ಸರ್ಕಾರಿ ಆಜ್ಞೆ ಇದೆ. ಇದನ್ನು, ಎಲ್ಲಿಯಾದರೂ ಕೊಟ್ಟಿರುವ ನಿದರ್ಶನ ತೋರಿಸಿ ಎಂದರೆ ಸಾಧ್ಯವಿಲ್ಲ. ಈ ರೀತಿ ದುಡ್ಡನ್ನು ಖರ್ಚು ಮಾಡುವ ಬದಲು ಮೈನರ್ ಇರಿಗೇಷನ್‌ಗೆ ಈ ದುಡ್ಡು ಹಾಕಿದರೆ ಅದರಿಂದ ಪ್ರತಿಫಲ ಸಿಕ್ಕುತ್ತದೆ. ಸಣ್ಣ ಪುಟ್ಟ ನೀರಾವರಿಗೆ ಹೆಚ್ಚಿನ ದುಡ್ಡು ಕೊಟ್ಟು ಕೆರೆಗಳ ಕೆಲಸ ಕಾಮಗಾರಿಗಳನ್ನು ಮಾಡಿಸಿದರೆ ಸ್ವಲ್ಪ ಶಾಶ್ವತವಾದ ಒಂದು ಪರಿಹಾರ ಕಾರ್ಯವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗಲಾದರೂ ಕೂಡ ಈಗ ಒದಗಿಸಿರತಕ್ಕಂಥ ದುಡ್ಡಿನಲ್ಲಿ ಕೆಲವು ಅಂಶವನ್ನು ನೀರಾವರಿ ಕಾಮಗಾರಿಗಳಿಗೆ ಉಪಯೋಗಿಸುವುದು ಒಳ್ಳೆಯದೆಂದು ಹೇಳುತ್ತೇನೆ. ಎರಡನೆಯದಾಗಿ ನಾವು ನೋಡುತ್ತಾ ಇರುವುದೇನೆಂದರೆ ದೇಶದಲ್ಲಿ ಅಭಾವ ಪರಿಸ್ಥಿತಿ ಬಂದಾಗ ಎಲ್ಲಾ ಇಲಾಖೆಯವರೂ ಸೇರಿ ತಮ್ಮ ತಮ್ಮ ಇಲಾಖೆಯಲ್ಲಿ ಖರ್ಚು ಮಾಡತಕ್ಕಂಥ ಹಣವನ್ನು ಹಾಕಿ ಶಾಶ್ವತವಾದಂಥ ಕೆಲಸಗಳನ್ನು ಮಾಡಿಸಬೇಕು. ಇಂಜನಿಯರಿಂಗ್ ಇಲಾಖೆಯವರಾಗಲಿ, ಅಥವಾ ಸಾಯಿಲ್ ಕನ್‌ಸರ್‌ವೇಷನ್ ಇಲಾಖೆಯವರಾಗಲಿ ಯಾಕೆ ಮುಂದೆ ಬಂದು ಕೆಲಸ ಮಾಡಿಸುವುದಿಲ್ಲ ಎಂಬುದು ನನಗೆ ಅರ್ಥವಾಗುವುದಿಲ್ಲ. ಹಣವನ್ನು ಕೊಡುವವರು ಯಾರು ? ಎಲ್ಲಾ ಹಣವನ್ನೂ ಸೇರಿಸಿ ಕೆಲಸ ಮಾಡಿದರೆ ಮಾತ್ರ ಅಭಾವ ಪರಿಸ್ಥಿತಿಯನ್ನು ನಿವಾರಣೆ ಮಾಡುವುದಕ್ಕಾಗುತ್ತದೆಯೇ ವಿನಹ ಒಬ್ಬರಿಂದ ಮಾಡುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಹೇಳುವುದಾದರೆ ೧೯೬೯–೭೦ರಲ್ಲಿ ಮಂಜೂರಾದ ಕೆರೆಗಳು ಇವೆ. ೧೯೬೮–೬೯ನೇ ಸಾಲಿನಲ್ಲಿ ಮಂಜೂರಾದ ಕೆರೆಗಳು ಇವೆ. ಕೆಲವು ಬಜೆಟಿನಲ್ಲಿ ಸೇರಿಸಿದ ಕೆರೆಗಳು ಇದೆ. ಸರಕಾರದವರು ಇದನ್ನೆಲ್ಲಾ ಪರಿಶೀಲನೆ ಮಾಡಿ ಕ್ಷಾಮ ಪರಿಹಾರಕಾರ್ಯಗಳಿಗೆ ಉಪಯೋಗವಾಗುವಂತೆ ಮಾಡಬೇಕು. ರೆವಿನ್ಯೂ ಇಲಾಖೆಯ ಹೊಣೆ ಎಂದು ಹೇಳುವುದು ಸರಿಯಲ್ಲ. ಎಲ್ಲಾ ಇಲಾಖೆಯ ಅಧಿಕಾರಿಗಳೂ ಕೂಡ ಸೇರಿ ಈ ಕೆಲಸವನ್ನು ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಈಗಲೂ ಕೂಡ ಸರಕಾರ ೧೯೬೮–೬೯ ಮತ್ತು ೧೯೬೯–೭೦ನೇ ಸಾಲಿನಲ್ಲಿ ಮಂಜೂರು ಮಾಡಿದಂತಹ ಅಭಿವೃದ್ಧಿ ಕಾರ್ಯಗಳನ್ನು ತಕ್ಷಣ ಮಾಡಿದರೆ ಸ್ವಲ್ಪ ಮಟ್ಟಿಗೆ ಸಹಾಯ ಮಾಡಿದಂತಾಗುತ್ತದೆ. ಮತ್ತು ವ್ಯವಸಾಯ ಮಾಡುವವರಿಗೆ ಅನುಕೂಲವಾಗುತ್ತದೆ.

ಇನ್ನು ಮೂರನೆಯದಾಗಿ ಈ ಕೆಲಸ ಮಾಡತಕ್ಕ ಏಜೆನ್ಸಿ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದಾರೆ. ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿರುವುದರಿಂದ ಬಹಳ ದುಷ್ಪರಿಣಾಮವಾಗುತ್ತಾ ಇದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಮೊದಲಾದರೆ ಯಾರಾದರೂ ಒಬ್ಬರೇ ಅಧಿಕಾರಿಗಳು ಕೆಲಸ ಮಾಡಿಸುತ್ತಾ ಇದ್ದರು. ಏನಾದರೂ ಹೆಚ್ಚು ಕಡಿಮೆ ಆದರೆ ಆ ಅಧಿಕಾರಿಗಳನ್ನು ಕೇಳತಕ್ಕಂಥ ಪರಿಸ್ಥಿತಿ ಇತ್ತು. ಈವೊತ್ತಿನ ದಿವಸ ಅಭಿವೃದ್ಧಿ ಮಂಡಲಿಗಳಿಗೆ ಕೊಟ್ಟು ಅವರು ಏನು ಮಾಡುತ್ತಾರೆ ಎನ್ನತಕ್ಕಂಥದ್ದನ್ನು ಕೇಳುವವರೇ ಇಲ್ಲದಿರುವ ಪರಿಸ್ಥಿತಿಗೆ ಬಂದಿದೆ. ಇದಕ್ಕೆ ಕಾರಣವಾದರೂ ಇಷ್ಟೇ. ಕೆಲಸ ಮಾಡುವಾಗ ಕೆಲಸವನ್ನು ಪೂರ್ತಿಯಾಗಿ ಮಾಡುವುದಕ್ಕೆ ಯಾರಾದರೂ ಸರಕಾರದ ಏಜೆನ್ಸಿಗಳು ಇದ್ದರೆ ಅಥವಾ ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್‌ನವರು ಆರ್ಡರ್ ಆಫ್ ಪ್ರಿಯಾರಿಟಿ ಮೇಲೆ ಕೆಲಸ ಮಾಡಿಸಬಹುದು. ಇಲ್ಲದಿದ್ದರೆ ಸುಮ್ಮನೆ ೫೦೦ ರೂಪಾಯಿ ಕೊಟ್ಟು ಮಣ್ಣಿನ ಕೆಲಸ ಮಾಡಿಸುತ್ತೇವೆ ಎಂದು ಹೇಳಿ ಮಣ್ಣು ಹಾಕಿಸುವುದು ಇದೆ ಮಣ್ಣು ಹಾಕಿದ ಕೂಡಲೇ ಮಳೆ ಬಂದು ಎಲ್ಲಾ ಕೊಚ್ಚಿಕೊಂಡು ಹೋಗಿರುತ್ತದೆ. ಇಂತಹ ಕೆಲಸ ಮಾಡಬಾರದು ಎಂದು ಹೇಳುತ್ತೇನೆ. ಕೆಲಸ ಮಾಡುವ ಪೂರ್ವದಲ್ಲಿ ಸರಿಯಾಗಿ ಆಲೋಚನೆ ಮಾಡಿ ದುಡ್ಡು ಸರಿಯಾದಂಥ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

(ಶ್ರೀ ಎಂ. ಎಸ್. ರಾಮಣ್ಣ)

ಕೊನೆಯದಾಗಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ತಿಪಟೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ ಬಹಳ ಕಾಲದಿಂದಲೂ ಕೂಡ ಅಭಾವ ಪರಿಸ್ಥಿತಿಗೆ ತುತ್ತಾಗಿರತಕ್ಕಂಥ ಪ್ರದೇಶಗಳು. ಜೊತೆಗೆ ಸಣ್ಣಪುಟ್ಟ ನೀರಾವರಿ ಯೋಜನೆಗಳನ್ನು ಬಿಟ್ಟರೆ ಬೇರೆ ಯಾವ ಯೋಜನೆಯೂ ಇಲ್ಲ. ಅನೇಕ ವರ್ಷಗಳಿಂದ ತಿಪಟೂರು ಮತ್ತು ತುರುವೇಕೆರೆಗಳಿಗೆ ನೀರನ್ನು ಒದಗಿಸುವ ಯೋಜನೆಯು ಸರಕಾರದ ಮುಂದೆ ಇದೆ. ಬರಗಾಲ ಬಂದಾಗ ಇಂತಹ ದುಡ್ಡನ್ನು ಉಪಯೋಗ ಮಾಡಿ ಜನಗಳಿಗೆ ಅನುಕೂಲ ವಾಗುವಂಥ ಕೆಲಸಗಳನ್ನು ಮಾಡಿಸಬೇಕು. ಹಿರಿಯರು ಹೇಳಿದ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಕಾಲದಲ್ಲಿ ಹೀಗೆ ಕ್ಷಾಮ ಬಂದಾಗ ಹಾಸನ ಅರಸೀಕೆರೆ ರೈಲ್ವೆ ರಸ್ತೆಯ ಕೆಲಸವನ್ನು ಮಾಡಿಸಿದ್ದರು. ಇದರಿಂದಾಗಿ ಮೈಸೂರು ನಡುವೆ ರೈಲು ಓಡಾಡುವಂತೆ ಶಾಶ್ವತವಾದ ಕೆಲಸವನ್ನು ಮಾಡಿಸಿದ್ದಾರೆ. ಎಲ್ಲರಿಗೂ ಮನೆ ಮುಂದೆ ಕೆಲಸಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಕೊಟ್ಟಂಥ ದುಡ್ಡು ಸಾರ್ಥಕವಾಗಬೇಕಾದರೆ ಉತ್ತಮವಾದ ಕೆಲಸಗಳನ್ನು ಮತ್ತು ಶಾಶ್ವತವಾದಂಥ ಕೆಲಸಗಳನ್ನು ಮಾಡಬೇಕು. ಉದಾಹರಣೆಗೆ ಹೇಳುವುದಾದರೆ ತುರುವೇಕೆರೆ ಕುಣಿಗಲ್ ತಾಲ್ಲೂಕಿನಲ್ಲಿ ಶಿಂಷಾ ನದಿ ಸದಾಕಾಲದಲ್ಲಿಯೂ ಹರಿಯುತ್ತಾ ಇರುತ್ತದೆ. ಇಲ್ಲಿ ಐ ಪಿ. ಸೆಟ್ಟುಗಳನ್ನು ಹಾಕಿ ರೈತರಿಗೆ ಅನುಕೂಲಗಳನ್ನು ಮಾಡಿಸಿಕೊಡಬಹುದು. ಆದರೆ ಅದನ್ನು ಮಾಡುವುದಿಲ್ಲ.

ಐ. ಪಿ. ಸೆಟ್ಟುಗಳನ್ನು ಲಿಫ್ಟ್ ಇರ್ರಿಗೇಷನ್ ಸ್ಕೀಮುಗಳಿಗೆ ಕುಣಿಗಲ್ ತಾಲ್ಲೂಕ್ ಮತ್ತು ತುರುವೇಕೆರೆ ತಾಲ್ಲೂಕುಗಳಿಗೆ ಕಳುಹಿಸುತ್ತೇವೆಂದು ಹೇಳಿದ್ದರು. ಆದರೂ ೬ ವರ್ಷಗಳಿಂದಲೂ ಅದನ್ನು ಮಂಜೂರು ಮಾಡಲಿಲ್ಲ. ಕಾರಣ ಫೀಜಿಬಲಟೆ ಇಲ್ಲವೆಂದು ಹೇಳುತ್ತಾರೆ. ಒಂದು ಎಕರೆಗೆ ೨೫೦ ರೂಪಾಯಿ ಗಳು ಜಾಸ್ತಿಯಾಗುತ್ತದೆಂದರೆ ಸರ್ಕಾರಕ್ಕೆ ಏನು ಲುಕ್ಸಾನು ಆಗುತ್ತದೋ ನನಗಂತೂ ಅರ್ಥವಾಗುವುದಿಲ್ಲ. ಆ ಸ್ಕೀಮುಗಳನ್ನು ಸಿರಾ, ಪಾವಗಡ ಮತ್ತು ಚಿಕ್ಕನಾಯಕನಹಳ್ಳಿಗೆ ತರಬೇಕೆಂದು ಮಾಡಿದ್ದಾರೆ. ಈಗ ಅದನ್ನು ಮೊಳಕಾಲ್ಮೂರುವಿಗೂ ತೆಗೆದುಕೊಂಡು ಹೋಗುತ್ತೇವೆಂದು ಹೇಳುತ್ತಾರೆ. ಸಿರಾ, ಮತ್ತು ಪಾವಗಡ ತಾಲ್ಲೂಕುಗಳು ಹಾಗೂ ತುಮಕೂರಿನ ಇತರ ತಾಲ್ಲೂಕುಗಳು ಬಹಳ ಕಷ್ಟದ ಪರಿಸ್ಥಿತಿಯಲ್ಲಿವೆ ಮಾಳಕಾಲು ರುವಿಗೆ ಅಲ್ಲಿಂದ ಬರುವ ನೀರನ್ನು ತೆಗೆದುಕೊಂಡು ಅಲ್ಲಿ ಆ ಯೋಜನೆಯನ್ನು ಮಾಡುತ್ತೇವೆಂದು ಹೇಳಿದರೆ ನಿಜವಾಗಿ ಅದು ಬಹಳ ದಡ್ಡತನ.

3-30 P. M.

ಶ್ರೀ ಬಿ. ಗಂಗಣ್ಣ :—ಅಲ್ಲಿ ಬರಗಾಲ ಇಲ್ಲವೇ ?

ಶ್ರೀ ಎಂ. ಎಸ್. ರಾಮಣ್ಣ :—ನಾನು ಏತಕ್ಕೆ ಈ ಪ್ರಶ್ನೆಯನ್ನು ಹೇಳುತ್ತಿದ್ದೇನೆ ಎಂದರೆ, ಮೊಳಕಾಲ್ಮೂರುವಿಗೆ ನೀರು ಕೊಡಬೇಡಿ ಎಂದು ಹೇಳುವುದಿಲ್ಲ. ತುಮಕೂರು ಜಿಲ್ಲೆಯವರಿಗೆ ಬರುವ ನೀರನ್ನು ತಪ್ಪಿಸಿ ಮೊಳಕಾಲ್ಮೂರುವಿಗೆ ಕೊಡಿ ಎಂದು ಹೇಳುವುದು ಧರ್ಮವಲ್ಲ. ಮಂತ್ರಿಗಳು ಇದನ್ನು ಡ್ರಾಪ್ ಮಾಡಿ ಬೇರೆ ಸರ್ವೆ ಮಾಡಿ ಎಂದು ಹೇಳಿದ್ದೇನೆ, ಈ ರೀತಿ ಮಾಡಿದರೆ ಬಹಳ ನ್ಯಾಯವಾಗಿರುತ್ತದೆ.

ಕಡೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ಬೇಕಾದಷ್ಟು ಬಾವಿಗಳಿವೆ. ತುಮಕೂರು ಜಿಲ್ಲೆಯಲ್ಲಿ ಸುಮಾರು ೧೧ ಸಾವಿರ ಬಾವಿಗಳಿವೆ. ಅನೇಕ ಬಾವಿಗಳನ್ನು ಈಗ ಆಳಪಡಿಸಬೇಕು. ಒಂದು ಬೋರಿಂಗ್ ಮಿಷನ್‌ಬೇಕೆಂದು ಹೇಳಿದರೆ ೩-೪ ವರ್ಷಗಳವರೆಗೂ ಕೊಡುವುದಿಲ್ಲ. ಇವನ್ನು ಸಪ್ಲೈ ಮಾಡುವ ಕೆಲಸವನ್ನು ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಕೊಟ್ಟಿದ್ದಾರೆ. ಆ ಕಾರಣದಿಂದ ನಮ್ಮ ಜವಾಬ್ದಾರಿಯಾಯಿತು ಎಂದು ಹೇಳಿದರೆ ಹೇಗೆ ? ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಬೇಕಾದಂಥ ಮೆಷನರಿ, ಸಿಬ್ಬಂದಿ, ಸಾಲದು. ಆದ್ದರಿಂದ ರೈತರಿಗೆ ಹಿಂದೆ ಅವರು ಸಪ್ಲೈ ಮಾಡತಕ್ಕ ಮೆಷಿನರಿಗಳಿಗೆ ಏನು ದರವನ್ನು ಹಾಕುತ್ತಿದ್ದರೋ ಈಗ ಅದಕ್ಕಿಂತ ಜಾಸ್ತಿ ಮಾಡಿದ್ದಾರೆ. ಈ ಸಂಸ್ಥೆ ನಷ್ಟ ಮತ್ತು ಲಾಭ ಏನೂ ಇಲ್ಲದೆ ನಡೆಸಬೇಕು. ಎಂದರೆ ರೇಟ್ ಜಾಸ್ತಿ ಹಾಕುವ ಕೆಲವು ಸಂದರ್ಭಗಳು ಬರುತ್ತದೆ. ಸರ್ಕಾರ ಹಿಂದೆ ರೈತರಿಗೆ ಒಂದು ಅಡಿಗೆ ೬ ರೂಪಾಯಿಗಳಂತೆ ಒಂದು ದರವನ್ನು ಹಾಕುತ್ತಿದ್ದರು. ಅದರಂತೆಯೇ ಇವರೂ ಸಹ ದರವನ್ನು ನಿಗದಿ ಮಾಡಬೇಕೆಂದು ಹೇಳಬೇಕು. ಯಾವ್ಯಾವುದೋ ಸಂಸ್ಥೆಗಳಿಗೆ ಸಬ್ಸಿಡಿ ಕೊಡುತ್ತಿದ್ದೀರಿ. ಸಿನಿಮಾ ಕಂಪೆನಿಯವರಿಗೆ ಸಬ್ಸಿಡಿ ಕೊಡುತ್ತಿದ್ದೀರಿ. ಆದರೆ ಈ ದೇಶದಲ್ಲಿ ಇರುವ ಜನಗಳಿಗೆ ಆಹಾರ ಬೆಳೆಯುವುದಕ್ಕೆ ಇಷ್ಟು ವರ್ಷಗಳಾದರೂ ಸಬ್ಸಿಡಿ ಕೊಡುವುದಿಲ್ಲವೆಂದು ಹೇಳಿದರೆ ಇದಕ್ಕಿಂತ ಅನ್ಯಾಯ ಯಾವುದೂ ಇಲ್ಲ.

ಶ್ರೀ ಎಚ್. ಸಿದ್ಧವೀರಪ್ಪ :—ಆದರೂ ತಾವು ಅವರನ್ನೇ ಸಪೋರ್ಟ್ ಮಾಡುತ್ತೀರಿ.

ಶ್ರೀ ಎಂ. ಎನ್. ರಾಮಣ್ಣ :—ಮಾನ್ಯ ಹಿರಿಯರಾದಂಥ ಶ್ರೀ ಸಿದ್ಧವೀರಪ್ಪನವರು ಇದ್ದಾಗಲೂ ಹೀಗೆಯೇ ಹೇಳುತ್ತಿದ್ದೆ. ಆಗಲೂ ಸಪೋರ್ಟ್ ಮಾಡುತ್ತಿದ್ದೆ.

ಶ್ರೀ ಎಚ್. ಸಿದ್ಧವೀರಪ್ಪ :—ನಾವು ಈ ರೀತಿ ಬೈಯ್ಯಿಸಿಕೊಂಡಿದ್ದರೆ ನಾವು ಅಲ್ಲಿ ಕುತುಕೊಳ್ಳುತ್ತಿರಲಿಲ್ಲ.

ಶ್ರೀ ಎಂ. ಎನ್. ರಾಮಣ್ಣ :—ಈಗ ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನ ಶಾಖೆಗಳು ಇವೆ. ಅವರು ಪೊಟ್ಟ ಮೊದಲನೆಯದಾಗಿ ಬಾವಿಗಳನ್ನು ಆಳಪಡಿಸುವುದಕ್ಕೆ ಬೇಕಾದಂಥ ಮೆಷಿನರಿಗಳನ್ನು ಆದಷ್ಟು ಜಾಗ್ರತೆಯಾಗಿ ರೈತರಿಗೆ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಬಾವಿ ಆಳ ಮಾಡುವುದಕ್ಕೆ ೬೪. ಫ್ಯಾಮಿನ್ ರಿಲೀಫ್ ಪ್ರಾವಿಷನ್ನಿನಲ್ಲಿ ಇಟ್ಟಿರುವ ದುಡ್ಡನ್ನು ಕೊಟ್ಟರೆ ಏನೂ ತಪ್ಪಾಗುವುದಿಲ್ಲವೆಂದು ನನ್ನ ಭಾವನೆ ಇದೆ ಆದಷ್ಟು ಜಾಗ್ರತೆಯಾಗಿ ಇರತಕ್ಕ ಬಾವಿಗಳ ಆಳವನ್ನು ಜಾಸ್ತಿ ಮಾಡಿದರೆ ಕೇವಲ ಒಂದು ಎಕರೆಯಲ್ಲೇ ಹೆಚ್ಚಿಗೆ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಇದೇನಾಗಿದೆಯೆಂದರೆ, ಹಾಡಿದ್ದೇ ಹಾಡೋ ಕಿಸಬಾಯಿ ದಾಸಾ ಎಂದು ಹೇಳುವ ಹಾಗೆ ಆಗಿದೆ. ಪ್ರತಿವರ್ಷವೂ ಸೆಪ್ಟೆಂಬರ್ ತಿಂಗಳಲ್ಲಿ ಕ್ಷಾಮಬಂತು ಕ್ಷಾಮಬಂತು ಎಂದು ಹೇಳುತ್ತಿದ್ದೆವೆ. ಅದಕ್ಕೇನುಮಾಡಿದ್ದೇವೆಂದು ಹೇಳುವ ಪರಿಸ್ಥಿತಿಯಲ್ಲಿಲ್ಲ. ಮುಂದೆ ಈ ಪರಿಸ್ಥಿತಿ ಇರಬಾರದು. ನಾವು ಯಾವುದಾದರೂ ಒಂದು ಕೆಲಸವನ್ನು ಮಾಡಿದರೆ ಮೈಸೂರನ್ನು ನಿರ್ಮಾಣ ಮಾಡಿದಂಥ ಕೀರ್ತಿ ಮಾನ್ಯ ಶ್ರೀ ವಿಶ್ವೇಶ್ವರಯ್ಯನವರಿಗೆ ಏನು ಬಂತೋ ಆ ಕೀರ್ತಿ ತಮಗೂ ಬರುವಂತೆ ಅಂತಹ ಶಾಶ್ವತವಾದಂಥ ಕೆಲಸಗಳನ್ನು ಮಾಡಬೇಕು. ಈಗ ಏನು ತಾಲ್ಲೂಕು ಬೋರ್ಡ್‌ಗಳಿಗೆ ಮತ್ತು ರೆವಿನ್ಯೂ ಏಜೆನ್ಸಿಗಳಿಗೆ ೨೦-೩೦ ಸಾವಿರ ರೂಪಾಯಿಗಳನ್ನು ಕೊಟ್ಟು ಕೆಲಸ ಮಾಡಿಸುತ್ತಿದ್ದೀರೋ ಅವನ್ನು ನಿಲ್ಲಿಸಿ, ಈಗಿರತಕ್ಕ ಕೆರೆಗಳ ಹೂಳನ್ನು ತೆಗೆದು ಅವುಗಳ ಆಳವನ್ನು ಇನ್ನೂ ಹೆಚ್ಚಿಗೆ ಮಾಡಬೇಕು. ಇಂತಹ ಕೆಲಸ ಕಾರ್ಯಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ವಿನಯದಿಂದ ಪ್ರಾರ್ಥನೆ ಮಾಡಿ, ನನಗೆ ಮಾನ್ಯ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ) : ಮಾನ್ಯ ಅಧ್ಯಕ್ಷರೇ, ಇದುವರೆಗೆ ಸಾಕಷ್ಟು ಈ ವಿಷಯದಲ್ಲಿ ಅನೇಕ ಜನ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನನ್ನ ಹಿಂದೆ ಮಾತನಾಡಿದಂಥ ಮಾನ್ಯ ಸದಸ್ಯರಾದ ಶ್ರೀ ರಾಮಣ್ಣನವರು ಹೇಳಿದ ಹಾಗೆ ಅನೇಕ ವರ್ಷಗಳಿಂದ ಈ ಅಭಾವ ಪರಿಸ್ಥಿತಿಯ ಬಗ್ಗೆ ಈ ಸಭೆಯಲ್ಲಿ ಕೇಳುತ್ತಿದ್ದೇವೆ. ಇದಕ್ಕೇನಾದರೂ ಪರಿಹಾರ ಕಂಡುಹಿಡಿಯಬೇಕೆಂದು ಹೇಳುತ್ತಿದ್ದರೂ ೨೦ ವರ್ಷಗಳಿಂದ ಏನೂ ಕಂಡುಹಿಡಿಯಲಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಕೆಲಸ ಈಗ ಏನಾಗಿದೆಯೆಂದರೆ, ನಮ್ಮಲ್ಲಿ ಕ್ಷಾಮ ಬಂದಿದೆ, ನಮ್ಮಲ್ಲಿ ಹಣಕಾಸು ಇಲ್ಲ, ಕೇಂದ್ರಸರ್ಕಾರದವರು ಇನ್ನೂ ದುಡ್ಡು ಕೊಡಬೇಕು, ಅವರನ್ನು ೫-೧೦ ಕೋಟಿ ರೂಪಾಯಿಗಳನ್ನು ಕೇಳಿದ್ದೇವೆಂದು ಹೇಳುವುದು ಆಗಿದೆ ಹಾಗೆ ಬಂದ ಹಣವನ್ನು ಯಾವುದಾದರೂ ಒಂದು ಚುನಾವಣೆ ಬಂದರೆ, ಅದಕ್ಕೆ ಉಪಯೋಗಿಸುವುದಕ್ಕೆ ಪ್ರಯತ್ನಮಾಡುವುದು, ಎಲ್ಲಿ ತಮಗೆ ಅನುಕೂಲಗಳು ಆಗಬೇಕೋ ಅಲ್ಲಿಗೆ ಗ್ರಾಂಟು ಕೊಡುವುದು, ಕಮಿಟಿಗಳನ್ನು ಮಾಡುವುದು ಈ ಮೂಲಕ ಖರ್ಚುಮಾಡುವುದಕ್ಕೆ ಅವಕಾಶವಾಗಿದೆ. ಇದರಿಂದ ನಮ್ಮ ನಮ್ಮ ಪಕ್ಷಗಳನ್ನು ಕಟ್ಟುವುದಕ್ಕೆ ಮತ್ತು ನಮ್ಮ ನಮ್ಮ ರಾಜಕೀಯವನ್ನು ಬೆಳೆಸುವುದಕ್ಕೆ ಅದನ್ನು ಉಪಯೋಗಿಸುತ್ತಿದ್ದೇವೆಯೇ ಹೊರತು ಇಷ್ಟು ವರ್ಷಗಳಾದರೂ ನಮ್ಮಲ್ಲಿ ಶಾಶ್ವತವಾದ ಕ್ಷಾಮ ನಿವಾರಣೆ ಮಾಡಬೇಕೆಂಬ ಅಭಿಪ್ರಾಯ ಬರಲಿಲ್ಲ. ಅನೇಕ ಸ್ನೇಹಿತರು ಕೇವಲ ಅಧಿಕಾರಿಗಳನ್ನು ದೂಷಣೆ ಮಾಡುತ್ತಿದ್ದಾರೆ. ಬರೀ ಅಧಿಕಾರಿಗಳನ್ನು ಏಕೆ ದೂರಬೇಕು? ಪ್ರತಿ ನಿಮಿಷದಲ್ಲಿಯೂ ಮತ್ತು ಪ್ರತಿಘಳಿಗೆಯಲ್ಲಿಯೂ ಅಧಿಕಾರ ಪಕ್ಷದವರು ಮಧ್ಯ ಇಂಟರ್‌ಫಿಯರ್ ಮಾಡುತ್ತಾರೆ. ನ್ಯಾಯವಾದ ಕಡೆ ಕೆರೆ ಕಟ್ಟಿಸಿಕೊಡುವುದಿಲ್ಲ ಚುನಾವಣೆಯಲ್ಲಿ ಇವರಿಗೆ ಓಟು ಕೊಟ್ಟ ಜನರಿದ್ದರೆ ಅವರಿಗೆ ಸಹಾಯ ಮಾಡಿಕೊಡುತ್ತೀರಿ. ಅದಕ್ಕಾಗಿ ಎಷ್ಟೋ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೀರಿ. ಆದರೆ ಕ್ಷಾಮ ನಿವಾರಣೆ ಬೇಕಾದ ವ್ಯವಸ್ಥಿತವಾದ ವಿಧಾನಗಳನ್ನು ಕಂಡುಹಿಡಿಯುವುದಕ್ಕೆ ಇದುವರೆಗೂ ಯಾರೂ ಹೋಗಿಲ್ಲ ಹೋದ ವರ್ಷ ತಾಲ್ಲೂಕು ಬೋರ್ಡ್ ಎಲೆಕ್ಷನ್ ಕಾಲದಲ್ಲಿ ಸಾಕಷ್ಟು ಹಣವನ್ನು ಖರ್ಚುಮಾಡಿ ತಾಲ್ಲೂಕು ಬೋರ್ಡ್‌ಗಳ ಎಲೆಕ್ಷನ್ನಿನಲ್ಲಿ ನಿಮ್ಮ ಪಕ್ಷವನ್ನು ಕಟ್ಟುವುದಕ್ಕೆ ಪ್ರಯತ್ನಪಟ್ಟಿದ್ದೀರಿ. ಹೀಗೆ ನ್ಯಾಯ ಬಿಟ್ಟು ಹೋದರೆ ಒಂದಲ್ಲ, ಒಂದು ರೀತಿಯಲ್ಲಿ ಎಂದಾದರೂ ಒಂದು ದಿವಸ ಇಂತಹ ಅನ್ಯಾಯಗಳಿಂದ

(ಶ್ರೀ ಕೆ. ಎನ್. ವೀರಪ್ಪಗೌಡ)

ಮುಂದೆ ಹಾನಿಯಾಗುತ್ತದೆಂಬುದನ್ನು ಇವರು ಜ್ಞಾಪಕಮಾಡಿಕೊಳ್ಳಬೇಕು. ಈಗ ಅನೇಕ ತಾಲ್ಲೂಕು ಬೋರ್ಡ್‌ಗಳಲ್ಲಿ ಈ ಪಕ್ಷ, ಆ ಪಕ್ಷ ವೆಂದು ಎರಡೆರಡು ಭಾಗಗಳಾಗಿವೆ. ಫ್ಯಾಮಿನ್‌ರಿ ಲೀಫ್‌ಗೆ ಒದಗಿಸಿದ ಹಣವನ್ನು ರಾಜಕೀಯಕ್ಕಾಗಿ ಉಪಯೋಗಿಸಿದ್ದೀರಿ. ನೀವು ಮಾಡುತ್ತಿರುವಂಥ ಅನ್ಯಾಯದ ಫಲ ಮುಂದೆ ನೀವೇ ಅನುಭವಿಸಬೇಕಾಗುತ್ತದೆ.

ಆದ್ದರಿಂದ ಇನ್ನೂ ಮುಂದಾದರೂ ಸರಕಾರದವರು ಈ ಹಣವನ್ನು ಯಾವ ರೀತಿಯಲ್ಲಿ ಖರ್ಚು ಮಾಡಬೇಕೆಂಬುದನ್ನು ಯೋಚಿಸಬೇಕು. ಇವೊತ್ತಿನ ದಿವಸ ಕೇಂದ್ರ ಸರಕಾರದವರು ಈ ಕೆಲಸ ಕಾರ್ಯಗಳಿಗೆ ಹಣ ಕೊಡುತ್ತಿದ್ದಾರೆ. ಅವರು ಕೊಡತಕ್ಕ ಹಣವನ್ನು ರಾಜ್ಯಸರ್ಕಾರದವರು ಯಾವ ರೀತಿ ಖರ್ಚು ಮಾಡುತ್ತಾರೆ, ಅವರು ಕೊಟ್ಟಿರತಕ್ಕ ಹಣ ಸದುಪಯೋಗವಾಗಿದೆಯೇ, ಅಥವಾ ಯಾವುದಕ್ಕೆ ಕೊಟ್ಟಿದ್ದಾರೆ, ಅದಕ್ಕೆ ಉಪಯೋಗಿಸಿದ್ದಾರೆಯೇ ಎಂದು ನೋಡುವುದಕ್ಕೆ ಒಂದು ಕಮಿಟಿ ಮಾಡಿ ಅವರು ಆಗಿಂದಾಗ್ಗೆ ರಿಪೋರ್ಟು ತರಿಸಿಕೊಳ್ಳುವುದು ಒಳ್ಳೆಯದೆಂದು ಕಾಣುತ್ತದೆ. ಇವತ್ತು ಕಡೂರು ತಾಲೂಕಿನಲ್ಲಿ ತಾಲೂಕುಬೋರ್ಡು ಪ್ರೆಸಿಡೆಂಟರು ಸಂಸ್ಥಾ ಕಾಂಗ್ರೆಸ್ಸಿನವರು. ಅವರು ಅಲ್ಲಿ ಎರಡು ಲಕ್ಷ ರೂಪಾಯಿ ಕಂದಾಯವನ್ನು ರೆಮಿಶನ್ ಮಾಡಿದ್ದೇವೆಂದು ಹೇಳಿಕೊಂಡು ಬರುತ್ತಿದ್ದಾರೆ. ಕಡೂರು ತಾಲೂಕಿನಲ್ಲಿ ಇರುವುದು ಒಂದೂಮುಕ್ಕಾಲು ಲಕ್ಷ ಜನರು. ಅದರಲ್ಲಿ ಕೇವಲ ಮುಕ್ಕಾಲು ಲಕ್ಷ ಜನ ಜಮೀನು ಹೊಂದಿರಬಹುದು ; ಮತ್ತು ಅವರು ಕಂದಾಯ ಕೊಡುತ್ತಿರಬಹುದು. ಆದರೆ ಜಮೀನು ಹೊಂದಿಲ್ಲದ ಜನರು ಏನಿದ್ದಾರೆ, ಅವರ ಸಂಖ್ಯೆಯೇ ಜಾಸ್ತಿ ಆದೆ. ಇದರಿಂದ ಅವರಿಗೆ ಏನು ಪರಿಹಾರ ಕೊಟ್ಟ ಹಾಗೆ ಆಯಿತು? ಈ ರೀತಿ ಸ್ಟೇಟ್‌ಮೆಂಟ್ ಕೊಟ್ಟರೆ ಜನರಿಗೆ ಏನು ಪರಿಹಾರ ಕೊಟ್ಟ ಹಾಗೆ ಆಯಿತು? ಇವತ್ತು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಮೈದಾನ ಪ್ರದೇಶಗಳಿವೆ. ಅರಣ್ಯ ಇಲಾಖೆಯವರು ಈ ಕ್ಷಾಮ ನಿವಾರಣೆಯ ಬಗ್ಗೆ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಏನೆಂದರೆ, ಇವತ್ತು ಏನು ಮೈದಾನ ಪ್ರದೇಶ ಇದೆ, ಅಲ್ಲಿ ಕಾಡನ್ನು ಬೆಳೆಸಬೇಕು. ಆದರೆ ಈಗ ಅರಣ್ಯ ಇಲಾಖೆಯವರು ಏನು ಮಾಡುತ್ತಿದ್ದಾರೆಂದರೆ, ದಟ್ಟವಾಗಿರುವ ಕಾಡುಗಳನ್ನು ಕತ್ತರಿಸಿ, ಇರುವ ಕಾಡನ್ನು ನಾಶ ಮಾಡಿ ಮಳೆ ಬಾರದ ಹಾಗೆ ಮಾಡುತ್ತಿದ್ದಾರೆ. ಅಲ್ಲೆಲ್ಲಾ ಚಾರ್‌ಕೋಲ್ ಮರಗಳಿವೆಯೆಂದು ಹೇಳಿಕೊಂಡು ಮರಗಳನ್ನು ಕಡಿಯುತ್ತಿದ್ದಾರೆ. ಅದರೆ ಅಲ್ಲಿ ಏನು ಕತ್ತರಿಸುತ್ತಿದ್ದಾರೋ, ಅದೇ ರೀತಿ ಮೈದಾನ್ ಪ್ರದೇಶಗಳಲ್ಲಿ ಕಾಡುಗಳನ್ನು ಬೆಳೆಸುತ್ತಿಲ್ಲ, ಸ್ವಾಭಾವಿಕವಾಗಿ ಎಲ್ಲಿ ಕಾಡು ಬೆಳೆಯುತ್ತದೆಯೋ, ಅಲ್ಲಿ ಜಲ ತನ್ನಷ್ಟಕ್ಕೆ ಮೇಲೆ ಬರುತ್ತದೆ. ಇವತ್ತು ೧೦೦ ಅಡಿ ಆಳ ಇದ್ದ ಬಾವಿಯನ್ನು ಬರುವ ವರ್ಷ ೧೫೦ ಅಡಿ ಆಳ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ನೀರೇ ಇರುವುದಿಲ್ಲ. ಭೂಮಿಯಲ್ಲಿ ನೀರು ಸಿಗುವುದು ವರ್ಷೇ ವರ್ಷೇ ಕೆಳಗೆ ಹೋಗುತ್ತಾ ಇದೆ, ಈ ವರ್ಷ ತೆಗೆದ ಬಾವಿಯಲ್ಲಿ ಬರುವ ವರ್ಷ ನೀರೇ ಸಿಗುವುದಿಲ್ಲ. ಅದನ್ನು ಆಳಪಡಿಸುವುದಕ್ಕೆ ರೈತರು ದುಡ್ಡು ಕೊಡಿ ಎಂದು ಕೇಳುತ್ತಿದ್ದಾರೆ. ಇದಕ್ಕೆ ಏನಾದರೂ ಒಂದು ಪರಿಹಾರ ಕಂಡುಹಿಡಿಯಬೇಕು. ಸರ್ಕಾರದವರು ಇದರ ಬಗ್ಗೆ ಏನೂ ಯೋಜನೆ ಮಾಡಿಲ್ಲ. ಅರಣ್ಯ ಇಲಾಖೆಯವರಿಗೆ ಹಣ ಒದಗಿಸಿ, ಮೈದಾನ ಪ್ರದೇಶದಲ್ಲಿ ಇನ್ನೂ ಹೆಚ್ಚಿನ ಕಾಡು ಬೆಳೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನೂ ಮಾನ್ಯ ರಾಮಣ್ಣನವರು ಬಾಳೆಹೊನ್ನೂರು ಹತ್ತಿರ ಅಣೆಕಟ್ಟು ಹಾಕಿ ನೀರು ತರಬೇಕೆಂದು ಹೇಳಿದರು. ಇವತ್ತು ಕಾಡೇ ಹೋದ ನಂತರ ನೀರೇ ಸಿಗುವುದು ಕಷ್ಟವಾಗುತ್ತದೆ, ಅಲ್ಲಿರತಕ್ಕ ಅರಣ್ಯವೆಲ್ಲಾ ಹೋದ ಮೇಲೆ ನೀರನ್ನು ಉಪಯೋಗಿಸುವುದೆಂದರೆ ಹೇಗೆ ? ಉದಾಹರಣೆಗೆ ಜಂಬದ ಅಣೆಕಟ್ಟು ಕಟ್ಟಿದರು. ಅದರೆ ಅಲ್ಲಿ ೨-೩ ವರ್ಷ ನೀರೇ ಇಲ್ಲ. ಈ ವರ್ಷ ಏನೋ ಸ್ವಲ್ಪ ನೀರು ಬಂದಿದೆಯಂತೆ ಇವತ್ತು ನಿಮ್ಮ ಹತ್ತಿರ ಎಕ್ಸ್‌ಪರ್ಟ್ಸ್ ಇದ್ದಾರೆ. ಅದಕ್ಕೆ ಬೇಕಾದ ಸಿಬ್ಬಂದಿ ಎಲ್ಲಾ ಇದೆ. ಆದರೆ ಕೆಲಸಗಳನ್ನು ಮಾಡುವಾಗ ಸರಿಯಾಗಿ ಯೋಚನೆ ಮಾಡಿ ಮಾಡುತ್ತಾ ಇಲ್ಲ. ಒಂದು ವೇಳೆ ಅಲ್ಲಿ ಅಣೆಕಟ್ಟು ಕಟ್ಟುವಾಗ ನೀರು ಸಿಗುತ್ತದೆಯೋ ಇಲ್ಲವೇ ಎಂಬುದನ್ನು ಯೋಚನೆ ಮಾಡದೆ ಅಣೆ ಕಟ್ಟು ಕಟ್ಟುಬಿಡುತ್ತಾರೆ. ನಂತರ ಈ ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಹೀಗೆ ಯಾವುದಾದನ್ನೂ ಪುನರ್‌ವಿಮರ್ಶೆ ಮಾಡದೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡು ಅನ್ಯಾಯವಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇವತ್ತು ಬಾಳೆಹೊನ್ನೂರಿನಲ್ಲಿ ಅಣೆಕಟ್ಟು ಕಟ್ಟಿದರೆ, ಎಷ್ಟು ಪ್ರದೇಶ ಮುಳುಗಡೆಯಾಗುತ್ತದೆ ಎಂಬುದನ್ನು ಇವರು ಲೆಕ್ಕ ಹಾಕಿದ್ದಾರೆಯೇ ಇವರು ನೀರಿನ ಆಶ್ರಯ ಎಲ್ಲಿ ಪ್ರಾರಂಭವಾಗುತ್ತದೆಂಬುದನ್ನು ನೋಡುವುದಿಲ್ಲ. ಆಗುಂಬೆ ಲೈನಿನಲ್ಲೂ ಮಾಲತಿ ಹೊಳೆ ಅಣೆಕಟ್ಟು ಒಂದು ಸ್ಕೀಮ್ ಮಾಡಬೇಕೆಂದು ಆಲೋಚನೆ ನಡೆಯುತ್ತಿತ್ತು. ಅಲ್ಲಿಯೂ ಕಾಡು ಪ್ರದೇಶ ಬಹಳ ಹೋಗುತ್ತೆ. ದಟ್ಟವಾಗಿ ಕಾಡು ಬೆಳೆದರೆ, ತಾನಾಗಿಯೇ ನೀರು ಬರುತ್ತದೆ ಎಂಬು ದನ್ನು ಅರ್ಥ ಮಾಡಿಕೊಳ್ಳಬೇಕು ಇವತ್ತು ಮಲೆನಾಡಿನ ಜನರು ಕಡಿಮೆ ಇದ್ದಾರೆ ಮೈದಾನ ಪ್ರದೇಶದಲ್ಲಿರಂ

ವವರು ಜಾಸ್ತಿ ಇದ್ದಾರೆಂದು ಈ ರೀತಿ ಮಾಡಿದರೆ, ಇದರಿಂದ ಎರಡೂ ಕಡೆಯವರೆಗೂ ಹಾನಿ ಆಗುತ್ತದೆ. ಎಂಬುದನ್ನು ಯಾರೂ ಅರ್ಥಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಇದನ್ನು ಸರ್ಕಾರದವರು ದೀರ್ಘವಾಗಿ ಯೋಚನೆ ಮಾಡಬೇಕು. ಹೊರ್ನಾಡು ಎಂಬಲ್ಲಿ ಅನ್ನಪೂರ್ಣೇಶ್ವರಿ ದೇವಸ್ಥಾನ ಇದೆ. ಅಲ್ಲಿ ರಥೋತ್ಸವದ ಆಹ್ವಾನ ಪತ್ರಿಕೆಯನ್ನು ಹೊರಡಿಸುವಾಗ ದೇಶದ ನಾನಾ ವಿಚಾರಗಳನ್ನು ಹಾಕಿ ಹೊರಡಿಸುತ್ತಾರೆ. ಅದು ಸೆಕ್ರೆಟರಿಯೇಟಗೂ ಬಂದಿರಬೇಕೆಂದು ಕಾಣುತ್ತದೆ. ಅದರಲ್ಲಿ ಸಮುದ್ರಕ್ಕೆ ಹೋಗುವ ನೀರನ್ನು ಹೆಚ್ಚು ತಡೆಗಟ್ಟುವುದರಿಂದ ಸಮುದ್ರದಲ್ಲಿ ವಿಪರೀತ ಶಾಖ ಉಂಟಾಗಿ, ತಂಡಿ ನೀರಿನ ಆಶ್ರಯವಿಲ್ಲದೆ, ಮಳೆ ಬರುವುದು ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದ್ದಾರೆ. ಇದರಿಂದ ಹವಾಮಾನವೇ ಬದಲಾವಣೆಯಾಗುತ್ತದೆಂದುಹೇಳಿದ್ದಾರೆ. ಆದ್ದರಿಂದ ವಿಚಾರವನ್ನೂ ಕೂಡ ಸರ್ಕಾರದವರು ಗಮನದಲ್ಲಿಟ್ಟು ಕೊಳ್ಳಬೇಕೆಂದು ಹೇಳಿಕೊಳ್ಳುತ್ತೇನೆ. ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯುವು ದಕ್ಕೆ ಯೋಜನೆ ಮಾಡಬೇಕು. ಇವತ್ತು ಜನರು ಕಷ್ಟದಲ್ಲಿದ್ದಾರೆಂದು ಕೆಲವು ರಸ್ತೆಗಳನ್ನು ಮಾಡಿಸುತ್ತಿದ್ದಾರೆ ಮೋರಿಗಳನ್ನು ಕಟ್ಟಿಸುತ್ತಿದ್ದಾರೆ. ಆದರೆ ಅದನ್ನು ಮಾಡುವಾಗ ಸರಿಯಾದ ರೀತಿಯಲ್ಲಿ ಮಾಡುವುದಿಲ್ಲ. ಯಾರಾದರೂ ಇವರಿಗೆ ಬೇಕಾದಂತವರು ಕೇಳಿದರೆ ಮಾತ್ರ ಇಂತಹ ರಸ್ತೆಗಳನ್ನುಮಾಡಿಸುತ್ತಿದ್ದಾರೆ, ಮೋರಿ ಗಳನ್ನು ಕಟ್ಟಿಸುತ್ತಿದ್ದಾರೆ. ಆದರೆ ಎಲ್ಲಿ ನಿಜವಾಗಿಯೂ ಮಾಡಬೇಕೋ ಅಲ್ಲಿ ಅದನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡುತ್ತಾ ಇಲ್ಲ. ಇದನ್ನು ಈ ರೀತಿ ಏಕೆ ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುವುದಿಲ್ಲ.

ಕೆರೆಗಳನ್ನು ರಿಪೇರಿ ಮಾಡುವುದು ಮತ್ತು ಸಣ್ಣ ನೀರಾವರಿ ಯೋಜನೆಗಳಿಗಾಗಿ ಈ ಹಣವನ್ನು ಪೂರ್ತಿ ಉಪಯೋಗಿಸಬೇಕು. ಮಣ್ಣು ಕಾಮಗಾರಿಗಳಿಗೆ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಬೇಕು. ರಾಜ ಕೀಯಕ್ಕೋಸ್ಕರ ಹಣವನ್ನು ಖರ್ಚು ಮಾಡುವುದನ್ನು ನಿಲ್ಲಿಸಬೇಕು. ಅಧಿಕಾರಿಗಳಿಗೆ ಸರಿಯಾದಂತಹ ಇನ್‌ಸ್ಟ್ರಕನ್ ಕೊಟ್ಟು ರಿಲೀಫ್ ಕಾಮಗಾರಿಗಳಿಗಾಗಿ ಸರ್ಕಾರದವರು ಖರ್ಚು ಮಾಡತಕ್ಕಂಥ ಹಣ ಸದ್ವಿನಿ ಯೋಗವಾಗುವ ಹಾಗೆ ಮಾಡಬೇಕು. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದ ಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎಲ್. ಶಿವಪ್ಪ:—(ತಿಪಟೂರು) ಮಾನ್ಯ ಅಧ್ಯಕ್ಷರೇ ಈಗ ದೇಶದಲ್ಲಿ ಏನು ಅಭಾವ ಪರಿಸ್ಥಿತಿ ಉಂಟಾಗಿದೆ, ಕ್ಷಾಮ ತಲೆದೋರಿದೆ ಅದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರನೇಕರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಈ ವಿಷಯದಲ್ಲಿ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ ಸಾಮಾನ್ಯವಾಗಿ ದೇಶಕ್ಕೆ ಕ್ಷಾಮ ಬರತಕ್ಕ ಸಂದರ್ಭದಲ್ಲಿ ಪ್ರತಿವರ್ಷವೂ ಸ್ವಾಭಾವಿಕವಾಗಿ ನಾವು ಈ ಸಭೆ ಯಲ್ಲಿ ಆ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ, ಚರ್ಚೆ ಮಾಡುತ್ತಿದ್ದೇವೆ. ಒಂದು ವರ್ಷ ಅಲ್ಲ, ಎರಡು ವರ್ಷವಲ್ಲ. ಆಗಾಗ್ಯೆ ಕ್ಷಾಮ ದೇಶದಲ್ಲಿ ಬರುತ್ತದೇ ಇರುತ್ತದೆ. ಸ್ವಾಭಾವಿಕವಾಗಿ ತಾಲ್ಲೋಕ್‌ಬೋರ್ಡ್ ಎಲೆಕ್ಷನ್ ಬಂದಾಗ ಕ್ಷಾಮ ಜಾಸ್ತಿಯಾಗುತ್ತದೆ. ಕ್ಷಾಮದ ಕಾಲದಲ್ಲಿ ೧೯೬೮ನೇ ಇಸವಿಯಲ್ಲಿ ತಾಲ್ಲೋಕ್ ಬೋರ್ಡ್ ಚುನಾವಣೆ ಆಯಿತು ಆ ಸಂದರ್ಭದಲ್ಲಿ ಕೂಡ ಪರಿಹಾರ ಕಾಮಗಾರಿಗಳಿಗಾಗಿ ಸುಮಾರು ೮ ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಮೊನ್ನೆ ನಮ್ಮ ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ಡಿ. ಎಂ. ಸಿದ್ದಯ್ಯನವರು ಅಭಾವ ಪೀಡಿತ ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರ ಕಾಮಗಾರಿಗಳನ್ನು ಮಾಡುವುದಕ್ಕೋಸ್ಕರ ರಾಜ್ಯ ಸರ್ಕಾರದವರು ಸುಮಾರು ೨೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ, ಅದು ಮಂಜೂರಾಗಿ ಬಂದರೆ ಅವರಿಂದ ಕ್ಷಾಮ ಬಾರದಂತೆ ಶಾಶ್ವತವಾಗಿ ಅದನ್ನು ತಡೆ ಹಿಡಿಯುವುದಕ್ಕೆ ಸಹಾಯವಾಗುತ್ತದೆ ಎಂದು ಹೇಳಿದರು. ಮತ್ತು ಅದಕ್ಕೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತು ಅಂಥಾ ಒಂದು ಶಾಶ್ವತ ವಾದ ಪರಿಹಾರ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಅವಕಾಶವಾಗಲಿಲ್ಲ ಎಂದು ಹೇಳಿದರು. ಆದರೆ ಈಗ ನಾವು ಒಂದು ವಿಚಾರವನ್ನು ಯೋಚನೆ ಮಾಡೋಣ ಈಗ ೫-೬ ವರ್ಷಗಳಿಂದ ಈಚೆಗೆ ಕ್ಷಾಮಪರಿಹಾರ ಕೆಲಸಗಳಿ ಗೋಸ್ಕರ ಸರ್ಕಾರದವರು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ, ಮತ್ತು ಎಷ್ಟು ಕೋಟಿ ರೂಪಾಯಿಗಳನ್ನು ರೈತರಿಗೆ ಕಂದಾಯವನ್ನು ರಿಯಾಯಿತಿ ಕೊಟ್ಟಿದ್ದಾರೆ ಎನ್ನುವುದನ್ನು ಲೆಕ್ಕ ಹಾಕಿದರೆ ಸರ್ಕಾರಕ್ಕೆ ಸಾಕಷ್ಟು ಹಣ ಖರ್ಚಾಗಿದೆ, ಮತ್ತು ಸಾಕಷ್ಟು ಹಣ ನಷ್ಟ ಕೂಡ ಆಗಿದೆ! ಈ ಹಣವ ನ್ನೆಲ್ಲಾ ಬರಗಾಲಕ್ಕೆ ತುತ್ತಾಗತಕ್ಕಂಥ ಪ್ರದೇಶಗಳಲ್ಲಿ ಶಾಶ್ವತವಾದ ಪರಿಹಾರ ಕೆಲಸಗಳನ್ನು ಮಾಡಿಸುವುದಕ್ಕೆ ಖರ್ಚು ಮಾಡಿದ್ದರೆ ಜನಗಳಿಗೆ ಅನುಕೂಲವಾಗುತ್ತಿರಲಿಲ್ಲವೇ? ಇಂಥಾ ಒಂದು ಕೆಲಸವನ್ನು ಮಾಡುವುದಕ್ಕೆ ಸರ್ಕಾರದವರಿಗೆ ಮನಸ್ಸಿಲ್ಲವೋ ಏನೋ ಗೊತ್ತಿಲ್ಲ ಬರಗಾಲ ಬಂದಿದೆ ಎಂದು ಏನೋ ಸ್ವಲ್ಪ ಮಣ್ಣು ಕಾಮಗಾರಿ ಮಾಡಿಸಿ, ರಸ್ತೆ ಮಾಡಿಸಿ ಜನಗಳಿಗೆ ಸ್ವಲ್ಪ ಕೂಲಿ ಕೊಟ್ಟು ಸ್ವಲ್ಪ ಆಹಾರವನ್ನು ಒದಗಿಸಿದರೆ ದೇಶದ ಜನತೆಗೆ ಸುಖಸಿಕ್ಕುತ್ತದೆ ಅನುಕೂಲವಾಗುತ್ತದೆ ಎನ್ನತಕ್ಕಂಥಾ ಧೋರಣೆ ಸರ್ಕಾರದವರಿಗೆ ಇದೆ. ಯಾವ ಉದ್ದೇಶದಿಂದ ಇಂಥಾ ರಿಲೀಫ್ ಕಾಮಗಾರಿಗಳನ್ನು ಮಾಡಿಸಿಕೊಂಡು ಬಂದಿದ್ದಾರೆಯೋ ನನಗೆ ಅರ್ಥವಾಗುವುದಿಲ್ಲ. ಸರ್ಕಾರದರು ರಾಜ್ಯಾದ್ಯಂತ ಕ್ಷಾಮ ಪರಿಸ್ಥಿತಿಯನ್ನು ಹೋಗಲಾಡಿಸಬೇಗಾಗಿದೆ.

(ಶ್ರೀ ವಿ. ಎಲ್. ಶಿವಪ್ಪ)

ರಾಜ್ಯದ ೨ ೩/೪ ಕೋಟಿ ಜನ ಸರ್ಕಾರದ ರಕ್ಷಣೆಯಲ್ಲಿದ್ದಾರೆ. ಅವರೆಲ್ಲರಿಗೂ ರಕ್ಷಣೆಯನ್ನು ಕೊಡುವುದರಲ್ಲಿ ಅವರೆಲ್ಲರೂ ಅಭಾವ ಪರಿಸ್ಥಿತಿಗೆ ತುತ್ತಾಗದಂತೆ ಅವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡಲು ಸರ್ಕಾರದವರು ಎಷ್ಟರಮಟ್ಟಿಗೆ ಯೋಚನೆ ಮಾಡುತ್ತಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಕಂದಾಯ ಇಲಾಖೆಯನ್ನು ವಹಿಸಿಕೊಂಡಿರತಕ್ಕ ಶ್ರೀಮಾನ್ ಕೌಜಲ್ಗಿಯವರ ವಿಚಾರದಲ್ಲಿ ನನಗೆ ಗೌರವ ಇದೆ. ಅವರ ನೀತಿಯಬಗ್ಗೆ ಗೌರವ ಇದೆ. ಆದರೆ ಈ ಬಗ್ಗೆ ಸರ್ಕಾರದವರು ತಮ್ಮ ಕರ್ತವ್ಯನ್ನು ಸರಿಯಾಗಿ ಮಾಡುತ್ತಿಲ್ಲ ಎಂದು ನಾವು ಸರ್ಕಾರವನ್ನು ಟೀಕೆ ಮಾಡಬೇಕಾಗಿದೆ. ಇದಕ್ಕೆ ಶ್ರೀಮಾನ್ ನಾಡಗೌಡರ ಒಂದು ಸಂಬಂಧವು ಇದೆ. ಏತಕ್ಕೆಂದರೆ ತಾಲ್ಲೂಕುಬೋರ್ಡಿಗೆ ಸರ್ಕಾರದವರುಹಣವನು ಕೊಡುತ್ತಾರೆ. ತಾಲ್ಲೂಕ್‌ಬೋರ್ಡಿನಲ್ಲಿ ಆಡಳಿತಪಕ್ಷದವರು ಅಧ್ಯಕ್ಷರಾಗಿದ್ದು ಆ ಕಾನ್ಸ್ಟಿಟ್ಯೂಯೆನ್ಸಿಯ ಎಂ.ಎಲ್.ಎ ಅವರು ಆಡಳಿತಪಕ್ಷದವರಾಗಿದ್ದರೆ ಅವರನ್ನುಕೇಳದೆ ಅಲ್ಲಿ ಯಾವ ಅಧಿಕಾರಿಯನ್ನು ಟ್ರಾನ್ಸ್‌ಫರ್ ಮಾಡುವುದಿಲ್ಲ. ತಾಲ್ಲೂಕ್‌ಬೋರ್ಡ್ ಪ್ರೆಸಿಡೆಂಟ್ ಕಾನ್ಸ್ಟಿಟ್ಯೂಯೆನ್ಸಿಯ ಎಂ. ಎಲ್. ಎ ಇಬ್ಬರೂ ವಿರೋಧಪಕ್ಷದವರಾಗಿದರೆ ಯಾವ ವಿಷಯಕ್ಕೂ ಸರ್ಕಾರದವರು ಅವರನ್ನು ಕನ್‌ಸಲ್ಟ್ ಮಾಡುವುದಿಲ್ಲ. ತಮ್ಮಗೆ ಯಾರು ಬೇಕೋ ಅವರನ್ನು ಇಟ್ಟುಕೊಳ್ಳುವುದು ತಮಗೆ ಬೇಡವಾದವರನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡುವುದು ಇಂಥವುಗಳನ್ನೆಲ್ಲಾ ಮಾಡುತ್ತಾರೆ. ಈಗ ಸರ್ಕಾರದವರು ಅಭಾವ ಪರಿಹಾರ ಕಾಮಗಾರಿಗಳನ್ನು ಮಾಡಿಸುವುದರಲ್ಲಿ ಎಷ್ಟು ಜನ ಬಡ ಸಂಸಾರಗಳವರಿಗೆ ಅನುಕೂಲವಾಗುತ್ತಿನೆ ಎಂಬುದು ನನಗೆ ಗೊತ್ತಾಗುವುದಿಲ್ಲ. ಸರ್ಕಾರದವರುಕೊಡ ತಕ್ಕ ಹಣದಲ್ಲಿ ಕ್ಷಾಮ ಪರಿಹಾರವಾಗುವುದಿಲ್ಲ ಅಭಾವ ಪೀಡಿತ ಪ್ರದೇಶಗಳಲ್ಲಿ ಜನಗಳಿಗೆ ಶಾಶ್ವತವಾದ ಪರಿಹಾರವನ್ನು ಒದಗಿಸುವಂತಹ ಕೆಲಸಗಳನ್ನು ಸರ್ಕಾರದವರು ಮಾಡಬೇಕು. ಕೆಲವು ಸಂದರ್ಭದಲ್ಲಿ ಮಳೆ ಬಂದರೂ ಕೂಡ ಕ್ಷಾಮ ಪರಿಹಾರವಾಗುವುದಿಲ್ಲ. ಮಳೆ ಬರುವುದರಲ್ಲಿಯೂ ತಾರತಮ್ಯ ಬರುತ್ತಿದೆ. ಕಂದಾಯವನ್ನು ವಜಾ ಮಾಡುವ ಸಂದರ್ಭ ಬಂದಾಗ ಮಾನ್ಯ ಕಂದಾಯ ಮಂತ್ರಿಗಳೇ ಈ ವಿಚಾರವನ್ನು ಹೇಳಿದ್ದಾರೆ. ಯಾವ ಪ್ರದೇಶದಲ್ಲಿ ತೀರಾ ಮಳೆ ಬೆಳೆ ಆಗಿಲ್ಲ ಅಂಥಾ ಕಡೆಗಳಲ್ಲಿ ನೀರು-ತೆರಿಗೆ, ಖುಷ್ಕಿ ಕಂದಾಯವನ್ನು ಸರ್ಕಾರದವರು ವಜಾ ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಈಗ ಸುಮಾರು ೮ ವರ್ಷಗಳಿಂದಲೂ ಸಾಕಷ್ಟು ಮಳೆ ಆಗಿಲ್ಲ. ತಿಪಟೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಈ ತಾಲ್ಲೂಕುಗಳಲ್ಲಿ ಹೆಚ್ಚು ಬಾಗಾಯಿತು ಇದೆ, ತೆಂಗಿನ ತೋಟಗಳು ಇವೆ. ಈ ಪ್ರದೇಶಗಳಲ್ಲಿ ಸಾಮಾನ್ಯವಾಗಿ ತೆಂಗಿನ ಮರಗಳಿಗೆ ಸಾಕಾಗುವಷ್ಟು ಮಳೆ ಕೂಡ ಆಗಿಲ್ಲ. ಹೆಚ್ಚು ಮಳೆ ಆಯಿತು ಎಂದರೆ ೧೮-೨೦ ಇಂಚು ಮಳೆ ಆಗುತ್ತದೆ. ಅದಕ್ಕಿಂತ ಹೆಚ್ಚು ಮಳೆ ಆಗುವುದಿಲ್ಲ. ಈ ಪ್ರದೇಶಗಳಲ್ಲಿ ಮಾವಿನ ತೋಟ, ತೆಂಗಿನ ತೋಟ, ಇಷ್ಟು ಬಿಟ್ಟು ಬೇರೆ ಬೆಳೆ ಬೆಳೆಯುವುದಕ್ಕಾಗುವುದಿಲ್ಲ. ಈ ಪ್ರದೇಶಗಳಿಗೆ ಬಾಗಾಯಿತು ಕಂದಾಯ ಯಾವಾಗಲೂ ರಿಯಾಯಿತಿ ಆಗಿಲ್ಲ. ಕೆಲವು ಸಂದರ್ಭಗಳಲ್ಲಿ ಬಾಗಾಯಿತು ಮತ್ತು ಖುಷ್ಕಿ ಬೆಳೆಯನ್ನು ಬೆಳೆಯುವುದಕ್ಕೆ ಸಾಕಷ್ಟು ಮಳೆ ಬರುವುದಿಲ್ಲ ಇಂಥಾ ಸನ್ನಿವೇಶದಲ್ಲಿ ಬಾಗಾಯಿತು ಕಂದಾಯವನ್ನು ವಜಾ ಮಾಡದಿದ್ದರೆ ಹೇಗೆ? ಆದ್ದರಿಂದ ಯಾವ ಯಾವ ಭಾಗದಲ್ಲಿ ಯಾವರೀತಿಯ ಕಂದಾಯವನ್ನು ವಜಾ ಮಾಡುತ್ತೀರಿ ಎನ್ನುವ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಈ ಚರ್ಚೆಗೆ ಉತ್ತರ ಕೊಡುವಾಗ ಅದನ್ನು ಸ್ಪಷ್ಟವಾಗಿ ಹೇಳಬೇಕು. ಸರಿಯಾಗಿ ಮಳೆ ಬೆಳೆ ಆಗದೇ ಇದ್ದರೂ ಕೂಡ ಎಲ್ಲೆಲ್ಲಿ ಯಾವ ಯಾವ ವರ್ಷ ಖುಷ್ಕಿ ಮತ್ತು ಬಾಗಾಯಿತು ಕಂದಾಯವನ್ನು ವಸೂಲು ಮಾಡಿದ್ದೀರೋ ಅಂತಹ ಕಡೆಗಳಲ್ಲಿ ಅದನ್ನು ವಜಾ ಮಾಡಬೇಕೆಂದು ನಾನು ಸರ್ಕಾರದವರನು ಕೇಳಿಕೊಳ್ಳುತ್ತೇನೆ ನಮ್ಮ ಹಳೆಯ ಮೈಸೂರು ಪ್ರದೇಶದಲ್ಲಿ ಸಾಕಷ್ಟು ಸಣ್ಣ ಸಣ್ಣ ಕೆರೆಗಳು ಇವೆ. ಕೆಲವು ಕೆರೆಗಳ ರಿಪೇರಿ ಮಾಡುವುದಕ್ಕಾಗಿ ಎಸ್ಟಿಮೇಟ್‌ಗಳನ್ನು ತಯಾರಿಸಿ ಸರ್ಕಾರಕ್ಕೆ ಕಳುಹಿಸಿ ಸುಮಾರು ೧೩-೧೪ ವರ್ಷಗಳಾದರೂ ಕೂಡ ಅವುಗಳ ರಿಪೇರಿ ಆಗಿಲ್ಲ. ಕೆರೆಗಳ ತೂಬು ಕೋಡಿಗಳ ರಿಪೇರಿ ಆಗಿಲ್ಲ. ಇದರಿಂದಾಗಿ ಮಳೆ ಬಂದರೂಕೂಡ ಕೆರೆಯಲ್ಲಿ ನೀರು ನಿಲ್ಲುವುದಿಲ್ಲ. ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ ನಾನು ಎಷ್ಟೋ ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಅನೇಕ ಕೆರೆಗಳ ಸ್ಪೆಷಲ್ ರಿಪೇರಿ ಆಗಿಲ್ಲ. ಇವುಗಳ ರಿಪೇರಿ ಆಗದ ಹೊರತು ನೀರು ನಿಲ್ಲುವುದಕ್ಕೆ ಅವಕಾಶವಾಗುವುದಿಲ್ಲ. ಆದ್ದರಿಂದ ಅವುಗಳನ್ನು ರಿಪೇರಿ ಮಾಡಿಸಿ ಎಂದು ಸರ್ಕಾರಕ್ಕೆ ಅನೇಕ ಸಾರಿ ಹೇಳಿದ್ದರೂ ಕೂಡ ಆ ಬಗ್ಗೆ ಸರ್ಕಾರ ಗಮನ ಕೊಟ್ಟಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ದೇಶದಲ್ಲಿ ಜನತೆಯ ಕಷ್ಟಸುಖಗಳನ್ನು ಪರಿಹಾರಮಾಡಬೇಕು ಎನ್ನತಕ್ಕ ಯೋಚನೆಯೇ ಸರ್ಕಾರಕ್ಕೆ ಇಲ್ಲ. ಎಲ್ಲರಿಗೂ ಹಣ ಮಾಡುವುದು ಒಂದೇ ಯೋಚನೆ. ಯಾವ ಅಧಿಕಾರಿಯೇ ಆಗಲೀ ಯಾವರೀತಿಯಿಂದಲಾಗಲೀ ಹಣ ಸಂಪಾದನೆಯನ್ನು ಮಾಡಬೇಕು ಎಂಬ ದೃಷ್ಟಿಯನ್ನು ಇಟ್ಟುಕೊಂಡು ಆ ಕೆಲಸದಲ್ಲಿ ತೊಡಗಿದ್ದಾರೆ. ಈ ಸರ್ಕಾರದವರು ಹಣ ಸಂಪಾದನೆಯನ್ನು ಮಾಡತಕ್ಕ ಮನುಷ್ಯರನ್ನು ನಿರ್ಮಾಣ ಮಾಡುತ್ತಿದ್ದಾರೆ ' ನನಗೆ ಮಾನ್ಯ ಕಂದಾಯ ಮಂತ್ರಿಗಳಲ್ಲಿ ಗೌರವ ಇದೆ. ನಾನು ಸರ್ಕಾರದ ಬಗ್ಗೆ ಈ ಮಾತುಗಳನ್ನು ಹೇಳುತ್ತಿದ್ದೇನೆ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ

4.-00 P. M.

ಇವತ್ತು ಕೋಆಪರೇಟಿವ್ ಇಲಾಖೆಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈ ಹಣದಿಂದ ಕೆಲವರಿಗೆ ಮಾತ್ರ ಅನುಕೂಲವಾಗಿದೆ. ಈ ಇಲಾಖೆಯ ಒಬ್ಬರು ಅಧಿಕಾರಿಯನ್ನು ವರ್ಗ ಮಾಡಿದ್ದರೂ ಕೂಡ ಅವರು ಬೇರೆ ಸ್ಥಳಕ್ಕೆ ಹೋಗಲಿಲ್ಲ. ಅದೇ ಅಧಿಕಾರಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದಾಗ ಅದರಲ್ಲಿ ಒಬ್ಬರು ಕ್ಯಾಬಿನೆಟ್ ಮಂತ್ರಿಗಳು ಭಾಗವಹಿಸಿದ್ದರು. ಒಬ್ಬ ಸರ್ಕಾರೀ ನೌಕರರ ಒಗ್ಗೆ ಮಂತ್ರಿಗಳು ಇಷ್ಟೊಂದು ಸಂಪರ್ಕ ಇಟ್ಟುಕೊಂಡಿರುವುದರಿಂದಲೇ ರಾಜ್ಯದ ಆಡಳಿತ ಇಷ್ಟೊಂದು ಸಡಿಲವಾಗಿರುವುದು. ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಎಲ್ಲರೂ ಹಣ ಮಾಡಿಕೊಳ್ಳುತ್ತಿದ್ದಾರೆ. ಕೇಂದ್ರಸರ್ಕಾರದವರು ನಮ್ಮ ರಾಜ್ಯಕ್ಕೆ ಕ್ಷಾಮ ಪರಿಹಾರ ಕಾಮಗಾರಿಗಾಗಿ ಮತ್ತೆ ೨ ಕೋಟಿ ರೂಪಾಯಿ ಗಳನ್ನು ಕೊಟ್ಟಿದ್ದಾರೆ. ಈ ಹಣ ಯಾವ ರೀತಿ ಖರ್ಚಾಗುತ್ತದೆ ಎಂಬುದನ್ನು ನೋಡಬೇಕಾಗಿದೆ. ಸಪ್ಲಿ ಮೆಂಟರಿ ಡಿಮ್ಯಾಂಡ್‌ನಲ್ಲಿ ಈ ಬಾಬಿಗೆ ಮತ್ತೆ ಎರಡು ಕೋಟಿ ರೂಪಾಯಿಗಳಷ್ಟು ಪ್ರಾವಿಜನ್ ಮಾಡಿದ್ದಾರೆ. ಅಂದರೆ ಒಟ್ಟು ೪ ಕೋಟಿ ರೂಪಾಯಿಗಳಾಗುತ್ತದೆ. ಇಷ್ಟು ಹಣವನ್ನು ಶಾಶ್ವತವಾದಂಥ ಕೆಲಸಗಳಿಗೆ ಉಪಯೋಗಿಸಿದರೆ ಬಡ ಜನರಿಗೆ-ಮುಂದೆ ಬಹಳ ಅನುಕೂಲವಾಗುತ್ತದೆ. ಈಗ ಈ ಹಣದಿಂದ ರೂರಲ್ ಕಮ್ಯುನಿಕೇಷನ್ ರೋಡ್ಸ್ ಎಂಬುದಾಗಿ ಮಾಡುತ್ತಾರೆ. ಮಣ್ಣು ತೆಗೆದುಹಾಕುವುದಕ್ಕೆ ಇವರಿಗೆ ಅವಕಾಶವಿದೆಯೇ ಹೊರತು ಒಂದು ಗಿಡ ಕಡಿಯುವುದಕೆ ಇವರಿಗೆ ಅವಕಾಶವಿಲ್ಲ. ಹಾಕಿದಂಥ ಮಣ್ಣು ಕೊಚ್ಚಿಕೊಂಡು ಹೋಗದಂತೆ ಕಲ್ಲು ಕಟ್ಟುವುದಕ್ಕೆ ಇವರಿಗೆ ಅವಕಾಶವಿಲ್ಲ. ಆದ್ದರಿಂದ ಮಳೆ ಬಂದ ಕೂಡಲೆ ಇವರು ಮಾಡಿದಂಥ ಕೆಲಸವೆಲ್ಲಾ ಹಾಳಾಗಿ ಹೋಗುತ್ತದೆ ಆದ್ದರಿಂದ ಶಾಶ್ವತವಾದಂಥ ಕೆಲಸ ಗಳನ್ನು ಮಾಡಿಸಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕ್ಷಾಮ ಬಂದಾಗ ಜನರಿಗೆ ಹೊಸ ಹೊಸ ರೋಗಗಳು ಸಹ ಬರುತ್ತವೆ, ಹವಾಗುಣ ಕೂಡ ಕೆಟ್ಟು ಹೋಗುತ್ತದೆ. ರೋಗ ಬಂದಂಥ ಜನರು ಆಸ್ಪತ್ರೆಗೆ ಹೋದರೆ ಔಷಧ ಇಲ್ಲ ಎಂದು ಹೇಳಿ ಹೊರಗಡೆ ಕೊಂಡು ಕೊಳ್ಳಲು ಚೀಟಿ ಬರೆದುಕೊಡುತ್ತಾರೆ. ಬಡಜನರಿಗೆ ಔಷಧ ಕೊಂಡುಕೊಳ್ಳುವಂಥ ಶಕ್ತಿ ಇರುವುದಿಲ್ಲ. ಆದ್ದರಿಂದ ಕ್ಷಾಮ ಪರಿಹಾರ ನಿಧಿಯಿಂದ ಸ್ವಲ್ಪ ಹಣವನ್ನು ಆರೋಗ್ಯ ಇಲಾಖೆಗೆ ಕೊಟ್ಟು ಎಲ್ಲಾ ಆಸ್ಪತ್ರೆ ಗಳಲ್ಲಿಯೂ ಕೂಡ ಹೆಚ್ಚು ಔಷಧವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ಬೋರ್ಡಿನವರು ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಬೇಕಾದರೆ ಒಂದು ಹಾರ್ಸ್‌ಪವರೆ ಇಷ್ಟು ಖರ್ಚು ಬಂದರೆ ಮಾತ್ರ ಲೈನ್ ಹಾಕುತ್ತೇವೆಂದು ಹೇಳುತ್ತಾರೆ. ಇದರಿಂದ ನನ್ನ ಕ್ಷೇತ್ರದ ಒಂದು ಭಾಗದವರು ಕಳೆದ ನಾಲ್ಕು ವರ್ಷದಿಂದ ಪಂಪ್‌ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಪಡೆಯುವುದಕ್ಕೆ ಸಾಧ್ಯ ವಾಗಿಲ್ಲ. ಅಲ್ಲಿ ೧೭ ಬಾವಿಗಳು ಇವೆ ನಾಲ್ಕು ಮೈಲಿ ದೂರ ಲೈನ್ ಎಳೆಯುವುದಕ್ಕೆ ೪೦ ಸಾವಿರರೂಪಾಯಿ ಎಸ್ಟಿಮೇಟ್ ಆಗುತ್ತದೆ. ಈ ಹಣವನ್ನು ಕೊಡುವುದಕ್ಕೆ ಆ ಭಾಗದ ರೈತರಿಗೆ ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ಕ್ಷಾಮ ಪರಿಹಾರದ ನಿಧಿಯಿಂದ ಹಣ ಖರ್ಚು ಮಾಡಿ ಅವರಿಗೆ ಕರಂಟ್ ಕೊಡಿಸಿದರೆ ಅದೂ ಕೂಡ ಒಂದು ರೀತಿಯ ಪರಿಹಾರ ಕಾರ್ಯವಾಗುತ್ತದೆ. ಮತ್ತು ಹೆಚ್ಚು ಆಹಾರ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ಏನೋ ಒಂದು ರೀತಿ ನಡೆದುಕೊಂಡು ಹೋಗುತ್ತಿದೆ, ಅದೇ ರೀತಿ ನಡೆದುಕೊಂಡು ಹೋಗಲಿ ಎಂದು ಹಣವನ್ನು ಇಷ್ಟಬಂದಂತೆ ಖರ್ಚು ಮಾಡಿದರೆ ಅದರಿಂದ ಯಾವ ಪ್ರಯೋಜನವೂ ಸಹ ಆಗುವುದಿಲ್ಲ.

ನಮ್ಮ ಭಾಗದ ಬಾಗಾಯ್ತು ಜಮೀನಿಗೆ ಮಾನ್ಯ ಮಂತ್ರಿಗಳು ಕಂದಾಯವನ್ನು ವಜಾ ಮಾಡಬೇಕು. ಮತ್ತು ತುಮಕೂರು ಜಿಲ್ಲೆಯಲ್ಲಿ ಶಾಶ್ವತ ಪರಿಹಾರ ಕಾಮಗಾರಿ ಕೆಲಸಗಳನ್ನು ಕೈಕೊಳ್ಳಬೇಕು. ಹಿಂದೆ ಲಕ್ಷ ರೂಪಾಯಿಗಳನ್ನು ಎರಡು ಖರ್ಚು ಮಾಡಿ ಚಿಕ್ಕನಾಯಕನಹಳ್ಳಿಯ ಬಳಿ ಬೋರನ ಕಣವೆ ಕೆಳಗೆ ಒಂದು ಕೆರೆಯನ್ನು ಕಟ್ಟಿಸಿದರು. ಆ ಕೆರೆಯಿಂದ ಎರಡು ಸಾವಿರ ಎಕರೆ ಜಮೀನು ನೀರಾವರಿಯಾಗುತ್ತಿದೆ ಇಂತಹ ಒಂದು ಶಾಶ್ವತವಾದಂಥ ಕೆಲಸಗಳನ್ನು ಈಗಿನ ಸರ್ಕಾರದವರು ಮಾಡಿಸಿದ್ದರೆ ನಾವು ಸಂತೋಷಪಡುತ್ತಿದ್ದೆವು. ಆದರೆ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಈಗಿನ ಸರ್ಕಾರದವರು ತಮಗೆ ಇಷ್ಟ ಬಂದ ಕಡೆ ಶಾಶ್ವತವಲ್ಲದ ಪರಿಹಾರ ಕಾಮಗಾರಿ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಇದು ಸರಿಯಲ್ಲ, ಇದರಲ್ಲಿ ರಾಜಕೀಯ ತರುವುದು ಸರಿಯಲ್ಲ. ಅಭಾವ ಪ್ರದೇಶಗಳಲ್ಲಿ ಶಾಶ್ವತವಾದಂಥ ಪರಿಹಾರ ಕೆಲಸಗಳನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

(MR. SPEAKER in the Chair)

MR. SPEAKER :—Before I call upon Sri Nagappa to speak, I would like to inform the House that two days were originally given for the discussion on scarcity conditions, and this is the third day. I would call upon the Hon. Minister to reply to the debate at 5.00 P.M. Therefore it may not be possible for me to allot more than five minutes to each member. Hon. Members who do not get their chance now may make their observation on this subject while speaking on the Supplementary Estimates.

SRI B.B. SAYANAK:—Sir, the Hon. Minister may require only halfanhour for his reply, and therefore the discussion may be extended upto 5.30 P.M.

MR. SPEAKER:— I accept the suggestion of the Hon. Member. I shall call upon the Hon Minister to reply at 5.30 P.M.

• † ಶ್ರೀ ನಾಗಪ್ಪ (ಮಂಡ್ಯ) : ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಆಗಾಗ್ಗೆ ಅಭಾವ ಪರಿಸ್ಥಿತಿ ಬರುವುದನ್ನು ತಪ್ಪಿಸುವುದಕ್ಕೋಸ್ಕರ ಸರ್ಕಾರದವರು ಶಾಶ್ವತವಾದಂಥ ಕಾರ್ಯಕ್ರಮಗಳನ್ನು ಕೈಕೊಳ್ಳುವುದು ಸೂಕ್ತವೆಂದು ಕಾಣುತ್ತದೆ. ತಾಲ್ಲೂಕ್ ಅಭಿವೃದ್ಧಿ ಸಮಿತಿ ಇರುವ ಕಡೆಯೂ ಕೂಡ ಕುಡಿಯುವ ನೀರಿನ ಬಾವಿ ತೋಡಿಸಬೇಕಾದರೆ ಜಿಲ್ಲಾಧಿಕಾರಿಯವರು ಬಂದು ಇನ್ಸ್‌ಪೆಕ್ಷನ್ ಮಾಡಿ ಅವರು ಬಾವಿ ತೆಗೆಯಬಹುದು ಎಂದು ಹೇಳಿದಮೇಲೆ ಬಾವಿ ಕೆಲಸ ಪ್ರಾರಂಭವಾಗುತ್ತದೆ. ಇರತಕ್ಕಂಥ ಬಾವಿಗಳಲ್ಲಿ ನೀರು ಇಲ್ಲದಾಗ ಅವನ್ನು ಆಳವಡಿಸಬೇಕಾದರೂ ಕೂಡ ಜಿಲ್ಲಾಧಿಕಾರಿಯವರ ಅನುಮತಿ ಬೇಕಾಗಿದೆ. ಎಲ್ಲಕ್ಕೂ ಜಿಲ್ಲಾಧಿಕಾರಿಯವರ ಅನುಮತಿ ಬೇಕಾದರೆ ತಾಲ್ಲೂಕ್ ಅಭಿವೃದ್ಧಿ ಸಮಿತಿಯಾದರೂ ಕೂಡ ಏತಕ್ಕೆ ಇರಬೇಕು. ಅದನ್ನು ರದ್ದು ಮಾಡುವುದು ಒಳೆಯದು. ತಾಲ್ಲೂಕ್ ಅಭಿವೃದ್ಧಿ ಸಮಿತಿಯವರಿಗೆ ಯಾವ ಯಾವ ಊರಿನಲ್ಲಿ ಕುಡಿಯುವ ನೀರಿನ ಅವಶ್ಯಕತೆ ಇದೆ ಎಂಬುದು ಗೊತ್ತಿರುತ್ತದೆ. ಆದ್ದರಿಂದ ಈ ಬಂದು ಕೆಲಸವನ್ನು ತಾಲ್ಲೂಕ್ ಅಭಿವೃದ್ಧಿ ಸಮಿತಿಯವರಿಗೆ ವಹಿಸಬೇಕು. ತಾಲ್ಲೂಕ್ ಅಭಿವೃದ್ಧಿ ಸಮಿತಿಯವರ ಮೇಲೆ ಸರ್ಕಾರದವರು ನಂಬಿಕೆ ಇಡಬೇಕು. ಕುಡಿಯುವ ನೀರಿನ ತೊಂದರೆ ಎಲ್ಲೆಲ್ಲಿ ಇದೆ ಅಲ್ಲಿ ಬಾವಿ ತೋಡಿಸುವುದಕ್ಕೆ ಇವರಿಗೆ ಅವಕಾಶ ಕೊಟ್ಟರೆ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ. ಮತ್ತು ಕುಡಿಯುವ ನೀರಿನ ತೊಂದರೆಯೂ ಕೂಡ ನಿವಾರಣೆಯಾಗುತ್ತದೆಂದು ನನ್ನ ಅಭಿಪ್ರಾಯ. ಅ ಎವ ಪರಿಸ್ಥಿತಿ ಬಂದಾಗ ಸರ್ಕಾರದವರು ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳಲು ಯೋಚನೆ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಅಭಾವ ಎಂಬುದು ಪ್ರತಿವರ್ಷವು ಕೂಡ ಬರುತ್ತಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಒಂದು ಸರಿಯಾದಂಥ ಪ್ಲಾನನ್ನು ಮಾಡಿ ಶ್ವಾತವಾದಂಥ ಕಾರ್ಯಕ್ರಮ ಕೈಕೊಳ್ಳುವ ಕಡೆ ಗಮನ ಕೊಟ್ಟರೆ ಒಳ್ಳೆಯದು.

ಕಮ್ಯೂನಿಟಿ ಇರಿಗೇಷನ್ ಕಡೆಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ನಮ್ಮ ಮಂಡ್ಯ ಜಿಲ್ಲೆ ತೆಗೆದು ಕೊಂಡರೆ ನಮ್ಮ ಕಡೆ ಷಿಂಷಾ ಹಾಗೂ ಲೋಕಪಾವನಿ ನದಿಯಲ್ಲಿ ಬರುವ ನೀರು ಅನಾವಶ್ಯಕವಾಗಿ ಹರಿದು ಮದ್ರಾಸಿನ ಕಡೆಗೆ ಇರುವ ಸಮುದ್ರದಕ್ಕೆ ಹೋಗುತ್ತದೆ. ಇದನ್ನು ತಪ್ಪಿಸಲು ಸರಿಯಾದ ಒಂದು ಅಣೆಕಟ್ಟು ಮಾಡಿ ನೀರನ್ನು ಶೇಖರಿಸಿದರೆ ಸ್ವಲ್ಪ ಮಟ್ಟಿನ ನೀರಾವರಿಗೆ ಅನುಕೂಲವಾಗುತ್ತದೆ. ಈಗ ಇಲ್ಲಿರುವ ನದಿಗಳ ಹತ್ತಿರದ ಒಂದು ರಿಸರ್ವಾಯರು ಮಾಡಿದರೆ ಇಲ್ಲಿರುವ ಹತ್ತು ಹದಿನೈದು ಪಂಚಾಯತಿಗಳಲ್ಲಿರುವ ಗ್ರಾಮಗಳಿಗೆ ಸ್ವಲ್ಪಮಟ್ಟಿನ ನೀರು ಸೌಕರ್ಯ ಸಿಕ್ಕಿ ಇಲ್ಲಿನ ಜನಕ್ಕೆ ಅನುಕೂಲವಾಗುತ್ತದೆ. ಇನ್ನು ನಮ್ಮ ಸರಕಾರದ ಅಧಿಕಾರಿಗಳು ಅಲ್ಲಲ್ಲಿ ರಿಲೀಫ್ ವರ್ಕುಗಳನ್ನು ಮಾಡುತ್ತಿದ್ದಾರೆ. ಆದರೆ ಮಳೆ ಬಂದ ತಕ್ಷಣ ಎಲ್ಲ ರಿಲೀಫ್ ವರ್ಕ್ಸ್ ಬೇಕೆಂದು ಆದೇಶ ಕಳುಹಿಸಿರುತ್ತಾರೆ. ಹೀಗೆ ಮಾಡಿದರೆ ಈಗ ಅಲ್ಲಿ ರಾಗಿ ಆಗಲೀ ಭತ್ತವಾಗಲಿ ಬೆಳೆ ಮಾಡಲು ಸಾಧ್ಯವೇ? ಹುರುಳಿ ಬೆಳೆ ಕೂಡ ಹಾಳಾಗಿ ಹೋಯಿತು. ಹಾಗಿರುವಾಗ ಸರಕಾರದ ಅಧಿಕಾರಿಗಳು ಮಳೆ ಬಂದ ಕೂಡಲೇ ಕೆಲಸ ನಿಲ್ಲಿಸಬೇಕು ಎಂದು ಹೇಳುವುದು ಸರಿಯಲ್ಲ. ಮಳೆ ಬಂದರೂ ರಿಲೀಫ್ ಕಾಮಗಾರಿಗಳನ್ನು ಮುಂದುವರಿಸಿಕೊಂಡು ಹೋಗಬೇಕು. ಹೀಗೆ ಕ್ಷಾಮ ಪರಿಹಾರ ಕಾಮಗಾರಿ ಕೆಲಸಗಳನ್ನು

ನಿಲ್ಲಿಸುವುದು ಸೂಕ್ತವಲ್ಲ. ಇದೂ ಅಲ್ಲದೆ ಕ್ಷಾಮ ಪರಿಹಾರ ಕೆಲಸಗಳು ಹಳ್ಳಿಯ ಕಡೆ ಹೇಗೆ ಆಗುತ್ತದೆ ಎಂದು ನೋಡಿದರೆ ಇಲ್ಲಿ ಎಲ್ಲ ಕೆಲಸಗಳನ್ನೂ ಕಂಟ್ರಾಕ್ಟರುಗಳಿಗೆ ವಹಿಸುತ್ತಾರೆ. ಇವರು ರಸ್ತೆ ಕೆಲಸ ಮಾಡಿದ್ದೇನೆ ಎಂದು ಸುಮಾರು ೨೫ ಆಳುಗಳನ್ನು ತೆಗೆದುಕೊಂಡು ಮೂರು ದಿನ ಕೆಲಸ ಮಾಡಿ ಸರಕಾರಕ್ಕೆ ೨೦೦೦ ರೂಪಾಯಿಗಳ ಬಿಲ್ಲು ತಂದು ಹಣ ಪಡೆಯುತ್ತಾರೆ. ಇವರು ಕೂಲಿಗಾಗಿ ಕೊಡುವುದು ದಿನಕ್ಕೆ ಮೂರು ರೂಪಾಯಿನಂತೆ ಆದರೂ ಸುಮಾರು ೬೫-೧೦೦ ರೂಪಾಯಿಗಳಷ್ಟು ಖರ್ಚು ಮಾಡಿ ಎರಡು ಸಾವಿರ ರೂಪಾಯಿಗಳ ಆದಾಯ ಪಡೆಯುತ್ತಿದ್ದಾರೆ ಮತ್ತು ಇವರುಗಳು ಮಾಡುವ ಕೆಲಸಗಳೂ ಸರಿಯಾಗಿರುವುದಿಲ್ಲ ಇದಕ್ಕೆ ಬದಲಾಗಿ ಶಾಶ್ವತವಾದ ಕೆಲಸಕಾರ್ಯಗಳನ್ನು ಎಲ್ಲ ಕಡೆಗಳಲ್ಲೂ ಮಾಡಲು ಪ್ರಯತ್ನ ಮಾಡಬೇಕು. ಎಲ್ಲಿ ಮಳೆಯ ಅಭಾವ ಇದೆಯೋ ಅಲ್ಲಿ ಬೇರೆ ತರಹದ ಉದ್ಯಮಗಳನ್ನು ಮಾಡಲು ಅವಕಾಶ ಮಾಡಿಕೊಡಬೇಕು ಇಲ್ಲಿ ಕೋಳಿ ಸಾಕಾಣಿಕೆ, ಕುರಿಸಾಕಾಣಿಕೆ ಕೇಂದ್ರಗಳು ಇಂತಹ ಕಾರ್ಯಕ್ರಮಗಳನ್ನು ಮಾಡಲು ಸರಕಾರ ಸಬ್ಸಿಡಿ ರೂಪದಲ್ಲಿ, ಗ್ರಾಂಟುಗಳ ರೂಪದಲ್ಲಿ ಅನುಕೂಲ ಮಾಡಿಕೊಡಬೇಕು. ಮತ್ತು ನಮ್ಮ ಬಡ ಜನರಿಗೆ ಸಹಾಯವಾಗುವಂತೆ ಅವರು ಜೀವನ ನಡೆಸಲುಅನುಕೂಲ ವಾದ ಕೆಲಸಗಳನ್ನು ಸರಕಾರ ಮಾಡಿಕೊಡಬೇಕು ಮತ್ತು ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡು ಜನರ ಕಷ್ಟವನ್ನು ನಿವಾರಣೆ ಮಾಡಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಅರಕೇರಿ: (ಬಳ್ಳೊಳ್ಳಿ):- ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆ ಬರಗಾಲಕೆ ಪ್ರಸಿದ್ಧವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಕಳೆದ ನಾಲ್ಕೈದು ವರ್ಷಗಳಿಂದಲೂ ಸರಕಾರದ ಗಮನಕ್ಕೆ ತರುತ್ತಿದ್ದೇನೆ ಮತ್ತು ಮಾನ್ಯ ಕಂದಾಯ ಮಂತ್ರಿಗಳಿಗೂ ಇದರ ಕಡೆಗೆ ಹೆಚ್ಚು ಲಕ್ಷ ಕೊಡಬೇಕೆಂದು ಹೇಳಿ ಹೇಗಾದರೂ ಮಾಡಿ ಬರಗಾಲವನ್ನು ನಿವಾರಣೆ ಮಾಡಲು ಯೋಚನೆ ಮಾಡಬೇಕು ಎಂದು ಒತ್ತಾಯ ತರುತ್ತಲೇ ಇದ್ದೇವೆ. ಸರಕಾರ ಇದುವರೆಗೆ ಯಾವ ವಿಧವಾದ ಶಾಶ್ವತವಾದ ಕಾರ್ಯಕ್ರಮಗಳನ್ನೂ ಕೈಗೊಳ್ಳಲಿಲ್ಲ ಎಂದು ಈ ಮಾತನ್ನು ಸ್ಪಷ್ಟವಾಗಿ ಇಲ್ಲಿ ಹೇಳಬೇಕಾಗಿದೆ. ಕೇಂದ್ರ ಸರಕಾರದಲ್ಲಿ ಕ್ಷಾಮ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುವ ಪಟ್ಟಿಯಲ್ಲಿ ಬಿಜಾಪುರದ ಕೆಲವು ತಾಲ್ಲೂಕುಗಳನ್ನು ಸೇರಿಸಬೇಕೆಂದು ಈ ರಾಜ್ಯ ಸರಕಾರ ಶಿಫಾರಸು ಮಾಡಿದೆ. ಯಾವ ಯಾವ ತಾಲ್ಲೂಕುಗಳನ್ನು ಮಾಡಿದ್ದಾರೆ ಎಂದರೆ ಬಾಗೇವಾಡಿ, ಮುಧೋಳ್, ಬಾದಾಮಿ, ಬೀಳಗಿ ಹಾಗೂ ಬಿಜಾಪುರ ಕಳೆದ ೨೦ ವರ್ಷಗಳಿಂದಲೂ ಬಿಜಾಪುರ ಜಿಲ್ಲೆಯಲ್ಲಿ ಬರಗಾಲಕ್ಕೆ ತುತ್ತಾಗುತ್ತಿರುವ ನಾಲ್ಕು ತಾಲ್ಲೂಕುಗಳು ಎಂದರೆ, ಮೊದಲನೆಯದು ಬಿಜಾಪುರ ತಾಲ್ಲೂಕಾ, ಎರಡನೇದು ಇಂಡೀ ತಾಲ್ಲೂಕಾ ಮೂರನೇದು ಸಿಂಧಗಿ ತಾಲ್ಲೂಕಾ, ನಾಲ್ಕನೇದು ಬಾದಾಮಿ ತಾಲ್ಲೂಕಾ. ಇವು ಪ್ರಮುಖವಾದ ಬರಗಾಲದ ಸ್ಥಳಗಳು ಎಂದು ಕೇಂದ್ರ ಸರಕಾರದವರು ಒಂದು ಸರ್ವೇ ಮಾಡಿರುವ ಪುಸ್ತಕದಲ್ಲಿ ಹೇಳಿರುವುದು ಸ್ಪಷ್ಟವಾಗಿ ನಮಗೆ ತಿಳಿದುಬರುತ್ತದೆ. ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವಾಗ ನಮ್ಮ ಸರಕಾರ ಇಂಡಿ, ಬೀಳಗಿ, ಬಾದಾಮಿ ಇಂತಹ ತಾಲ್ಲೂಕುಗಳನ್ನು ಏತಕ್ಕಾಗಿ ಅವರ ಪಟ್ಟಿಯಲ್ಲಿ ಸೇರಿಸಲಿಲ್ಲ? ಇದೊಂದು ದುರ್ದೈವದ ಸಂಗತಿ. ಇದರಲ್ಲೇನೋ ರಾಜಕೀಯ ಕೈವಾಡ ಇದೆ ಎನ್ನುವುದು ಇದರಿಂದ ಕಂಡು ಬರುತ್ತದೆ ಎಂದು ಇಲ್ಲಿ ಹೇಳಬೇಕಾಗಿದೆ. ಇಂಡಿ ತಾಲ್ಲೂಕಾದಲ್ಲಿ ಕಾಂಗ್ರೆಸ್ಸಿಗೆ ವಿರೋಧವಾದ ಸದಸ್ಯರು ಇಲ್ಲಿಗೆ ಬಂದಿದ್ದಾರೆ ಎಂದು ಇದನ್ನು ಸೇರಿಸಿಲ್ಲ ಎನ್ನುವುದು ಇದರಲ್ಲಿ ಸ್ಪಷ್ಟವಾಗಿದೆ. ಹಾಗೇ ಮುದೋಳ ತಾಲ್ಲೂಕಾದಿಂದ ನಮ್ಮ ವಿರೋಧಪಕ್ಷಕ್ಕೆ ಸೇರಿದ ಶ್ರೀ ನಾಡಗೌಡರು ಇಲ್ಲಿಗೆ ಬಂದಿದ್ದಾರೆಂದು ಇದನ್ನೂ ಪಟ್ಟಿಗೆ ಸೇರಿಸಲಲ್ಲ. ಆಮೇಲೆ ಆರ್. ಎಂ. ದೇಸಾಯಿಯವರು ಇಲ್ಲಿಗೆ ಸದಸ್ಯರಾಗಿ ಬಂದಿದ್ದಾರೆಂದು ಮತ್ತು ಸರಕಾರಕ್ಕೆ ವಿರೋಧವಾಗಿದ್ದಾರೆಂದು ಈ ಪಟ್ಟಿಯಲ್ಲಿ ಅವರ ಬೀಳಗಿ ಕ್ಷೇತ್ರವನ್ನೂ ಸೇರಿಸಲಿಲ್ಲ. ಹಾಗೇ ಸಿಂದಗಿ ತಾಲ್ಲೂಕನ್ನೂ ಕೂಡ ಸೇರಿಸಲಿಲ್ಲ ಬಿಜಾಪುರವನ್ನು ಸೇರಿಸಲಿಕ್ಕೆ ಕಾರಣ ಇಲ್ಲಿ ಆ ಕ್ಷೇತ್ರದ ಮಂತ್ರಿಗಳು ಸರಕಾರದಲ್ಲಿ ಒತ್ತಾಯ ತಂದು ಇರುವುದರಿಂದಾಗಿ ಇರಬಹುದು. ಹೀಗ ಇಂತಹ ಬರಗಾಲದ ತಾಲ್ಲೂಕಾಗಳನ್ನು ಸೇರಿಸಿದೇ ಇರಬೇಕಾದರೆ ಇದರಲ್ಲಿ ಏನೋ ರಾಜಕೀಯ ಕಾರಣ ಇರಬಹುದು ಎನ್ನುವುದುಸ್ಪಷ್ಟವಾಗಿ ಕಾಣುತ್ತದೆ, ನಮ್ಮ ಸರಕಾರದಲ್ಲಿ ಕಂದಾಯ ಮಂತ್ರಿಗಳಾಗಿ ಬಂದಿರುವವರು ಬಹಳ ಒಳ್ಳೆಯವರು ಮತ್ತು ನಮ್ಮ ಭಾಗದಿಂದಲೇ ಬಂದವರಾಗಿರುವುದರಿಂದ ಅವರಿಗೆ ಪರಿಸ್ಥಿತಿಯೆಲ್ಲಾ ಚೆನ್ನಾಗಿ ಗೊತ್ತಿದೆ. ಹಾಗಿದ್ದರೂ ಅವರು ಕೂಡ ಕೇಂದ್ರಕ್ಕೆ ಶಿಫಾರಸು ಮಾಡುವಾಗ ಬಾಗೇವಾಡಿ, ಬಾದಾಮಿ, ಮುಧೋಳ ಇಂತಹ ತಾಲ್ಲೂಕುಗಳನ್ನು ಕೈಬಿಡಲು ಕಾರಣವೇನೋ ತಿಳಿಯಲಿಲ್ಲ. ಬಿಜಾಪುರ ಎಲ್ಲಾ ತಾಲ್ಲೂಕುಗಳಲ್ಲೂ ಬರಗಾಲದ ಸ್ಥಿತಿ ಇರುವಾಗ ರಾಜಕೀಯ ಕಾರಣಗಳಿಂದಾಗಿ ಕೆಲವು ತಾಲ್ಲೂಕುಗಳನ್ನು ಮಾತ್ರ ಪಟ್ಟಿಗೆ ಸೇರಿಸಿರುವುದು ಕಂಡುಬರುತ್ತದೆ. ನಾವು ಬರಗಾಲಕ್ಕೆ ಸಹಾಯ ಮಾಡಬೇಕೆಂದು ಇಲ್ಲಿ ಒತ್ತಾಯ ತಂದು ಹೇಳುತ್ತಿದ್ದರೂ ಹಿಂದೆ ನಮ್ಮ ಭಾಗದ ಕಡೆಯಿಂದ ಬಂದಿದ್ದ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಹಾಗೂ ಜತ್ತಿಯವರು ಏನೂ ಮಾಡಲಾಗಲಿಲ್ಲ. ಮುಂದೆ ಬರುವ

(ಶ್ರೀ ಎಸ್. ಎಸ್. ಅರಕೇರಿ)

ಸರಕಾರವಾದರೂ ಮಾಡುತ್ತದೆ ಎಂದು ಆಸೆಯಿಂದ ಇದ್ದೆವು ಅದೂ ಕೂಡ ಆಗುತ್ತಿಲ್ಲ. ಹಾಗೇ ಈಗಿನ ಸರಕಾರ ಅಪ್ಪರು ಕೃಷಿ- ಯೋಜನೆಗೆ ಸೈಟು ಗೊತ್ತುಮಾಡುವಾಗ ನಮಗೆ ಆಲಮಟ್ಟಿ ವಿರೋಧವಾಗಿದ್ದರೂ ನಾವು ಅದಕ್ಕೆ ಒಪ್ಪಿಗೆ ಕೊಟ್ಟೆವು, ಕೇಂದ್ರ ಸರಕಾರವು ಇದನ್ನು ಒಪ್ಪಿದೆ. ಆಲಮಟ್ಟಿ ಸೈಟಿನಿಂದ ಇದೂ ಆಲಮಟ್ಟಿ, ಬಿಜಾಪುರ, ಇಂಡಿ ಸಿಂದಗಿ, ಮುಧೋಳ ಹಾಗೂ ಬೀಳಗಿ ಇತ್ಯಾದಿ ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ ಮತ್ತು ಇಲ್ಲಿನ ಜನಕ್ಕೆ ಸಹಾಯ ಆಗುತ್ತದೆ ಎಂದು ನಾವೂ ಆಲಮಟ್ಟಿ ಯೋಜನೆಗೆ ಒಪ್ಪಿಗೆ ಕೊಟ್ಟೆವು. ನಮ್ಮ ಮಂತ್ರಿಗಳೂ ಕೂಡ ಇದನ್ನು ಸರಿಯಾಗಿ ವಿಚಾರ ಮಾಡಿ ಮಾಡುತ್ತಾರೆಂದಗೆ ನಂಬುತ್ತೇವೆ.

ಈಗ ಬಿಜಾಪುರ ಜಿಲ್ಲೆಗೆ ಸರ್ಕಾರದವರು ರೂಪಿಸತಕ್ಕ ಯೋಜನೆಯೇನಿದೆ ಇದನ್ನು ಕ್ಯಾಬಿನೆಟ್ಟಿನವರು ರಿವ್ಯೂಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಹಾಗೆ ನಮ್ಮ ಕ್ಯಾಬಿನೆಟ್ಟಿನವರು ಮಾಡದಿದ್ದರೆ, ನಾವು ಈ ವಿಚಾರದಲ್ಲಿ ಕೇಂದ್ರದವರೆಗೂ ದೂರನ್ನು ಒಯ್ದು ಅಲ್ಲಿಂದ ಈ ಸರ್ಕಾರಕ್ಕೆ ಒಂದು ಒತ್ತಾಯವನ್ನು ತರಬೇಕಾಗಿ ಬರುತ್ತದೆ. ಅಷ್ಟಕ್ಕೆ ಅವಕಾಶ ಕೊಡಬಾರದೆಂದು ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. I request the Hon. Minister to impress upon his colleagues in the Cabinet to include these taluks, viz. Indi, Sindgi, Mudhol, Badam and Jamkhandi. ಬಿಜಾಪುರ ಜಿಲ್ಲೆಯ ಪ್ರತಿಯೊಂದು ಭಾಗವು ಕ್ಷಾಮಕ್ಕೆ ತುತ್ತಾಗಿದೆ. ಬಿಜಾಪುರವನ್ನು ಹಿಂದೆ ಇವರು ನಂದನವನವನ್ನಾಗಿ ಮಾಡಬೇಕೆಂದು ಇದ್ದವರು ಈಗ ಏಕೆ ಹೀಗೆ ಮಾಡಿದ್ದಾರೆ? What is the criteria on which o her taluks have been selected and why is it that these taluks have been left out? ಈಗ ಇಲ್ಲಿ ಶ್ರೀ ಬಿ. ಎಂ. ಪಾಟೀಲರು ಮಂತ್ರಿಗಳಾಗಿ ಕುಳಿತಿದ್ದಾರೆ. ಇಲ್ಲಿಯವರೆಗೂ ಆಗಿರತಕ್ಕ ದೋಷಗಳನ್ನು ಅವರೀಗ ಸರಿಪಡಿಸಬೇಕಾಗಿದೆ. ಹಾಗೆನಾದರೂ ಅವರೊಂದು ವೇಳೆ ಈ ವಿಚಾರದಲ್ಲಿ ಪ್ರಮಾಣಿಕತನದಿಂದ ನಡೆದುಕೊಳ್ಳದಿದ್ದರೆ ಹಿಂದೆ ಇದ್ದ ಶ್ರೀ ಕಂಠಿ ಮತ್ತು ಶ್ರೀ ಜತ್ತಿಯವರಿಗೇನಾಯಿತೋ ಅದೇ ಇವರಿಗೂ ಆಗುತ್ತದೆ. Not only the entire district but the entire political scene of the State will change and revolt against it.

ಆದರೆ ನಾನು ಇವರಲ್ಲಿ ಬಹಳ ಆತ್ಮೀಯತೆಯಿಂದ ಕೇಳಿಕೊಳ್ಳುವುದೇನೆಂದರೆ ಈ ಹಿಂದೆ ಬಿಜಾಪುರ ಜಿಲ್ಲೆಯನ್ನು ಏನೊಂದು ನಂದನವನವನ್ನಾಗಿ ಮಾಡಬೇಕೆಂದು ಸಂಕಲ್ಪಮಾಡಿದ್ದಾರು ವಾಗ್ದಾನ ಮಾಡಿದ್ದರು ಅದರಂತೆ ಇವರು ಕಾರ್ಯವನ್ನು ಕೈಗೊಳ್ಳಬೇಕು. ಆ ದೃಷ್ಟಿಯಿಂದ ಈಗ ಕೈಗೊಂಡಿರುವ ನಿರ್ಧಾರವನ್ನು ಬದಲಾಯಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಇನು, ನಮ್ಮಲ್ಲಿ ಕಲಕನಾಳು ಕೆರೆ ಎಂಬುದನ್ನು ಮಂಜೂರು ಮಾಡಿ ಇಲ್ಲಿಗೆ ೧೦ ವರ್ಷಗಳ ಮೇಲಾಯಿತು.ಆದರೆ ಕೆಲಸವನ್ನು ಇನ್ನೂ ಪ್ರಾರಂಭಮಾಡಿಲ್ಲ ನಾನು ಇದೇ ವಿಚಾರದಲ್ಲಿ ಮಾನ್ಯ ಕಂದಾಯ ಸಚಿವರಿಗೆ ಪತ್ರ ಬರೆದೆ. He says that it hes been directed to the Deputy Commissioner. and it has been directed to the Divisional Commissioner But what action thouse officeres have taken? ಇಲ್ಲಿಯವರೆಗೂ ಇಂಥ ಒಂದು ಉತ್ತರವು ಅವರಿಂದ ಬರಲಿಲ್ಲ. ಅಲ್ಲಿ ನಿಜವಾಗಿ ಕಷ್ಟಕ್ಕೊಳಗಾದ ಜನರಿಗೆ ಕೂಲಿ ಸಿಕ್ಕಲು ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳಿ ಎಂದರೆ ಅದನ್ನು ಮಾಡುತ್ತಿಲ್ಲ, ನಾವು ಇಲ್ಲಿ ಮಂತ್ರಿಗಳು ಮನವೊಲಿಸಿಕೊಂಡು ಕಷ್ಟದಿಂದ ಹಣವನ್ನು ಮಂಜೂರು ಮಾಡಿಸಿ ಆ ನಮ್ಮ ನಮ್ಮ ಕ್ಷೇತ್ರಗಳಿಗೆ ಕಳುಹಿಸಿದರೆ ಅಲ್ಲಿರತಕ್ಕ ಅಧಿಕಾರಿಗಳು ಬೇರೆ ಆ ಹಣವನ್ನು ಸಕಾಲಕ್ಕೆ ಸರಿಯಾಗಿ ಖರ್ಚುಮಾಡದೆ ಲ್ಯಾಪ್ಸಾಗುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ. ಅಂಥದಕ್ಕೆ ಅವಕಾಶ ಕೊಡಬಾರದು. ಇನ್ನು ನಮ್ಮ ಜಿಲ್ಲೆಯಲ್ಲಿ ಪೂರ ಬರಗಾಲಬಿದ್ದಿರುವುದರಿಂದ ಹಿಂದೆ ೧೯೭೨-೭೩ ರಲ್ಲಿ ಅಲ್ಲಿ ಹೇಗೆ ಹಳ್ಳಿ ಹಳ್ಳಿಗಳಿಗೆ ಆಹಾರಧಾನ್ಯಗಳನ್ನು ಹಂಚಲಾಯಿತೋ ಹಾಗೇ ಈಗಲೂ ಆಹಾರಧಾನ್ಯಗಳನ್ನು ಹಂಚಿಸುವುದಕ್ಕೆ ವ್ಯವಸ್ಥೆಮಾಡಬೇಕು. ಅಲ್ಲಿಯ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಅಲ್ಲಿ ಕೂಡಲೆ ಪರಿಹಾರ ಕಾರ್ಯಗಳನ್ನು ಕೈಗೊಳ್ಳದಿದ್ದರೆ ಅನೇಕ ಡೆತ್ಸ್‌ಗಳಾಗಬಹುದು. ಪರಿಸ್ಥಿತಿ ಅಷ್ಟು ಭೀಕರವಾಗಿದೆ. ಆದ್ದರಿಂದ ಸರ್ಕಾರದವರು ಆ ಇಂಡಿ, ಸಿಂಧಗಿ, ಮುಧೋಳ. ಬಾದಾಮಿ ಮತ್ತು ಜಮಖಂಡಿ ಈ ಪ್ರಾಂತ್ಯಗಳಲ್ಲಿ ಕೂಡಲೆ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಅಲ್ಲಿರತಕ್ಕ ಹರಿಜನರ ಗೋಳನ್ನು ಹೇಳತೀರುವುದಕ್ಕಾಗುವುದಿಲ್ಲ ಅವರನ್ನು ಬೇರೆಯವರು ಯಾರೂ ಕೂಲಿಯ ಕೆಲಸಕ್ಕೆ ಕರೆಯುವುದಿಲ್ಲ. ಅವರ ಜೀವನಕ್ಕೆ ಬಹಳ ತೊಂದರೆಯಾಗಿದೆ. ಆದ್ದರಿಂದ

ಕೂಡಲೇ ರಿಲೀಫ್ ಕಾಮಗಾರಿಗಳನ್ನು ಪ್ರಾರಂಭಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ) :— ಮಾನ್ಯ ಅಧ್ಯಕ್ಷರೇ : ಈ ಭಾರತ ದೇಶವನ್ನು ರಾಷ್ಟ್ರ ಕವಿಗಳು ವರ್ಣನೆ ಮಾಡತಕ್ಕ ಕಾಲದಲ್ಲಿ "ಸುಜಲಾಂ ಸುಫಲಾಂ ಮಲಯಜ ಶೀತಲಾಂ ಸಶ್ಯ ಶ್ಯಾಮಲಾಂ" ಎಂಬುದಾಗಿ ಹೇಳಿದ್ದಾರೆ ಆದರೆ ಈ ಪದ್ಯವನ್ನು ರಚನೆ ಮಾಡಿದವರು ಇದನ್ನು ಕೇವಲ ಉತ್ತರ ಹಿಂದೂಸ್ಥಾನಕ್ಕೆ ಮಾತ್ರವೇ ರಚನೆ ಮಾಡಲಿಲ್ಲ ಅವರು ಹಾಗೆ ಮಾಡಿರತಕ್ಕ ವರ್ಣನೆ ನಮ್ಮ ಬಿಜಾಪುರ ಜಿಲ್ಲೆಗೂ ಬಹಳ ಚೆನ್ನಾಗಿ ಅನ್ವಯಿಸುತ್ತದೆ. ಅವರು "ಸುಜಲಾಂ ಸುಫಲಾಂ" ಎಂದು ಹೇಳಿರುವಂತೆ ಆ ನಮ್ಮ ಬಿಜಾಪುರ ಜಿಲ್ಲೆ ಸಾಕಷ್ಟು ಫಲವತ್ತಾಗಿವೆ. ಅಲ್ಲಿ ಜಲಸಮೃದ್ಧಿಯೂ ಚೆನ್ನಾಗಿದೆ. ಹೀಗಿದ್ದರೂ ಆ ಬಿಜಾಪುರ ಜಿಲ್ಲೆಯನ್ನು ಕ್ಷಾಮಪೀಡಿತ ಜಿಲ್ಲೆ ಎಂದೇಕೆ ಕರೆಯುತ್ತಿದ್ದಾರೆ ಎಂಬುದಕ್ಕೆ ಕಾರಣವನ್ನು ನಾವು ಈಗ ಶೋಧನೆ ಮಾಡಬೇಕಾಗಿದೆ ನಿಜವಾಗಿಯೂ ಸೃಷ್ಟಿ ಸೌಕರ್ಯಗಳನ್ನು ಪಡೆದಿರುವುದರಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ಆ ಬಿಜಾಪುರ ಜಿಲ್ಲೆಯಷ್ಟು ಸೌಕರ್ಯವನ್ನು ಪಡೆದಿರತಕ್ಕ ಜಿಲ್ಲೆ ಬೇರೊಂದಿಲ್ಲ ಎಂದು ಹೇಳಬಹುದು. ಬಿಜಾಪುರ ಜಿಲ್ಲೆಯನ್ನು ದಕ್ಷಿಣ ಹಿಂದೂಸ್ಥಾನದ ಪಂಜಾಬ್ ಎಂದು ಹೇಳಬಹುದು ಏಕೆಂದರೆ ಅಲ್ಲಿ ಕೃಷ್ಣಾ, ಭೀಮಾ, ಘಟಪ್ರಭಾ, ಮಲಪ್ರಭಾ ಇತ್ಯಾದಿ ಐದು ಹೊಳೆಗಳು ಹರಿಯುತ್ತಿವೆ. ಆದ್ದರಿಂದ ಇದನ್ನು ದಕ್ಷಿಣ ಹಿಂದೂಸ್ಥಾನದ ಪಂಜಾಬ್ ಎಂದು ಕರೆಯುತ್ತಿದ್ದೇನೆ. ಇಷ್ಟೆಲ್ಲಾ ಅನುಕೂಲಗಳಿರುವುದರಿಂದ ಆ ಜಿಲ್ಲೆಗೆ ಬಿಜಾಪುರ ಜಿಲ್ಲೆಗೆ ಕ್ಷಾಮಬರುವುದಕ್ಕೆ ಕಾರಣವೇ ಇಲ್ಲ. ಅದಕ್ಕೇನು ಕಾರಣ ಅನ್ನುವುದನ್ನು ನಾವೀಗ ಹುಡುಕಬೇಕಾಗಿದೆ. ಇಲ್ಲಿ ನಮ್ಮನ್ನು ಆಳತಕ್ಕ ಮಂತ್ರಿಗಳೇನಿದ್ದಾರೆ ಅವರ ತಲೇಲಿ ಕಷ್ಟದಲ್ಲಿ ಸಿಕ್ಕಿಬಿದ್ದ ಜನರ ಬಗ್ಗೆ ಏನು ಮಾಡಬೇಕು ಅನ್ನುವ ವಿಚಾರ ಬಿದ್ದರಲ್ಲವೇ ಅವರು ಎಲ್ಲಿ ಏನು ಕೆಲಸಗಳನ್ನು ಮಾಡಿಸಬೇಕು. ಯಾವ ಜಾಗದಲ್ಲಿ ಯಾವ ಕೆರೆಯನ್ನು ಕಟ್ಟಿಸಬೇಕು ಎಲ್ಲೆಲ್ಲಿ ಬರಗಾಲ ಪ್ರಾಪ್ತವಾಗಿದೆ. ಅದಕ್ಕೇನು ಪರಿಹಾರ ಮಾರ್ಗವನ್ನು ಹುಡುಕಬೇಕು ಅನ್ನುವುದಕ್ಕೆ ಮುಖ್ಯವಾಗಿ ಪ್ರದೇಶದ ಅನುಭಾವ ಅಭ್ಯಾಸಗಳು ಬೇಕು. ಅಷ್ಟೇ ಅಲ್ಲದೆ ಯಾವ ತಾಲ್ಲೂಕಿನಲ್ಲಿ ಯಾವ ಸದಸ್ಯರಿದ್ದಾರೆ ಅವರೇನು ಇಂಥ ವಿಚಾರಗಳಲ್ಲಿ ಸಲಹೆಗಳನ್ನು ಕೊಡುತ್ತಾರೆ ಅನ್ನುವುದನ್ನು ಯೋಚನೆ ಮಾಡತಕ್ಕ ಮಂತ್ರಿಗಳು ಈ ಮಂತ್ರಿ ಮಂಡಲದಲ್ಲಿದ್ದಹಾಗೆ ಕಾಣುವುದಿಲ್ಲ. ಇಲ್ಲಿನ ಮಂತ್ರಿಗಳು ಒಬ್ಬೊಬ್ಬರು ಒಂದೊಂದು ಜಿಲ್ಲೆಯನ್ನು ಹಂಚಿಕೊಂಡಿದ್ದಾರೆಂದು ಕೇಳುತ್ತೇನೆ. ನಮ್ಮ ಜಿಲ್ಲೆ ಆ ಹಂಚಿಕೆಯ ಪ್ರಕಾರ ಶ್ರೀ ಪಿ. ಎಂ. ನಾಡಗೌಡರಿಗೆ ಬಂದಿದೆಯಂತೆ. ಆದ್ದರಿಂದ ಅವರನ್ನು ಬಿಟ್ಟರೆ ಬೇರಾವ ಮಂತ್ರಿಗಳೂ ಆ ಜಿಲ್ಲೆಗೆ ಪ್ರವಾಸ ಬರುವುದಿಲ್ಲ ಇನ್ನು ಪ್ರವಾಸಕ್ಕೆ ಬರತಕ್ಕ ಮಂತ್ರಿಗಳೇನಿದ್ದಾರೆ ಅವರನ್ನು ಕಂಡು ಇಂಥ ವಿಚಾರಗಳಲ್ಲಿ ಏನಾದರೂ ಸಲಹೆಗಳನ್ನು ನೀಡೋಣ ಎಂದರೆ ಅವರು ಆ ಸ್ಥಳೀಯ ಎಂ. ಎಲ್. ಎ. ಗಳಿಗೂ ಕೂಡ ಮರ್ಯಾದೆಯನ್ನು ಕೊಟ್ಟು ಮಾತನಾಡುತ್ತಿಲ್ಲ. ಅಪಮಾನಕರವಾದ ರೀತಿಯಲ್ಲಿ ವರ್ತಿಸುತ್ತಿದ್ದಾರೆ.

ಸಾಮಾನ್ಯವಾಗಿ ಜನರಿಗೆ ಕುಡಿಯುವ ನೀರನ್ನು ಒದಗಿಸಬೇಕಾದ್ದು ಸರ್ಕಾರದವರ ಕರ್ತವ್ಯ. ಕೆಲವು ದಿನಗಳ ಹಿಂದೆ ಶ್ರೀಮಾನ್ ಬಿ. ಎಂ. ಪಾಟೀಲರೂ ಮತ್ತು ಶ್ರೀ ಪಿ. ಎಂ. ನಾಡಗೌಡರೂ ಬಂದು ನವಲುಗುಂದದ ಡ್ರಿಂಕಿಂಗ್ ವಾಟರ್ ವರ್ಕ್ಸ್‌ನ ಅಡಿಗಲ್ಲಿಟ್ಟರು. ಆ ಕೆರೆಗೆ ಪೈಪುಗಳನ್ನು ಹಾಕಿ ಊರಿನ ಮಧ್ಯೆ ನಳಿಗೆಗಳನ್ನು ಎಳೆದು ಜನರಿಗೆ ನೀರನ್ನು ಸರಬರಾಯಿ ಮಾಡುವುದಕ್ಕೆ ವ್ಯವಸ್ಥೆಮಾಡಿ ಆ ಕಾರ್ಯವನ್ನೂ ಉದ್ಘಾಟನ ಮಾಡಿದರು. ಆದರೆ ಆ ನೀರಿನಲ್ಲಿ ತುಂಬಾ ಹುಳುಗಳು ಅದನ್ನು ಕುಡಿಯುವುದಕ್ಕೆ ಸಾಧ್ಯವೇ ಇಲ್ಲ. ಅಂಥ ಯೋಜನೆಯನ್ನು ಮಾಡಿದರು. ಇವರು ಕೆಲಸವನ್ನು ಕೈಗೊಳ್ಳುವ ಮೊದಲು ಸ್ಥಳೀಯ ಶಾಸನ ಸಭೆಯ ಸದಸ್ಯರ ಅಭಿಪ್ರಾಯವನ್ನು ಪಡೆಯಬೇಕೆಂಬ ವಿವೇಚನೆಯೇ ಇವರಲ್ಲಿಲ್ಲ.

ಹೀಗೆ ಮಾಡುವ ವಿಚಾರ ಇವರಲ್ಲಿಲ್ಲ. ಆದರೆ ನನಗೆ ಮಾತನಾಡಲು ನಿಮಿಷ ಕಡಿಮೆ ಇರುವುದರಿಂದ ಒರೀ ಸೂಚನೆಗಳನ್ನು ಮಾತ್ರ ಸರ್ಕಾರಕ್ಕೆ ಮಂಡಿಸುವುದಕ್ಕೆ ಇಷ್ಟಪಡುತ್ತೇನೆ ಅದಕ್ಕಾಗಿ ಅಧ್ಯಕ್ಷರು ದಯಮಾಡಿ ಒಂದೆರಡು ನಿಮಿಷ ಜಾಸ್ತಿ ಕೊಡಬೇಕು ಎಂದು ನನ್ನ ಮನವಿಯನ್ನು ಇಡುತ್ತೇನೆ.

4-30 P. M.

ಈವೊತ್ತಿನ ದಿವಸ ಬಿಜಾಪುರ ಜಿಲ್ಲೆಯಲ್ಲಿ ಬರಗಾಲ ಇಲ್ಲ ಎಂದು ತಿಳಿದಿದ್ದಾರೆಯೇ ? ಅಥವಾ ಬರಗಾಲ ಬಂದರೂ ಕೂಡ ಅಂತಹ ಬರಗಾಲ ಇಲ್ಲವೆ ಎಂದು ತಿಳಿದಿದ್ದಾರೆಯೇ ? ಸರ್ಕಾರದವರು ಮಾಡತಕ್ಕಂಥ ಕಾರ್ಯಕ್ರಮಗಳನ್ನು ಯೋಗ್ಯರೀತಿಯಲ್ಲಿ ಮಾಡಿದ್ದರೆ ಇಂದಿಗೂ ಬರಗಾಲ ಬರುತ್ತಿರಲಿಲ್ಲ.

(ಶ್ರೀ ಕೆ. ಪಿ. ನಾಡಗೌಡ)

ಈವೊತ್ತು ಮೈಸೂರು ರಾಜ್ಯದಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಯೋಗ್ಯರೀತಿಯಲ್ಲಿ ಕೆಲಸ ಮಾಡಬೇಕು. ಎಂದು ಖಾತ್ರಿ ಆಗುವುದಕ್ಕೆ ಈ ಮಾತನ್ನು ಹೇಳುತ್ತೇನೆ. ೫ ನದಿಗಳು ಹರಿಯುವ ಈ ಜಿಲ್ಲೆಯಲ್ಲಿ ನೀರಾವರಿ ಮಾಡಲು ಅಪಾರವಾದ ಅವಕಾಶಗಳಿವೆ. ಒಂದನೆಯದಾಗಿ ಬಿಜಾಪುರದಲ್ಲಿ ಭೀಮಾನದಿ ಹರಿಯುತ್ತದೆ. ಸಣ್ಣ ಕೆರೆಗಳ ನಿರ್ಮಾಣಕ್ಕೆ ಯೋಗ್ಯವಾದಂಥ ಕೆಲಸಗಳನ್ನು ಮಾಡಬಹುದು. ಮತ್ತು ದೊಡ್ಡ ದೊಡ್ಡ ಜಲಾಶಯಗಳು ಇವೆ. ಚಿಕ್ಕಪುಟ್ಟಹಳ್ಳಿಗಳಿಗೆ ಯೋಗ್ಯವಾದ ರೀತಿಯಲ್ಲಿ ಒಡ್ಡುಗಳನ್ನು, ಅಣೆಕಟ್ಟೆಗಳನ್ನು ಕಟ್ಟಿ ಅನುಕೂಲ ಮಾಡಿಕೊಟ್ಟರೆ ನೀರಾವರಿ ಯೋಜನೆಯನ್ನು ಸುಲಭವಾಗಿ ಕಾರ್ಯಗತ ಮಾಡಬಹುದು.

ಇನ್ನು ಎರಡನೆಯದಾಗಿ ದೋಣಿ ನಾಲಾ ಕಡೆ ಬಂದರೆ ಅದು ಉಪ್ಪುನೀರು ಆಗಿರುವುದರಿಂದ ಅದು ವ್ಯವಸಾಯಕ್ಕೆ ಉಪಯೋಗವಾಗುವುದಿಲ್ಲ. ಅಲ್ಲಿರುವ ಭೂಮಿ ಫಲವತ್ತಾಗಿದ್ದರೂ ಕೂಡ ಆ ಉಪ್ಪು ನೀರಿನಿಂದ ಅಲ್ಲಿರುವ ಭೂಮಿ ಬಂಜರು ಬಿದ್ದುಹೋಗಿರುತ್ತೆ. ಕೃಷ್ಣ ಮತ್ತು ಘಟಪ್ರಭಾ ಮಧ್ಯದಲ್ಲಿ, ಈ ಪ್ರದೇಶ ಇರುವುದರಿಂದ ಆ ದೋಣಿನಾಲಾವನ್ನು ಬಹಳ ಡೀಪ್ ಮಾಡಿ ಅಗೆಸಿದರೆ ಆ ನೀರೆಲ್ಲಾ ಹೋಗುತ್ತದೆ. ಅನಂತರ ಈ ಕೃಷ್ಣ ಮತ್ತು ಘಟಪ್ರಭಾ ಯೋಜನೆಯನ್ನು ತೆಗೆದುಕೊಂಡು ಈ ನೀರನ್ನು ಅಲ್ಲಿಗೆ ಬಿಡುವಂತೆ ಮಾಡಿದರೆ ವ್ಯವಸಾಯಕ್ಕೆ ಅನುಕೂಲವಾಗುವುದಲ್ಲದೆ ಇದು ಬಹಳ ಬೆಲೆಯುಳ್ಳಂಥಾ ಪ್ರದೇಶವಾಗುತ್ತದೆ. ಇದನ್ನು ಮಹಾಕವಿ ರನ್ನ ಒಂದು ಶ್ಲೋಕದಲ್ಲಿ ಅಂದವಾಗಿ ವರ್ಣಿಸಿದ್ದಾನೆ. ಈವೊತ್ತಿನ ದಿವಸ ಈ ಪ್ರದೇಶ ನಮ್ಮ ಸರ್ಕಾರದವರು ಅಲಕ್ಷ್ಯ ಮಾಡಿರುವುದರಿಂದ ಬರಗಾಲ ಪೀಡಿತ ಪ್ರದೇಶವಾಗಿದೆ. ಇದಕ್ಕೆ ಸರ್ಕಾದವರು ಸರಿಯಾದ ಯೋಜನೆಗಳನ್ನು ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ದಕ್ಷಿಣದ ಕಡೆ ಬಂದರೆ ಕ್ಷಾಮಪೀಡಿತ ಪ್ರದೇಶವಾದಂಥ ಲೋಕಪುರಪಾಕೆಟ್ ಇದು ಬಾಗಲಕೋಟೆ ಹತ್ತಿರ ಇದೆ. ಇಲ್ಲಿ ಒಂದು ಶಾಶ್ವತವಾದ ಯೋಜನೆಯನ್ನು ಕೈಗೊಂಡರೆ ಮುಧೋಳ್ ತಾಲ್ಲೂಕಿನ ಇಡೀ ದಕ್ಷಿಣ ಭಾಗದ ಅರ್ಧ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶ ಎಂದು ಏನು ಪರಿಗಣಿಸಿದ್ದಿರೋ ಅವಕ್ಕೆ ಅನುಕೂಲವಾಗುತ್ತದೆ. ಇದು ಅತ್ಯುತ್ತಮವಾದ ಯೋಜನೆ.

ಇನ್ನು ವರ್ತಕಲ್ ಹತ್ತಿರ ಇರುವ ಲೋಕಪುರ ಹಳ್ಳಕ್ಕೆ ಹಿಂದಿನವರು ಒಂದು ಯೋಜನೆ ಮಾಡಿದ್ದರು. ಅದು ಮಧ್ಯಮ ತರಗತಿಯ ನೀರಾವರಿ ಯೋಜನೆಗೆ ಅನುಕೂಲವಾಗುವುದರಿಂದ ಅದನ್ನು ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಗುಲ್ಬರ್ಗ ಡಿವಿಷನ್ನಿನ ನಾರಾಯಣಪುರದಲ್ಲಿ, ಹಿಡಕಲ್ ಬಲದಂಡೆಯಲ್ಲಿ, ವರ್ತಕಲ್ ಯೋಜನೆಯನ್ನು ಕೈಗೊಂಡರೆ ಸಾವಿರಾರು ಎಕರೆಗೆ ನೀರಾವರಿ ಆಗತಕ್ಕಂಥ ಯೋಜನೆ ಮಾಡಬಹುದು. ವರ್ತಕಲ್ ಯೋಜನೆ, ಮಲಪ್ರಭಾ ಯೋಜನೆ ಇವನ್ನೆಲ್ಲಾ ಮಾಡಿದರೆ ಅಲ್ಲಿ ಎಷ್ಟೋ ನೀರಾವರಿಗಳನ್ನು ಮಾಡಬಹುದು ಎಂದು ಹೇಳುತ್ತೇನೆ.

ಇನ್ನು ಘಟಪ್ರಭಾ ನದಿ ತೆಗೆದುಕೊಂಡರೆ ಅಲ್ಲಿ ಎರಡು ದಂಡೆಗಳಲ್ಲೂ ಕೂಡ ಪಂಪು ಸೆಟ್ಟುಗಳನ್ನು ಇಡಲು ೧–೨ ತಿಂಗಳಲ್ಲೆ ವಿದ್ಯುತ್ ಸೌಕರ್ಯಗಳನ್ನು ಮಾಡಿಕೊಟ್ಟರೆ ಮುಧೋಳ್ ತಾಲ್ಲೂಕಿನಲ್ಲಿ ಎಂದಿಗೂ ಬರಗಾಲ ಬರಲಿಕ್ಕಿಲ್ಲ ಎಂದು ನಾನು ಆಶ್ವಾಸನೆ ಕೊಡುತ್ತೇನೆ. ಮತ್ತು ನನಗೆ ಇಷ್ಟು ಮಾತನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪಿ. ಗಂಗಾಧರ್ (ತುಮಕೂರು) :—ಸ್ವಾಮಿ, ಅಧ್ಯಕ್ಷರೇ, ಪ್ರತಿಯೊಂದು ಸಾರಿಯೂ ಅಸೆಂಬ್ಲಿ ಸೇರಿದಾಗ ಮತ್ತೆ ಮತ್ತೆ ನಮ್ಮ ತುಮಕೂರು ಜಿಲ್ಲೆ ಯಾವಗಲೂ ಕ್ಷಾಮಪೀಡಿತ ಪ್ರದೇಶ ಎಂದು ಹೇಳಿಕೊಂಡು ಬರುತ್ತಿದ್ದೇನೆ. ಮತ್ತು ಇದು ರೈನ್ ಷ್ಯಾಡೋ ಏರಿಯಾದಲ್ಲಿ ಸೇರದೆ ಎಂದು ಹೇಳ ಬೇಕಾಗಿಲ್ಲ. ತುಮಕೂರು ಜಿಲ್ಲೆ ಬಗ್ಗೆ ಪಾವಗಡ, ಶಿರಾ, ಕೊರಟಗೆರೆ ಸ್ನೇಹಿತರು ಸಾಕಷ್ಟು ಹೇಳಿಧ್ವಾರೆ, ಪ್ರತಿವರ್ಷವೂ ಯಾವಾಗಲೂ ಕ್ಷಾಮ ಇದ್ದೇ ಇರುತ್ತದೆ ಎಂದು ನೀವೂ ಹೇಳುತ್ತಾ ಇದ್ದೀರಿ, ನಾವೂ ಹೇಳುತ್ತಾ ಇದ್ದೇವೆ. ಬಹಳ ವರ್ಷಗಳಿಂದಲೂ ಕೂಡ ನಾವು ನೋಡುತ್ತಾ ಇದ್ದೇವೆ. ಚಂಗಲರಾಯ ರೆಡ್ಡಿಯವರ ಸರ್ಕಾರ ಬಂತು, ಹೋಯಿತು. ಹನುಮಂತಯ್ಯನವರ ಸರ್ಕಾರ ಬಂತು, ಜತ್ತಿಯವರ ಸರ್ಕಾರ ಬಂತು, ಹೋಯಿತು. ಮತ್ತು ಇಂಡಿಕೇಟ್ ಮತ್ತು ಸಿಂಡಿಕೇಟ್‌ನವರೂ ಕೂಡ ಸರ್ಕಾರವನ್ನು ನಡೆಸಿಬಿಟ್ಟರು. ಆದರೆ ನಮ್ಮ ಜನತೆಗೆ ಇದುವರೆಗೆ ಯಾರಿಂದಲೂ ಒಂದು ಪೈಸೇ ಉಪಕಾರ ಆಗಲಿಲ್ಲ. ಅವರು ಉಪಕಾರ ಮಾಡಲಿಕ್ಕೂ ಆಗಲಿಲ್ಲ. ಅದಕ್ಕಾಗಿ ನಾನು ಕೇಳುತ್ತೇನೆ. ಈ ಜಿಲ್ಲೆಯಲ್ಲಿ ಒಂದು ಖಾಯಂ ಪರಿಹಾರ ಮಾಡುವುದಕ್ಕೆ ಆಗುವುದಿಲ್ಲವೇ? ಅಥವಾ ನಿಮಗೇನಾದರೂ ಈ ಜಿಲ್ಲೆಯ ಮೇಲೆ

ಮಾತ್ಸರ್ಯ ಇದೆಯೇ? ೨೦ ವರ್ಷದಿಂದಲೂ ನಮ್ಮ ಜಿಲ್ಲೆಯಲ್ಲಿ ಯಾವ ಕೆಲಸಕಾರ್ಯಗಳೂ ಆಗಿಲ್ಲ. ಹಿಂದೆ ನಮ್ಮ ಜಿಲ್ಲೆಯ ಬಗ್ಗೆ ಇಂಡಿಕೇಟ್ ಮತ್ತು ಸಿಂಡಿಕೇಟ್‌ನವರು ವಂಚಿಸಿದ ಹಾಗೆ ನೀವೂ ಮಲತಾಯಿ ಧೋರಣೆ ಮಾಡುತ್ತೀರಾ? ನಮ್ಮ ಜಿಲ್ಲೆ ವಿರೋಧಪಕ್ಷದವರ ಜಿಲ್ಲೆ ಎಂದು ಮಾತ್ಸರ್ಯ ತೋರಿಸು-ತ್ತಿದ್ದೀರಾ? ನಿಮ್ಮ ಕಾಲದಲ್ಲಾದರೂ ಆ ರೀತಿ ಆಗದೆ ಇರಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ೨೦ ವರ್ಷದಿಂದಲೂ ಈ ರೀತಿ ನಡೆದುಕೊಂಡು ಬರುತ್ತಾ ಇದೆ. ನಮ್ಮ ಜಿಲ್ಲೆಯನ್ನು ಏತಕ್ಕೆ ಕಡೆಗಾಣಿಸು ತ್ತಿದ್ದೀರಿ? ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದು ಶಾಶ್ವತವ ದ ಪರಿಹಾರ ಕ್ರಮವನ್ನು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. There is a charge by me that you are showing a partisan spirit so far as this particular District is concerned. Have a Blue print to see that this famine is iradicated permanantly there. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ನಮ್ಮ ಜಿಲ್ಲೆ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಯೋಗ್ಯವಾದ ಸ್ಥಳ. ಈವಾಗ ಎಲ್ಲಾ ಕೈಗಾರಿಕೆಗಳನ್ನೂ ಬೆಂಗಳೂರಿನಲ್ಲಿ ಸ್ಥಾಪಿಸುತ್ತಿದ್ದೀರಿ. ಬೆಂಗಳೂರಿನಲ್ಲಿ ನಾವು ವಾಸಮಾಡುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಇಲ್ಲಿ ಜನಸಂಖ್ಯೆ ಜಾಸ್ತಿ ಆಗುತ್ತಾ ಇದೆ ಮತ್ತು ಇಲ್ಲಿ ಮನೆಗಳ ಸೌಕರ್ಯ ಕಷ್ಟ. ಇಲ್ಲಿ ಪ್ರತಿಯೊಂದು ಕೆಲಸಕ್ಕೂ ಕಷ್ಟ. ಆದ್ದರಿಂದ ಕೆಲವೊಂದು ಇಂಡಸ್ಟ್ರೀಸ್‌ನ್ನು ತುಮಕೂರು ಜಿಲ್ಲೆಗೆ ಹಾಕಿದರೆ ಸಹಸ್ರಾರು ಜನರಿಗೆ ಲಕ್ಷಾಂತರ ಜನರಿಗೆ ಕೆಲಸ ಕೊಡುವುದಕ್ಕೆ ಸಾಧ್ಯ ಇದೆ. ಕ್ಷಾಮವನ್ನು ತಡೆಗಟ್ಟುವುದಕ್ಕೂ ಸಾಧ್ಯ ಇದೆ. ಇದು ಬಹಳ ಮುಖ್ಯವಾದ ಕೆಲಸ, ನಾನು ೧೦ ವರ್ಷ ದಿಂದಲೂ ಕೂಡ ರಿಕ್ವೆಸ್ಟ್ ಮಾಡುತ್ತಿದ್ದೇನೆ. ಯಾವ ಇಂಡಸ್ಟ್ರೀಸ್ ತೆಗೆಯಬೇಕಾದರೂ ಅದನ್ನು ಎಲ್ಲಿ ಪ್ರಾರಂಭ ಮಾಡಬೇಕು ಎನ್ನುವುದಕ್ಕೋಸ್ಕರ ಒಂದು ಬ್ಲೂಪ್ರಿಂಟನ್ನು ತಯಾರು ಮಾಡಬೇಕು ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಮಿನರಲ್ಸ್ ಓರ್ಸ್ ಇದೆ. ನಮ್ಮ ಜಿಲ್ಲೆಯ ಚಿಕ್ಕನಾಯಕನಹಳ್ಳಿ ಏರಿಯದಲ್ಲಿ ಬೇಕಾದಷ್ಟು ಮ್ಯಾಂಗನೀಸ್ ಇದೆ. ಈಗ ನಮ್ಮಲ್ಲಿರುವ ಓರ್ಸ್‌ನ್ನು ಎಕ್ಸ್‌ಪೋರ್ಟ್ ಮಾಡುತ್ತಾ ಇದ್ದೀರಿ. ಇದರಿಂದ ನಮಗೆ ಬಹಳ ನಷ್ಟವಾಗುತ್ತಾ ಇದೆ. ನಮ್ಮಲ್ಲಿರುವ ಬೆಲೆ ಬಾಳುವ ಮಿನರಲ್ಸ್‌ನ್ನು ಪರದೇಶಕೆ ಕಳುಹಿಸಿದರೆ ನಮಗೆ ಅಷ್ಟೊಂದು ಹಣ ಸಿಕ್ಕುವುದಿಲ್ಲ. ಬಹಳ ನಷ್ಟವಾಗುತ್ತದೆ, ಇದರಿಂದ ಕೊನೆಗೆ ನಮ್ಮ ದೇಶ ಬರಗಾಲ ದೇಶವಾಗುತ್ತದೆ. ಆದುದರಿಂದ ನಮ್ಮಲ್ಲಿರತಕ್ಕಂಥ ತುಂಬಾ ಬೆಲೆಬಾಳುವ ಮಿನರಲ್ಸ್‌ನ್ನು ಮಾಡರ್ನ್ ಟೆಕ್ನಾಲಜಿಯಲ್ಲಿ ಕನ್‌ವರ್ಟ್‌ಮಾಡಿ ಮೆಟಲ್ಸ್ ಮಾಡಿ ಆ ಅದಿರನ್ನು ಸರಿಯಾದ ರೀತಿಯಲ್ಲಿ ವಿನಿಯೋಗ ಮಾಡಿದರೆ, ನಮಗೆ ಬೇಕಾದಷ್ಟು ಉಪಯೋಗವಾಗುತ್ತದೆ. ಅಲ್ಲದೆ ಇದರಿಂದ ಅನೇಕ ಟೆಕ್ನೀಷಿಯನ್ಸ್, ಇಂಜನಿಯರ್ಸ್, ಸ್ಕಿಲ್ಡ್ ಅಂಡ್ ಅನ್‌ಸ್ಕಿಲ್ಡ್ ವರ್ಕರ್ಸ್‌ಗೆ ಬೇಕಾದಷ್ಟು ಕೆಲಸ ಸಿಕ್ಕಿದಂತಾಗುತ್ತದೆ ಮತ್ತು ಕ್ಷಾಮದ ಬೇಡಿಕೆಯೂ ಕೂಡ ಕಡಿಮೆಯಾಗುತ್ತದೆ ಎಂದು ಹೇಳುತ್ತೇನೆ. ಮತ್ತು ಇದರ ಬಗ್ಗೆ ತಮ್ಮಲ್ಲಿ ಏನಾದರೂ ಮಾಹಿತಿ ಇದೆಯೋ ಎಂದು ಕೇಳುತ್ತೇನೆ. ಅದರ ಬಗ್ಗೆ ಏನಾದರೂ ಮಾಹಿತಿ ಇದೆಯೇ, ಬ್ಲೂಪ್ರಿಂಟ್ ಇದೆಯೇ ಎನ್ನುವುದನ್ನು ಯೋಚನೆ ಮಾಡಿ.

ತುಮಕೂರು ಜಿಲ್ಲೆಯಲ್ಲಿ ಮಳೆ ಬರುವುದಿಲ್ಲ, ರೈನ್ ಷಾಡೋ ಏರಿಯಾ ಎಂದು ಹೇಳಬೇಕಾಗಿಲ್ಲ. ಭೂಗರ್ಭ ಶಾಸ್ತ್ರಜ್ಞರನ್ನು ಕರೆಸಿ ಅವರ ಮುಖಾಂತರ ಎಲ್ಲೆಲ್ಲಿ ಭೂಗರ್ಭದಲ್ಲಿ ನೀರಿದೆ ಎನ್ನುವುದನ್ನು ಪರಿಶೋಧನೆ ಮಾಡಬೇಕು. ಅದಕ್ಕೆ ಏನಾದರೂ ಯೋಚನೆ ಮಾಡಿದ್ದಾರೆಯೇ ? ಕ್ಷಾಮ ನಿವಾರಣೆ ಮಾಡಬೇಕಾದರೆ ಸಾಕಷ್ಟು ನೀರನ್ನು ಒದಗಿಸುವುದಕ್ಕೆ ಯೋಜನೆ ಮಾಡಬೇಕು, ಆ ದಿಸೆಯಲ್ಲಿ ಒಂದು ಕಾಸಿನ ಕೆಲಸವನ್ನೂ ಮಾಡಿಲ್ಲ ಆ ದಿಸೆಯಲ್ಲಿ ಯೋಚನೆ ಬಂದಿಲ್ಲ. ಈ ಸರ್ಕಾರಕ್ಕೆ ಸಾಕಷ್ಟು ಬುದ್ಧಿ ವಂತಿಕೆ ಇಲ್ಲ, ಜಾಣ್ಮೆ ಇಲ್ಲ ಎಂದು ಮತ್ತೆ ಹೇಳಬೇಕಾಗಿಲ್ಲ. ಭೂಗರ್ಭ ತಜ್ಞರನ್ನು ಕರೆಸಿ ಭೂಗರ್ಭದಲ್ಲಿ ಎಲ್ಲೆಲ್ಲಿ ನೀರಿದೆ ಎನ್ನುವ ಮಾಹಿತಿಯನ್ನು ತೆಗೆದುಕೊಂಡು ಒಂದೊಂದು ಜಾಗದಲ್ಲಿ ಸಣ್ಣ ಸಣ್ಣ ಬಾವಿಗಳಿಗಾಗಿ ಎರಡು ಮೂರು ಸಾವಿರ ರೂಪಾಯಿಗಳನ್ನು ಕೊಟ್ಟು ಆ ಹಣವನ್ನು ರೈತರು ಮದುವೆಗೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತೊಂದಕ್ಕೆ ಖರ್ಚು ಮಾಡಿಕೊಂಡು ಹಾಳು ಮಾಡುವುದಕ್ಕೆ ಬದಲಾಗಿ ಕಮ್ಯೂನಿಟಿ ವೆಲ್ಸ್ ತೆಗೆಸಿ ದೊಡ್ಡ ದೊಡ್ಡ ಬಾವಿಗಳನ್ನು ತೆಗೆಸಿ ಅದರಿಂದ ನೂರಾರು ಎಕರೆಗೆ ಪಾಯಿದೆಯಾಗತಕ್ಕ ರೀತಿಯಲ್ಲಿ ಮಾಡಿ ಜನಗಳಿಗೆ ಅನುಕೂಲ ಮಾಡಿಸಿಕೊಡಬೇಕು. ಇದರಿಂದ ಸಾಕಷ್ಟು ಬೆಳೆ ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಹೀಗೆ ಅಭಾವವನ್ನು ಬಹುಮಟ್ಟಿಗೆ ಕಡಮೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಕೂಡ ಯೋಚನೆ ಮಾಡಬೇಕು. ಈ ಮೂರು ಕೆಲಸಗಳನ್ನೂ ಮಾಡದೆ ಇದ್ದರೆ ಜನತೆಗೆ ದ್ರೋಹ ಮಾಡಿದಂತಾಗುತ್ತದೆ, ಮಾನ್ಯ ಕಂದಾಯ ಮಂತ್ರಿಗಳೂ ಮತ್ತು ಅವರ ಸಹೋದ್ಯೋಗಿಗಳೂ ಮಾಡಬಾರದ ಅಪರಾಧವನ್ನು ಎಸಗಿದಂತಾಗುತ್ತದೆ. ಮಾನ್ಯ ಕಂದಾಯ ಮಂತ್ರಿಗಳು ಒಳ್ಳೆಯವರು ಎಂದು ಎಲ್ಲರೂ ಹೇಳುತ್ತಾರೆ, ನನಗೂ ಅವರ ವಿಷಯದಲ್ಲಿ ಅಷ್ಟೇ ಗೌರವವಿದೆ, ಆ ಗೌರವಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಅವರು ವರ್ತಿಸಬೇಕು, ನಮಗೋಸ್ಕರ ಹೊಡೆದಾಟ ಮಾಡಬೇಕು. ದೊಡ್ಡ ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ಸಹಸ್ರಾರು ಜನಗಳಿಗೆ ಕೆಲಸಕ್ಕೆ ಅನುಕೂಲವಾಗುವಂತೆ ಮಾಡಬೇಕು ಅಥವಾ ಬೆಂಗಳೂರಿನಲ್ಲಿರುವ ಒಂದು ಕೈಗಾರಿಕೆಯನ್ನು ತುಮಕೂರು ಜಿಲ್ಲೆಗೆ ಡೈವರ್ಟ್ ಮಾಡಿ ಅಂಡರ್

(ಶ್ರೀ ಬಿ. ಪಿ. ಗಂಗಾಧರ್)

ಗ್ರೌಂಡ್ ವಾಟರ್ ಟ್ಯಾಪ್ ಮಾಡಿ, ಕಮ್ಯೂನಿಟಿ ವೆಲ್ಸ್ ಡೆವಲಪ್ ಮಾಡಿ ತನ್ಮೂಲಕ ಜನಗಳಿಗೆ ನೀರನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿ, ಸಾಕಷ್ಟು ಮಿನರಲ್ ಓರ್ಸ್ ಪರದೇಶಗಳಿಗೆ ರಫ್ತು ಮಾಡುವುದಕ್ಕೆ ಬದಲಾಗಿ ಅದನ್ನು ಲೋಹವಾಗಿ ಪರಿವರ್ತನೆ ಮಾಡಿದರೆ ಸಹಸ್ರಾರು ಜನರಿಗೆ ಕೆಲಸವನ್ನು ಒದಗಿಸುವುದಕ್ಕೆ ಅವಕಾಶವಾಗುವುದರಿಂದ ಅದನ್ನು ಕೂಡ ಮಾಡಬೇಕು. ಈ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು ಮತ್ತು ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತುಮಕೂರು ಜಿಲ್ಲೆಯ ಬಗ್ಗೆ ಏನು ಮಾಡುತ್ತಾರೆಂಬುದನ್ನು ಖಚಿತವಾಗಿ ತಿಳಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಾಲ): ಅಧ್ಯಕ್ಷರೇ, ಅನೇಕ ಜನ ಸದಸ್ಯರು ಮೂರು ದಿನಗಳಿಂದ ಬರಗಾಲದ ವಿಚಾರವಾಗಿ ಮಾತನಾಡಿದ್ದಾರೆ. ಬರಗಾಲ, ಬರಗಾಲ ಎಂದು ಹೇಳಿಕೊಂಡು ಹೋದರೆ ದೇಶಕ್ಕೆ ದರಿದ್ರ ಬರುತ್ತದೆ. ಈಚೆಗೆ ಸಾಕಷ್ಟು ಮಳೆಯಾಗಿದೆ, ಕೆಲವು ಕಡೆ ಆಗಿರಲಿಕ್ಕಿಲ್ಲ. ಅಂಥ ಕಡೆ ಪರಿಹಾರ ಕಾರ್ಯಗಳನ್ನು ಮಾಡಬೇಕು. ನಮ್ಮ ಸರ್ಕಾರ ಬೇಕಾದಷ್ಟು ಸವಲತ್ತು ಮಾಡುತ್ತಿದೆ. ಇನ್ನೂ ಮಾಡಬೇಕೆಂದು ಕೇಳಿಕೊಳ್ಳಬೇಕು, ಇನ್ನೂ ಕೆಲಸ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳಬೇಕು. ಇಂಥ ಸರ್ಕಾರ ಇನ್ನು ಯಾವ ರಾಜ್ಯದಲ್ಲಿಯೂ ಸಿಕ್ಕುವುದಿಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು. ನಮ್ಮ ಸರ್ಕಾರ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ನಮ್ಮ ಮಂತ್ರಿಮಂಡಲ ಬಹಳ ಭದ್ರವಾಗಿರುತ್ತದೆ. ಈಗ ಮಾಡುವ ಕೆಲಸದ ಜೊತೆಗೆ ಇನ್ನೂ ಹೆಚ್ಚಾಗಿ ಕೆಲಸ ಮಾಡಬೇಕೆಂದು ಕೇಳಬೇಕು.

ಬಾವಿ ಕೆಲಸಕ್ಕಾಗಿ ದುಡ್ಡು ಕೊಡುತ್ತಾರೆ. ಆದರೆ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಈ ಕೆಲಸಕ್ಕಾಗಿ ಅಧಿಕಾರಿಗಳನ್ನು ಇಟ್ಟು ರೈತನಿಗೆ ಉಪಯೋಗವಾಗಿ ಸರ್ಕಾರಕ್ಕೆ ದುಡ್ಡು ವಾಪಸು ಬರುವಂಥ ವ್ಯವಸ್ಥೆಯನ್ನು ಮಾಡಬೇಕು. ವರ್ಷಾನುಗಟ್ಟಲೆ ಆದರೂ ಬಾವಿಗಳ ಕೆಲಸ ಅರ್ಧ ಮಾಡಿ ಅರ್ಧ ಬಿಟ್ಟಿದ್ದಾರೆ. ಅವುಗಳನ್ನು ಪೂರ್ತಿ ಮಾಡಬೇಕು ಮತ್ತು ಇದಕ್ಕಾಗಿ ಅಧಿಕಾರಿಗಳನ್ನು ಹಾಕಿ ಕೆಲಸ ಮುಗಿಯುವವರೆಗೂ ಅವರನ್ನು ಬದಲಾಯಿಸಬಾರದು.

ಎಷ್ಟೋ ಕಡೆ ಮಳೆ ಬಂದರೂ ಕುಡಿಯುವ ನೀರಿಲ್ಲ. ಕುಡಿಯುವ ನೀರಿನ ಬಾವಿಗಳನ್ನು ತೆಗೆಸಿಕೊಡಬೇಕು ಮತ್ತು ಬೋರ್‌ವೆಲ್ ತೆಗೆಸಿಕೊಡಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಲಿಫ್ಟ್ ಇರಿಗೇಷನ್ ಮಾಡಿದರೆ ಬರಗಾಲ ಹೋಗುತ್ತದೆ; ಅದಕ್ಕಾಗಿ ಸಹಕಾರ, ಸಂಘಗಳನು ಮಾಡಿರಿ ಎಂದು ಹೇಳುತ್ತಾರೆ. ಅದು ಸಾಧ್ಯವಿಲ್ಲ.

ಒಳ್ಳೆಯ ರೀತಿಯಿಂದ ಚೆನ್ನಾಗಿ ಕೆಲಸ ಮಾಡುವಂಥ ಆಫೀಸರುಗಳನ್ನು ನೇಮಕಮಾಡಬೇಕು. ನಮ್ಮ ಸರಕಾರ ಭದ್ರವಾಗಿದೆ, ಬೇಕಾದಷ್ಟು ಕೆಲಸಮಾಡಿದೆ, ಇನ್ನೂ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಲಿಫ್ಟ್ ಇರಿಗೇಷನ್ ಕೆಲಸ ಸೊಸೈಟಿ ಮಾಡುವುದಕ್ಕೆ ಸಾಧ್ಯವಿಲ್ಲ, ಸರಕಾರ ಆ ಕೆಲಸ ವಹಿಸಿಕೊಂಡ ಸಹಾಯಮಾಡಬೇಕು. ಇನ್ನೊಂದು ವಿಷಯ ಈಗ ಬರಗಾಲ ಕಾಂಗಾರಿಯಲ್ಲಿ ಮಾಡುವ ರಸ್ತೆ ಕೊಚ್ಚಿ ಹೋಗುವುದು, ಅದರಿಂದ ಫಾಯಿದೆ ಇಲ್ಲ, ಸರಕಾರಕ್ಕೂ ನಷ್ಟ- ಆದುದರಿಂದ ಒಂದು ಮೈಲಿ ಅಥವಾ ಎರಡು ಮೈಲಿ ರಸ್ತೆ ಮಾಡುವುದನ್ನು ಭದ್ರವಾಗಿ ಮಾಡಬೇಕು ಎಂದು ಮನವಿಮಾಡುತ್ತೇನೆ. ಆಮೇಲೆ ಕುಡಿಯುವ ನೀರಿನ ಬಾವಿ ಮತ್ತು ಲಿಫ್ಟ್ ಇರಿಗೇಷನ್ ಕೆಲಸ ಸರಕಾರವೇ ವಹಿಸಿಕೊಂಡು ಮಾಡಬೇಕು.

ಇನ್ನು ತಾಲ್ಲೂಕು ಬೋರ್ಡಿನ ವಿಷಯ. ತಾಲ್ಲೂಕು ಬೋರ್ಡಿನವರು ಹಣ ಹಂಚಿಕೊಳ್ಳುವರು ಎಂದು ಒಬ್ಬ ಸದಸ್ಯರು ಹೇಳಿದರು. ಅದು ಹೇಗೆ ಸಾಧ್ಯ? ಅದಕ್ಕೆ ಕಾನೂನಿದೆ, ಲೆಕ್ಕ ಆಡಿಟ್ ಆಗುವುದು. ತಾಲ್ಲೂಕು ಬೋರ್ಡು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಬೇಕಾದರೆ ಅದಕ್ಕೆ ಇನ್ನೂ ಹೆಚ್ಚಿನ ಅಧಿಕಾರ ಕೊಟ್ಟು, ಹಣ ಕೊಟ್ಟು ಶಾಲೆ, ರಸ್ತೆ ಮುಂತಾದುವುಗಳಿಗೆ ಸಂಬಂಧಪಟ್ಟ ಕೆಲಸ ಮಾಡಲು ಅವಕಾಶ ಮಾಡಿಕೊಡಬೇಕು. ಕೆಲವು ಕಡೆ ಲಂಚದ ಹಾವಳಿ ಇರಬಹುದು. ನಾನು ಹೇಳಿದ ಎಲ್ಲ ವಿಷಯಗಳಿಗೂ ಕೂಡ ಮಂತ್ರಿಗಳು ಗಮನಕೊಡಬೇಕೆಂದು ಮನವಿಮಾಡಿಕೊಂಡು ಅಧ್ಯಕ್ಷರಿಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ವರ್ತೂರ್):—ಮಾನ್ಯ ಅಧ್ಯಕ್ಷರೇ, ಈ ಕ್ಷಾಮ ನಿವಾರಣೆ ವಿಚಾರವಾಗಿ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸಭೆಯ ಮುಂದೆ ಕೆಲವು ಅಂಕಿಅಂಶಗಳನ್ನಿಟ್ಟು ಉಪಕಾರ ಮಾಡಿದ್ದಾರೆ. ಕಳೆದ ಸಲ ಕ್ಷಾಮದ ಹಾವಳಿ ಜಾಸ್ತಿಯಿಂದಾಗಿ ೫-೬ ಕೋಟಿ ರೂಪಾಯಿ ಸರಕಾರ ಖರ್ಚುಮಾಡಿದೆ; ಈ ಸಲ ಮೂರೂವರೆ ಕೋಟಿ ರೂಪಾಯಿ ಕ್ಷಾಮ ಕಾಂಗಾರಿಗಳಿಗಾಗಿ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಮಾತ

ನಾಡಿದ ಮಾನ್ಯ ಸದಸ್ಯರು ಕ್ಷಾಮ ನಿವಾರಣೆಗೆ ಖಾಯಂ ಯೋಜನೆ ಇಲ್ಲ ಎಂದು ಅಪ್ಪಣೆಕೊಡಿಸಿದ್ದಾರೆ. ಇದು ಸರಕಾರಕ್ಕೂ ಗೊತ್ತಿದೆ. ಈ ಕ್ಷಾಮದ ವಿಚಾರದಲ್ಲಿ ಇರುವ ಫ್ಯಾಮಿನ್ ಕೋಡ್ ನಿಯಮಾವಳಿ ಹಿಂದೆ ಬ್ರಿಟಿಷರ ಕಾಲದಲ್ಲಿ ಆಗಿರುವುದು. ಈಗಿನ ಕಾಲಕ್ಕೆ ತಕ್ಕಂತೆ ಅದರ ರೂಪರೇಖೆಗಳನ್ನು ಬದಲಾಯಿಸಿ ಒಂದು ಹೊಸ ಫ್ಯಾಮಿನ್ ಕೋಡನ್ನು ಸರಕಾರ ಜಾರಿಗೆ ತರಬೇಕು. ಕ್ಷಾಮ ಬಂದಾಗ ಅದಕ್ಕೆ ಬೇಕಾದ ಕಾರ್ಯಕ್ರಮ ಕುರಿತು ಆಲೋಚನೆ ಮಾಡುವುದು ಬಾಯಾರಿಕೆಯಾದಾಗ ಬಾವಿ ತೋಡುವುದು ಎಷ್ಟು ಉಚಿತವೋ ಆ ರೀತಿಯಾಗುತ್ತದೆ. ಈ ರೀತಿ ಮಾಡುವುದನ್ನು ಮುಂದುವರಿಸಬಾರದು. ಈಗ ಸರಕಾರ ಎಷ್ಟೇ ನಿಗಾ ಕೊಟ್ಟು ಕ್ಷಾಮ ನಿವಾರಣೆಯ ಕಾಮಗಾರಿಗಳನ್ನು ಮಾಡಿದರೂ ಅದರಲ್ಲಿರುವ ನ್ಯೂನತೆ ಗಳಿಂದ, ಸರಕಾರದ ಎಲ್ಲ ವಿಧವಾದ ಅಧಿಕಾರಿಗಳೂ ಕೂಡ ಸರಕಾರದ ಧೋರಣೆಯನ್ನನುಸರಿಸಿ ಕೆಲಸ ಮಾಡುವ ಮಟ್ಟದಲ್ಲಿ ಅನೇಕ ರೀತಿಯಲ್ಲಿ ಹಣ ಪೋಲಾಗುತ್ತಿದೆ ಎಂದು ಎತ್ತಿ ಹೇಳಿದಾರೆ. ಮೇಲ್ಮಟ್ಟ ದಲ್ಲಿರುವ ಅಧಿಕಾರಿಗಳು ಏನೊಂದು ಆದೇಶ ಕೊಡುವರೋ ಅದು ಕಾರ್ಯಗತವಾಗುವುದರೊಳಗೆ ಅದರ ಪರ್ಯಾವಸಾನ ಬೇರೆ ರೂಪ ತಾಳುವುದು. ಈಗ ಪ್ರಜಾ ಸರಕಾರವಿದೆ, ತಾಲ್ಲೂಕುಬೋರ್ಡು ಮತ್ತು ಪಂಚಾಯಿತಿಗಳಿವೆ; ಚಿಕ್ಕ ಚಿಕ್ಕ ಸರಕಾರಿ ಯೂನಿಟ್ಟುಗಳಿವೆ, ಅವೆಲ್ಲವೂ ಕೂಡಲೇ ಕಾರ್ಯದಲ್ಲಿ ಭಾಗಿ ಯಾಗುವ ರೀತಿಯಲ್ಲಿ ಸರಕಾರ ಅವನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ಬಹಳ ಕಷ್ಟಪಟ್ಟು ತಾಲ್ಲೂಕು ಮಟ್ಟದಲ್ಲಿ ಬಿಡಿಓ ಒಂದು ಕಡೆ, ಪಿಡಬ್ಲ್ಯೂ ಎಂಜಿನಿಯರೊಂದು ಕಡೆ, ತಹಸಿಲ್ದಾರರು ಒಂದು ಕಡೆ ಹೀಗೆ ೩ ಯೂನಿಟ್ ಮಾಡಿ ಕ್ಷಾಮದ ಕೆಲಸ ಮುಗಿಸಲು ಯೋಜನೆಮಾಡುತ್ತಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಒಂದು ಕಮಿಟಿ ಇರುವುದು. ಅಲ್ಲದೆ ಈ ೩ ಯೂನಿಟ್ಟುಗಳನ್ನು ಮಾಡಿ ಕೋ-ಆರ್ಡಿನೇಷನ್ ಕಮಿಟಿ ಮಾಡುವರು. ಅವು ಪದೇ ಪದೇ ಸೇರಿ ಕಾರ್ಯಕ್ರಮಗಳನ್ನು ರೂಪಿಸುವುದಿಲ್ಲ. ಆದುದರಿಂದ ಕ್ಷಾಮದ ಕೆಲಸ ಎಷ್ಟು ಚೆನ್ನಾಗಿ ಆಗಬೇಕೆಂದು ಸರಕಾರದ ಮನಸ್ಸಿನಲ್ಲಿದೆಯೋ ಅದರಂತೆ ಕಾರ್ಯಗತವಾಗುತ್ತಿಲ್ಲ. ಇದರ ಕಡೆ ಹೆಚ್ಚು ನಿಗಾ ಇಡಬೇಕು. ಈಗ ಕೇಂದ್ರ ಸರಕಾರದಿಂದ ಕೊಡುವ ಹಣ ಕೇಳಿದರೂ ಸಾಕಷ್ಟು ಕೊಡುವುದಿಲ್ಲ ಎಂದು ಸರಕಾರದವರು ಹೇಳುವರು. ಕೇಂದ್ರದಿಂದ ಕೊಡುವ ಹಣ ಎಷ್ಟು ಮಟ್ಟಿಗೆ ಸದ್ವಿನಿ ಯೋಗವಾಗಿದೆ ಎಂದು ನೋಡುವುದಕ್ಕೆ ಕೇಂದ್ರ ಸರಕಾರದವರೂ ಕೂಡ ಇಂಥ ಸಂದರ್ಭದಲ್ಲಿ ಒಂದು ಆಡಿಟ್ ಸೆಲ್ ಅಥವಾ ಸೂಪರ್‌ವಿಷನ್ ಸೆಲ್ ಇಡುವುದು ಸರಿಯಾದುದು ಎಂದು ಸಲಹೆ ಮಾಡುತ್ತೇನೆ. ಮತ್ತು ಖರ್ಚುಮಾಡುವುದೂ ಕೂಡ ಸರಿಯಾಗಿ ವಿನಿಯೋಗವಾಗಿದೆಯೋ, ಇಲ್ಲವೋ, ದುರ್ವಿನಿಯೋಗ ವಾಗಿದೆಯೋ ಎಂದು ಅಧಿಕಾರಿಗಳು ನೋಡಬೇಕು, ಅವರಿಗೆ ಭಯವಿರಬೇಕು. ಹಾಗೆ ಮಾಡಲು ಒಂದು ಸ್ಪೆಷಲ್ ಆಡಿಟ್ ಸೆಲ್, ಇನ್‌ಸ್ಪೆಕ್ಷನ್ ಸೆಲ್ ಮಾಡಿ ಈ ಕಾರ್ಯವಾದಮೇಲೆ ನೋಡುವ ವ್ಯವಸ್ಥೆ ಮಾಡಬೇಕು, ಬರಗಾಲದಲ್ಲೇನು ಕೆಲಸಕಾರ್ಯ ಮಾಡುವರು, ರಸ್ತೆ ಮುಂತಾದ್ದು. ಒಂದು ಸ್ಟೇಜ್ ಆಫ್ ಯುಟಿಲಿಟಿಗೆ ಬರುವಹಾಗೆ ಮಾಡಬೇಕು: ಮಾಡಿರುವ ಕೆಲಸ ಮುಂದೆ ಉಪಯೋಗಕ್ಕೆ ಬಾರದಂತೆ ಎಲ್ಲಿಗೆಂದರೆ ಅಲ್ಲಿಗೇ ಬಿಡುವುದು ಹೋಗಬೇಕು. ಮಾಡಿರುವ ಕೆಲಸವನ್ನು ಪೂರ್ಣ ಮಾಡಬೇಕು. ಇದಕ್ಕೆ ತಕ್ಕ ವ್ಯವಸ್ಥೆ ಕೂಡಲೇ ಮಾಡಬೇಕು, ಫ್ಯಾಮಿನ್ ಬಗ್ಗೆ ಅಂಕಿಅಂಶ ಸರಕಾರದಲ್ಲಿಲ್ಲ. ಅಧಿಕಾರಿಗಳಿಂದ ವರದಿ ತರಿಸಿ ಅದರ ಆಧಾರದ ಮೇಲೆ ಕೆಲಸಮಾಡುವ ಪದ್ಧತಿ ಹೋಗಬೇಕು. ಕೆಲವು ಗ್ರಾಮಾಂತರ ಪ್ರದೇಶ ಗಳಲ್ಲಿ ಎಷ್ಟು ಬುಗ್ಗೆಗಳಿವೆ ಮತ್ತು ದೈವ ಜಲ ಇರುವ ಸ್ಥಳಗಳೆಲ್ಲಿವೆ ಎಂಬುದರ ಪಟ್ಟಿಯನ್ನು ತಾಲ್ಲೂಕು ಮಟ್ಟದಲ್ಲಿ ತಾಸಿಲ್ದಾರರು ಇಟ್ಟಿಲ್ಲ. ಇದು ಶೋಚನೀಯವಾದ ವಿಚಾರ. ನೀರಿನ ಅಭಾವ ಬಂದಾಗ ಅದನ್ನು ಒದಗಿಸಲು ಪ್ರಯತ್ನಮಾಡುವುದು ಸರಿಯಲ್ಲ. ಇಂಥ ಅಂಕಿಅಂಶವಿದ್ದರೆ ಒಳ್ಳೆಯದು, ಅದರಿಂದ ಮುಂದೆ ಅನುಕೂಲವಾಗುವುದು.

5-00 P.M.

ಸರ್ಕಾರದ ಮೇಲಧಿಕಾರಿಗಳೂ ಕೂಡ ಸರ್‌ಪ್ರೈಸ್ ವಿಸಿಟ್ ಹಾಕಿಕೊಂಡು ಇನ್‌ಸ್ಪೆಕ್ಷನ್ ಕಾಲದಲ್ಲಿ ಆಗಿಂದಾಗ್ಗೆ ನೋಡತಕ್ಕ ಒಂದು ವ್ಯವಸ್ಥೆಯೂ ಕೂಡ ಇರಬೇಕು ಕೋ ಆರ್ಡಿನೇಷನ್ ಕಮಿಟಿ ಅಂತ ತಾಲ್ಲೂಕು ಮಟ್ಟದಲ್ಲಿ ಏನು ಇರುತ್ತದೆ ಅದರ ರಿಪೋರ್ಟ್ ನೋಡಿದರೆ ಸತ್ಯಾಂಶ ಗೊತ್ತಾಗುತ್ತದೆ. ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಮಾಗಡಿ ಈ ಮೂರು ತಾಲ್ಲೂಕುಗಳಲ್ಲಿ ಕೆರೆ-ಕಟ್ಟೆಗಳನ್ನು ಹೊಸದಾಗಿ ಕಟ್ಟಬಾರದು ಎಂದು ನಿರ್ಬಂಧ ಇದೆ. ಆದ್ದರಿಂದ ಈ ಮೂರು ತಾಲ್ಲೂಕುಗಳಿಗೂ ಬಾವಿ ಗಳಿಗಾಗಿ ಹೆಚ್ಚು ಗ್ರ್ಯಾಂಟ್ ಕೊಡಬೇಕು. ನೆಲಮಂಗಲ ತಾಲ್ಲೂಕಿನಲ್ಲಿ ಮರಸರ ಹಳ್ಳಿ ಟ್ಯಾಂಕ್ ಅಂತ ಇದೆ, ವಿಶ್ವೇಶ್ವರಯ್ಯನವರ ಕಾಲದಲ್ಲೇ ಅದರ ಸರ್ವೆ ಆಗಿದೆ. ಅದರ ಬಲದಂಡೆಯಲ್ಲಿ ೧೫ ಗ್ರಾಮ ಎಡದಂಡೆಯಲ್ಲಿ ೨೫ ಗ್ರಾಮ ಇದೆ ಬೇಕಾದಷ್ಟು ನೀರಾವರಿಯಾಗತಕ್ಕ ಅವಕಾಶ ಇದೆ. ಅದನ್ನು ಕಾರಣಾಂತರದಿಂದ ನಿಲ್ಲಿಸಿದ್ದಾರೆ ಅದನ್ನು ಪೂರ್ತಿ ಮಾಡಬೇಕು. ಬೆಂಗಳೂರು ದಕ್ಷಿಣ ಮತ್ತು ಉತ್ತರ ತಾಲ್ಲೂಕುಗಳಿಗೆ ಸಂಬಂಧಪಟ್ಟ ಹಾಗೆ ಬೆಂಗಳೂರು ನಗರದಲ್ಲಿ ಕೊಚ್ಚೆ ನೀರನ್ನು ಬೇಸಾಯಕ್ಕೆ ಉಪಯೋಗಿ- ಸುವ ಒಂದು ಯೋಜನೆ ಇದೆ. ಅದು ಡೆಲ್ಲಿ ಮಟ್ಟದಲ್ಲಿ ನ್ಯಾಷನಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ನಿಂತು

(ಶ್ರೀ ಕೆ. ಪ್ರಭಾಕರ್)

ಪೋಗಿದೆ ಎಂದು ವರ್ಷೇ ವರ್ಷೇ ಹೇಳುತ್ತಲೇ ಇದ್ದಾರೆ, ಅದನ್ನು ಪೂರ್ತಿ ಮಾಡಿಕೊಡಬೇಕು. ಬೆಂಗಳೂರಿಗೆ ಕಾವೇರಿ ನದಿಯಿಂದ ನೀರು ಸರಬರಾಯಿ ಮಾಡುವ ಯೋಜನೆಯನ್ನು ತ್ವರಿತಮಾಡುವುದರಿಂದ ಹೆಸರುಘಟ್ಟ ಮತ್ತು ಚಾಮರಾಜೇಂದ್ರ ರಿಸರ್ವಾಯರ್‌ನಲ್ಲಿ ದೊರೆಯತಕ್ಕ ನೀರನ್ನು ಇರಿಗೇಷನ್‌ಗೆ ಉಪಯೋಗ ಮಾಡಿಕೊಳ್ಳಲು ಅವಕಾಶವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ತ್ವರಿತವಾಗಿ ಮಾಡಿಕೊಡಬೇಕು. ಕ್ಷಾಮ ಕಾಂಗಾರಿಗಳಲ್ಲಿ ಕಮ್ಯೂನಿಟಿ ವೆಲ್ಸ್ ತೆಗೆದು ತೀರ ಗರೀಬರು, ಹರಿಜನರು ಇರುವ ಕಡೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಆ ರೀತಿ ಒಂದು ತಾಲ್ಲೂಕಿಗೆ ೫-೬ ಬಾವಿಗಳನ್ನು ತೆಗೆದರೆ ೧೦೫೦ ಬಾವಿಗಳು ಆಗುತ್ತವೆ. ಇದಕ್ಕೆ ಸರ್ಕಾರದವರು ಹೆಚ್ಚು ಗಮನಕೊಟ್ಟು-ಯಾವುದೇ ಸ್ಕೀಂ ಆಗಲಿ-ಬಡಬಗ್ಗರಿಗೆ ಅನುಕೂಲವಾಗುವ ಹಾಗೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† SMT. WINNIFRED F. FERNANDES (Coondapur):—Hon. Speaker, From the last three days many hon. Members have taken part in this discussion on scarcity conditions in the State. I want to say a few words regarding the floods in South Kanara District, the disruption which has been done by these floods and the preventive measures which should be taken in South Kanara District and in my Coondapur Taluk in particular.

Famine, scarcity and floods are the sisters and brothers of one family. But the Government has not taken any steps regarding these floods They have taken floods in a very light manner. So I ask the Hon. Minister through the Speaker to see that preventive or protective measures are taken to prevent these floods in future.

Of course, famine makes the people to starve but the floods make the people tremble. Much havoc is done to the life and property of the people by floods. Every year because of these monsoons, we have got plenty of rains. There is disruption everywhere; many houses are washed off; crops are destroyed; and much disruption is caused to life and property. So I request the Government to see that wherever there are floods, embankments and rivetments are built as a permanent measure. In 1968 there were floods; but so far, the Government has not taken any action. In the last few years they have made allotments under Famine and spent lot of money on relief operations. But they have not spent a single pie for flood preventive measures in South Kanara District. The Government have done investigation and prepared estimates; but they are all kept in cold storage. Now I request the Government to make over a large share to the South Kanara District and to my Coondapur Taluk out of the allotment of Rs. 2 crores. As I already stated, estimates are prepared for putting up permanent rivetments and bunds all along the river side.

Due to heavy rains, most of the big tanks in my constituency are fully silted up. As a result, there is no source of water. So I ask the Government to take up the desilting of these tanks and see that certain crops can be grown; the Government can thus help cultivators to some extent.

My constituency is in a coastal belt area. Therefore river water there is saltish. Of course, there is plenty of water but it is only going to waste If side water dams can be put on one side of the salt water, then sweet water can be used by cultivators and a second crop can be grown. This is very essential. Government have to put side water dams and thus help the public to some extent.

I do not think the Hon. Revenue Minister will give up step-motherly treatment because I have known him to be an honest and impartial Minister. I do not think that injustice will be meted out to the South Kanara District and Coondapur Taluk. The Revenue Secretary to Government was also the Divisional Commissioner of Mysore Division. He knows very well the conditions of South Kanara District. So, once again I request that out of the allotment of Rs. 2 crores, Government should take immediate steps this year itself and provide preventive measures against floods.

With these few words, I thank the Chair.

ಶ್ರೀಮತಿ ಚಂಪಾಬಾಯಿ ಭೋಗಲೆ (ಕಾಗವಾಡ) :—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಕೆಲವು ಸದಸ್ಯರು ದುಷ್ಕಾಳದ ಬಗ್ಗೆ ಸಲಹೆಗಳನ್ನು ಮಾಡಿದ್ದಾರೆ, ಸೂಚನೆಗಳನ್ನು ಕೊಟ್ಟಿದ್ದಾರೆ. ಎರಡು ಮೂರು ವರ್ಷದಿಂದ ಪ್ರತಿವರ್ಷ ದುಷ್ಕಾಳ ನಮ್ಮ ಜಿಲ್ಲೆಯ ೫ ತಾಲ್ಲೂಕುಗಳಲ್ಲಿ ಅಂದರೆ ಅಥಣಿ ತಾಲ್ಲೂಕು, ರಾಯಬಾಗ ತಾಲ್ಲೂಕು, ರಾಮದುರ್ಗ ತಾಲ್ಲೂಕು, ಗೋಕಾಕ್ ತಾಲ್ಲೂಕು ಮತ್ತು ಸೌದತ್ತಿ ತಾಲ್ಲೂಕಿನಲ್ಲಿ ಕೆಲವು ಕಡೆ ಹೊಳೆಗಳು ಹರಿದು ಹೋಗಿದೆ. ಈಗ ಸ್ವಾತಂತ್ರ್ಯ ಸಿಕ್ಕಮೇಲೂ ದುಷ್ಕಾಳ ಅಂತ ಹೇಳಿ ಪ್ರತಿ ವರ್ಷ ಮಾತನಾಡುತ್ತೇವೆ. ಖಾಯಂ ಆಗಿ ಒಂದೂ ಯೋಜನೆಯನ್ನು ಮಾಡಿಲ್ಲ. ಹೊಳೆಗಳಿಗೆ ಸಣ್ಣ ಸಣ್ಣ ಡ್ಯಾಮುಗಳನ್ನು ಕಟ್ಟಿಸಿ ರೈತರಿಗೆ ಸೌಕರ್ಯ ಮಾಡಿಸಿಕೊಡುವುದು ಮೊದಲನೆಯ ಯೋಜನೆ ಅಂತ ಹೇಳಿ ಸರ್ಕಾರದವರು ಪ್ರತಿಯೊಂದು ಡಿಪಾರ್ಟ್‌ಮೆಂಡದಲ್ಲೂ ಕೆಲ ಕೆಲವು ಹಣ ತೆಗೆದಿಟ್ಟು ಈ ದುಷ್ಕಾಳದ ಸಲುವಾಗಿ ಖರ್ಚು ಮಾಡುವುದು ಬಹಳ ಅಗತ್ಯ ಎಂದು ನಾನು ಹೇಳುತ್ತೇನೆ.

ಯಾಕೆಂದರೆ ಪ್ರತಿ ವರ್ಷವೂ ಈ ರೀತಿ ಮಾಡಿಕೊಂಡು ಹೋದರೆ ಬರಗಾಲ ಪ್ರದೇಶದಲ್ಲಿ ಕೆಲಸ ಮಾಡುವವರಿಗೆ ಕೂಲಿ ಕೆಲಸ ಸಿಕ್ಕುತ್ತದೆ. ಕೂಲಿ ಮಾಡಿದರೆ ಅವರಿಗೆ ೮ ಆಣೆ ಅಥವಾ ೧೦ ಆಣೆ ಕೊಡುತ್ತಾರೆ. ಈಗ ಒಂದು ರೂಪಾಯಿ ಎರಡು ಆಣೆಗೆ ಒಂದು ಕಿಲೋ ಜೋಳ ಬರುತ್ತದೆ. ಇಷ್ಟೊಂದು ಹಣ ಕೊಟ್ಟು ಅವರು ಹೇಗೆ ಕೊಂಡುಕೊಳ್ಳುತ್ತಾರೆ? ಇದು ತುಂಬಾ ಅನ್ಯಾಯ. ಇದನ್ನು ದಯವಿಟ್ಟು ತಪ್ಪಿಸಬೇಕೆಂದು ಹೇಳುತ್ತೇನೆ. ಹರಿಜನರಿಗೆ ಹೊಲ ಗದ್ದೆಗಳು ಇರುವುದಿಲ್ಲ. ಇದ್ದರೂ ಹೆಚ್ಚೆಂದರೆ ೨-೩ ಗುಂಟೆ ಮೇಲೆ ಇರುವುದಿಲ್ಲ. ಆದುದರಿಂದ ಕೂಲಿ ಮಾಡಿ ಜೀವನ ಮಾಡುವವರಿಗೆ ಕೂಲಿಯನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರತಿ ವರ್ಷವೂ ಮಳೆ ಬಾರದೆ ಬೆಳೆ ಇಲ್ಲ, ಮಳೆ ಬಂದೂ ಅನಾವೃಷ್ಟಿಯಾಗಿ ಬೆಳೆ ಇಲ್ಲ. ಈ ರೀತಿ ಎರಡೂ ಕಡೆಗಳಿಂದ ನಮ್ಮ ಜಿಲ್ಲೆಗೆ ದುಷ್ಕಾಲ ಪರಿಸ್ಥಿತಿ ಬರುತ್ತದೆ. ನಮ್ಮ ಕಡೆ ಕೃಷ್ಣಾ ನದಿ, ಘಟಪ್ರಭಾ, ಮಲಪ್ರಭಾ, ದೊಡ್ಡ ಗಂಗಾ, ವೇದ ಗಂಗಾ, ಈ ಭಾಗಗಳಲ್ಲಿ ಸರ್ಕಾರದವರು ಡ್ಯಾಮ್‌ಗಳನ್ನು ಕಟ್ಟಿಸುವ ಯೋಜನೆಯನ್ನು ಹಾಕಿಕೊಂಡು ರೈತರಿಗೆ ಅನುಕೂಲವಾಗುವಂತೆ ಮಾಡಿಕೊಟ್ಟರೆ ನಮ್ಮ ರಾಜ್ಯಕ್ಕೆ ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ದಯವಿಟ್ಟು ಸರಕಾರದವರು ಇದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮದು ಬೆಲ್ಟ್ ಏರಿಯಾ. ಡೆಪ್ಯೂಟಿ ಕಮೀಷನ್ನರು ನಮ್ಮ ಭಾಗಕ್ಕೆ ಬರಬೇಕಾದಂತ ಅಕ್ಕಿ ಕೋಟಾವನ್ನು ಪರ್ಮಿಟ್ ಕೊಟ್ಟರೂ ಬೆಲ್ಟ್ ಏರಿಯಾಕ್ಕೆ ಕೊಡುವುದಿಲ್ಲ, ಆದರೆ ಕಾಳಾ ಬಜಾರ ಮಾಡುವವರಿಗೆ ಕೇರಳಕ್ಕೋ ಅಥವಾ ಮಹಾರಾಷ್ಟ್ರಕ್ಕೋ ಪರಮಿಟ್ಟ ಕೊಡುತ್ತಾರೆ. ನಮ್ಮ ಭಾಗದ ಜನರಿಗೆ ಅಕ್ಕಿಯನ್ನು ತಿನ್ನುವುದಕ್ಕೆ ಆಗುವುದಿಲ್ಲ. ಬರೀ ಜೋಳವನ್ನೇ ಉಪಯೋಗಿಸಬೇಕಾಗುತ್ತದೆ. ಆದುದರಿಂದ ನಮ್ಮ ಭಾಗದಲ್ಲಿರುವ ಬೆಲ್ಟ್ ಏರಿಯಾ ಎಂಬುವ ಬಂದಿಯನ್ನು ಕಿತ್ತು ಹಾಕಿ ದುಷ್ಕಾಳ ಪರಿಸ್ಥಿತಿಯನ್ನು ಹೇಗಾದರೂ ಮಾಡಿ ಹೋಗಲಾಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

(ಶ್ರೀಮತಿ ಚಂಪಾಬಾಯಿ)

ಮತ್ತೊಂದು ವಿಷಯ ಏನೆಂದರೆ ಈಗ ಎಲ್ಲೆಲ್ಲಿ ಕೆರೆ ಮತ್ತು ಡ್ಯಾಂಗಳು ಇವೆ ಅದನ್ನು ಡೆವಲಪ್ ಮಾಡಲಿಕ್ಕೆ ರೆವಿನ್ಯೂ ಡಿಪಾರ್ಟ್‌ಮೆಂಟಿಗೋ ಅಥವಾ ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟಿಗೋ ಕೊಟ್ಟರೆ ಮುಂದಿನ ವರ್ಷವಾದರೂ ಸ್ವಲ್ಪ ಈ ದುಷ್ಕಾಳ ಪರಿಸ್ಥಿತಿ ಬರುವುದನ್ನು ತಪ್ಪಿಸಬಹುದು ಮತ್ತು ರೈತರಿಗೂ ಪ್ರಯೋಜನವಾಗುತ್ತದೆ. ತಹಸೀಲ್‌ದಾರರಿಂದ ಸಾಲ ಬರಬೇಕಾದರೆ ಸರ್ಕಲ್ ಆಫೀಸಿಗೆ ಎಷ್ಟೋ ಸಲ ಓಡಾಡಬೇಕಾಗುತ್ತದೆ. ಈ ಡೆವಲಪ್ ಸ್ಕೀಂಗಳನ್ನು ಮಾಡಿಕೊಟ್ಟು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊಡುವ ದುಡ್ಡು ನಮ್ಮ ಜಿಲ್ಲೆಗೆ ಮುಟ್ಟದೆ ಬಹಳ ಅನ್ಯಾಯ ವಾಗುತ್ತಾ ಇದೆ. ಆದುದರಿಂದ ಮುಂದೆ ಸ್ಕೇರ್‌ಸಿಟಿ ಏರಿಯಾದಲ್ಲಿ ಕೂಲಿ ಮಾಡುವವರಿಗೆ ಸಂಬಳದ ಸ್ಕೇಲ್‌ಗಳನ್ನು ಹೆಚ್ಚು ಮಾಡಿದ ಪ್ರತಿ ಜಿಲ್ಲೆಗೂ ಇದು ಅನ್ವಯ ಆಗುವಂತೆ ಮಾಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

(Deputy Speaker in the Chair)

Sri B. B. SAYANAK: (Belgaum) Mr. Speaker, Sir, last year we discussed the scarcity conditions in Mysore State and sanctioned Rs.8 crores for scarcity works. I do not know how this money was utilized by the Government and whether there has been any progress made by Government in regard to those schemes. This year also we are discussing the scarcity conditions here. The Food Minister is elling us that Mysore State has become a surplus State and that we want to export rice to Maharashtra and Kerala States. If this is the condition, how can we discuss scarcity conditions in this House? I cannot understand. I agree that there are some pockets in the whole State where there is no rain or where there is heavy rainfall and we are dependent on monsoon. According to me, Mysere State is very wise to demand and get assistance from the Cenral Government, but it is very doubtful whether this Government will utilize this money for scarcity works or whether it will utilize this money for its election campaign.

Since the last 2years there has been scarcity in Belgaum in Khanapur taluk and yet the Government have lodged cases against the agriculturists for recovery of revenue. When we requested the Government to withbraw those cases inview of the scarcity conditions, the Government have not heeded to our request and their cases are pending in courts. This is the sad plight of the agriculturists in the Marathi area.

The Bellary Nala in Khanapur taluk comes under malnad and because of heavy rain fall the whole area is submerged. Since 1956 we have been requesting the Government to construct this Bellary Nala covering more than 1500 acres of land including 2000acres of paddy land which get submerged. This is a very fertile land and because they are submerged we are losing more than 60,000 bags of paddy every year. The loss is to the tune of more than Rs. 4 lakhs. Repeated requests have been made to the Government to construct this Bellary Nala, but the Government have not cared to do this. It is stated that the Superintending Engineer has estimated the cost of the construction of the Bellary Nala at Rs. 12.50 lakhs, but the report of the Chief Engineer is that the estimated cost is likely to be more than Rs 2 crores

The Superintending Engineer situated in Belgaum has estimated it at Rs.12.50 lakhs, but I cannot understand how the Chief Engineer situated at Bangalore car estimate it at more than what the Superintending Engineer has done. Whatevet that be, I request the Governmen to construct this Bellary Nala and take the blessings of thevillagers of Anmol, Masga. Yellur, etc., and I think the nation will prosp r or no account of this. We can grow 60.000 bags of paddy in this area

ಶ್ರೀ ಎಸ್ ಎಚ್. ಬಸಣ್ಣ (ಮೊಳಕಾಲ್ಮೂರು).: ಮಾನ್ಯ ಅಧ್ಯಕ್ಷರೇ ಚಿತ್ರದುರ್ಗ ಜಿಲ್ಲೆ ಯಾವಾಗಲೂ ಅಭಾವ ಪ್ರದೇಶ ಎನ್ನತಕ್ಕ ವಿಚಾರವನ್ನು ಈ ಮನೆಗೆ ನಾನೇನೂ ಹೊಸದಾಗಿ ತಿಳಿಸಬೇಕಾದ ಅವಶ್ಯಕತೆ ಇಲ್ಲ. ಚಿತ್ರದುರ್ಗ ಜಿಲ್ಲೆಯ ಸುಮಾರು ಆರೇಳು ತಾಲ್ಲೂಕುಗಳು ಪ್ರತಿವರ್ಷವೂ ಯಾವಾಗಲೂ ಅಭಾವಕ್ಕೆ ತುತ್ತಾಗುವ ಪ್ರದೇಶಗಳೆಂಬುದು ನಮ್ಮ ಈ ಮನೆಯ ಸದಸ್ಯರಿಗೇ ಗೊತ್ತಾದ ವಿಚಾರ. ಚಿತ್ರದುರ್ಗ ಜಿಲ್ಲೆಗೆ ಪೂರ್ವಭಾಗ ಹಿರಿಯೂರು, ಹೊಸದುರ್ಗ, ಚಳ್ಳಕೆರೆ, ಮೊಳಕಾಲ್ಮೂರು ಮತ್ತು ಜಗಳೂರು ತಾಲ್ಲೂಕುಗಳು ಪ್ರತಿವರ್ಷ ೮ ಇಂಚಿನಿಂದ ೧೨ ಇಂಚಿನವರೆಗೆ ಮಳೆಯಾಗತಕ್ಕ ಪ್ರದೇಶಗಳು. ಇಂತಹ ಪ್ರದೇಶಗಳಲ್ಲಿ ಬೆಳೆಗಳು ಅಥವಾ ಫಸಲುಗಳು ಎಷ್ಟರಮಟ್ಟಿಗೆ ಬರುತ್ತವೆಂಬ ವಿಚಾರ ವನ್ನು ಸರ್ಕಾರದವರು ಯೋಚನೆ ಮಾಡಬೇಕು. ಈಗಾಗಲೇ ನಮ್ಮ ಮಾನ್ಯ ರೆವಿನ್ಯೂ ಸಚಿವರು ನಮ್ಮ ಪ್ರಾಂತ್ಯದಲ್ಲಿ ಪ್ರವಾಸಮಾಡಿ ಎಲ್ಲಾ ಪ್ರದೇಶಗಳನ್ನು ಸುತ್ತಿಕೊಂಡು ಬಂದುದರಿಂದ ಅವರಿಗೆ ಎಲ್ಲಾ ವಿಚಾರ ಗಳೂ ಮನವರಿಕೆಯಾಗಿದೆ. ಆದ್ದರಿಂದ ನಾನೇನೂ ಇನ್ನೂ ಹೆಚ್ಚಿಗೆ ಹೇಳಬೇಕಾದ ವಿಚಾರವಿಲ್ಲ. ಆದರೆ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ದೊಡ್ಡದೊಡ್ಡ ಕಾಮಗಾರಿಕೆಗಳನ್ನು ತೆಗೆದುಕೊಳ್ಳಬೇಕೆಂದು ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹಿರಿಯೂರು ತಾಲ್ಲೂಕಿನ ಮಾರೀಕಣಿವೆಯ ಕೆರೆಗೆ ಎಗಚಿ ನದಿಯಿಂದ ನೀರನ್ನು ಡೈವರ್ಟ್ ಮಾಡಿ ವಾಣೀವಿಲಾಸ ಸಾಗರಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಡ ಬೇಕೆಂದು ಈಗಾಗಲೇ ೮-೧೦ ವರ್ಷಗಳಿಂದಲೂ ಸರ್ಕಾರದವರನ್ನು ಪದೇ ಪದೇ ಒತ್ತಾಯಮಾಡುತ್ತಿದ್ದರೂ ಇನ್ನೂ ಇದುವರಿಗೂ ಆ ಕಾಮಗಾರಿಯನ್ನು ತಗೆದುಕೊಂಡಿಲ್ಲ. ಹಿರಿಯೂರು ತಾಲೂಕಿನ ಮಾರೀಕಣಿವೆಯ ಕೆರೆ ಕೆಳಗಿನ ರೈತರು ಈಗ ಸುಮಾರು ನಾಲ್ಕೈದು ವರ್ಷಗಳಿಂದಲೂ ನೀರಿನ ಅಭಾವಕ್ಕೆಸಿಕ್ಕಿ ಕೋಟ್ಯಾಂತರ ಫಸಲನ್ನು ಹಾಳುಮಾಡಿಕೊಂಡು ಇವತ್ತು ಭಿಕ್ಷೆ ಬೇಡುವ ಹೀನಸ್ಥಿತಿಗೆ ಬಂದಿದ್ದಾರೆ. ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳು ಯಾವಾಗಲೂ ಅಭಾವ ಪ್ರದೇಶಗಳು. ಅಲ್ಲಿ ಅಭಾವ ಬಹಳ ಹೆಚ್ಚಿನ ಮಟ್ಟದಲ್ಲಿದೆ. ಆದ್ದರಿಂದ ಕಮ್ಯೂನಿಟಿವೆಲ್ಸ್ ಮತ್ತು ಇಂಡಿವಿಜಿಯೆಲ್ ವೆಲ್ಸ್‌ಗಳನ್ನು ಅಭಾವ ಹೆಚ್ಚಿಗೆ ಇರತಕ್ಕ ಇಂತಹ ಪ್ರದೇಶಗಳಿಗೆ ಕೊಟ್ಟರೆ ಬಡವರಿ ಅವರಲ್ಲಿಯೂ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಈ ವಿಚಾರವಾಗಿ ಈಗಾಗಲೇ ಮಾನ್ಯ ರೆವಿನ್ಯೂ ಸಚಿವರೂ ಸಹ ಅಲ್ಲಿಗೆ ದಯಮಾಡಿದ್ದಾಗ ಅಲ್ಲಿ ಅವರು ಖುದ್ದು ನೋಡಿದಮೇಲೆ ಅಜಮಾಯಿಷಿ ಮಾಡಿ ಈಗ ಅಲ್ಲಿ ಕಮ್ಯೂನಿಟಿ ವೆಲ್‌ಗಳನ್ನು ಮತ್ತು ಇಂಡಿವಿಜಿಯೆಲ ವೆಲ್‌ಗಳನ್ನು ಕಟ್ಟಿಸಿಕೊಡಬೇಕೆಂದು ಮನಸ್ಸುಮಾಡಿದ್ದಾರೆ. ಒಂದೊಂದು ತಾಲ್ಲೂಕಿಗೆ ಸುಮಾರು ೫೦-೬೦ ಕಮ್ಯೂನಿಟಿ ವೆಲ್‌ಗಳನ್ನು ಕೊಟ್ಟರೆ ಬಹಳ ಅನುಕೂಲವಾಗುತ್ತದೆಂದು ನಾನು ಕಳಕಳಿಯಿಂದ ಸರ್ಕಾರವನ್ನು ಒತ್ತಾಯಮಾಡುತ್ತೇನೆ. ಇನ್ನು ಚಳ್ಳಕೆರೆ ತಾಲ್ಲೂಕಿನ ನಾಯಕಹಟ್ಟಿ ಹಿರೇಕೆರೆ ಫೀಡರ್ ಚಾನಲ್ ಕೊಡಬೇಕೆಂದು ಪದೇಪದೇ ಕೇಳುತ್ತಿದ್ದೇನೆ ಸರ್ಕಾರ ಈ ಕೆಲಸವನ್ನೂ ಸಹ ತೆಗೆದುಕೊಂಡಿಲ್ಲ. ಅತಿ ಜರೂರಾಗಿ ಈ ಹಿರೇಕೆರೆಯ ಫೀಡರ್ ಚಾನಲ್ಲನ್ನು ಮಾಡಿಕೊಟ್ಟರೆ ಅವರ ಕೆಳಗಿನ ಸುಮಾರು ೬ ಸಾವಿರ ಎಕರೆಗಳಷ್ಟು ಪ್ರದೇಶ ನೀರಾವರಿಯಾಗುತ್ತದೆ. ಇದನ್ನು ಅಲ್ಲಿ ಮಾಡದೇ ಇರವುದರಿಂದ ಚಳ್ಳಕೆರೆ ತಾಲ್ಲೂಕಿನಲ್ಲಿ ಬಡಜನಗಳು ಏನೂ ಕೆಲಸಮಾಡದೆ ತಂತಮ್ಮ ಹಳ್ಳಿಗಳನ್ನು ಬಿಟ್ಟು ದಾವಣಗೆರೆ ಕಡೆಗೆ ಹೋಗಿ ಜೀವನವನ್ನು ನಡೆಸುತ್ತಿದ್ದಾರೆ. ಈಗ ಯಾವ ಹಳ್ಳಿಯಲ್ಲಿ ನೋಡಿದರೂ ಜನತೆಯೇ ಇಲ್ಲ. ಅಲ್ಲಿನವರಿಗೆ ಎಷ್ಟು ಕಷ್ಟ ಇದೆಯೆಂಬುದನ್ನು ಮಾನ್ಯ ರವಿನ್ಯೂ ಮಂತ್ರಿಗಳೇ ಖುದ್ದು ನೋಡಿದ್ದಾರೆ. ಆದ್ದರಿಂದ ನೀರಾವರಿ ಅನುಕೂಲತೆಗಳನ್ನು ಅಲ್ಲಿಗೆ ಹೆಚ್ಚುಹೆಚ್ಚಾಗಿ ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಹೇಳುತ್ತೇನೆ. ಈಗ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಜಿನಗಿಹಳ್ಳದ ನೀರುಹರಿದು ಆಂಧ್ರ ಪ್ರದೇಶಕ್ಕೆ ಹೋಗುತ್ತಿದೆ. ನಮ್ಮ ಪ್ರದೇಶದ ನೀರಿನ ಒಂದುಹನಿಯನ್ನೂ ಹೊರಗಡೆಗೆ ಬಿಡುವುದಿಲ್ಲ. ನಾವು ಆ ನೀರನ್ನೆಲ್ಲಾ ಉಪಯೋಗಿಸಿಕೊಳ್ಳಬೇಕೆಂದು ಘಂಟಾಘೋಷವಾಗಿ ಭಾಷಣಮುಖಾಂತರ ಈ ಸಭೆಯಲ್ಲಿ ಮಾತನಾಡುತ್ತಿದ್ದೇವೆ. ಜಿನಗಿ ಹಳ್ಳದ ನೀರು ಆಂಧ್ರಪ್ರದೇಶಕ್ಕೆ ಹರಿದು ಅಲ್ಲಿನ ಜನಗಳಿಗೆ ಹೆಚ್ಚು ಅನುಕೂಲವಾಗುತ್ತಿದೆ. ಮೊಳಕಾಲ್ಮೂರು ಜನತೆಗೆ ಇದರಿಂದ ಏನೂ ಅನಕೂಲವಿಲ್ಲ. ಈಗ ರಂಗಯ್ಯನ ಹತ್ತಿರ ಒಂದು ರಿಜರ್‌ವಾಯರ ಪ್ರಾಜೆಕ್ಟನ್ನು ನಿರ್ಮಾಣ ಮಾಡಬೇಕೆಂದು ಪ್ರಯತ್ನ ಮಾಡಿದ್ದಾರೆ. ಅದರಿಂದ ೧೬ ಸಾವಿರ ಎಕರೆ ನೀರಾವರಿ ಪ್ರದೇಶಕ್ಕೆ ಅನುಕೂಲವಾಗುತ್ತದೆ. ಆ ಪ್ರಾಜೆಕ್ಟನ್ನು ಅತಿ ಜರೂರಿ ಸರ್ಕಾರದವರು ಮಾಡಿಸಿಕೊಡಬೇಕೆಂದು ನಾನು ಕಳಕಳಿಯಿಂದ ಅರಿಕೆಮಾಡಿಕೊಳ್ಳುತ್ತೇನೆ.

(ಶ್ರೀ ಎಸ್. ಹೆಚ್. ಬಸವಣ್ಣ)

ಇನ್ನು ಕೈಗಾರಿಕೆಗಳ ವಿಚಾರ. ಕೈಗಾರಿಕೆಗಳನ್ನು ಯಾವಾಗಲೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೇ ಸ್ಥಾಪನೆ ಮಾಡುತ್ತಿದ್ದಾರೆ. ಸಣ್ಣ ಹಳ್ಳಿಗಳ ಕಡೆ ಕೈಗಾರಿಕೆ ಎನ್ನುವ ಶಬ್ದವೇ ಇಲ್ಲ. ಆದ್ದರಿಂದ ಹಳ್ಳಿಗಳ ಜನತೆಗೆ ಎಷ್ಟರಮಟ್ಟಿಗೆ ಕೆಲಸಗಳು ದೊರೆಯಬಹುದು ಎನ್ನುವ ವಿಷಯವನ್ನು ಸರ್ಕಾರ ಗಮನದಲ್ಲಿಡಬೇಕು. ಏಕೆಂದರೆ ಯಾವ ಕೈಗಾರಿಕೆಯಾಗಲೀ ಅದು ಸಿಟಿ, ಟೌನ್‌ಗಳಲ್ಲಿಯೇ ಇರುತ್ತವೆ. ಹಳ್ಳಿಗಳ ಕಡೆ ಒಂದು ಕೈಗಾರಿಕೆಯೂ ಇಲ್ಲ. ಹಳ್ಳಿಗಳ ಜನತೆಗೆ ಕೂಲಿ ಯಾವಾಗಲೂ ೩೬೫ ದಿವಸಗಳೂ ಸಿಗುವುದಿಲ್ಲ. ಅಲ್ಲಿನ ಜನತೆ ಈಗ ಎಷ್ಟರಮಟ್ಟಿಗೆ ಕಷ್ಟಪಡುತ್ತಿದ್ದಾರೆ ಎನ್ನುವ ವಿಚಾರವನ್ನು ಸರ್ಕಾರ ಮನನ ಮಾಡಬೇಕು. ನಾವು ಇಲ್ಲಿ ಸೇರಿರುವವರು ಬಹುಪಾಲು ಹಳ್ಳಿಗಾಡಿನಿಂದ ಬಂದಿರುವವರೇ. ಆದರೂ ಎಷ್ಟರಮಟ್ಟಿಗೆ ಹಳ್ಳಿಗಳ ಕಡೆ ಅನುಕೂಲಗಳನ್ನು ಮಾಡುತ್ತಿದ್ದಾರೆನ್ನುವ ವಿಚಾರವನ್ನು ಸದಸ್ಯರು ಹಾಗೂ ಸರ್ಕಾರ ಯೋಚನೆ ಮಾಡಬೇಕು. ಇವತ್ತು ಸರ್ಕಾರವನ್ನು ರಚನೆಮಾಡುವವರು ಹಳ್ಳಿಗರು, ರೈತರು, ಕೂಲಿಗಾರರು ಅಂತಹವರನ್ನು ಬಹಳ ನಿಸ್ಪೃಹತೆಯಿಂದ ನೋಡಬೇಕು ನಮ್ಮನ್ನು ಅವರು ಇನ್ನೆಷ್ಟು ವರ್ಷಗಳವರೆಗೆ ಎದುರು ನೋಡುತ್ತಾರೆ. ನಿಜವಾಗಿ ಮುಂದೆ ಕ್ರಾಂತಿಗೇಳುತ್ತಾರೆಂದು ನಾನು ಹೇಳುತ್ತೇನೆ. ಇದು ಬಹಳ ಶೋಚನೀಯವಾದ ವಿಚಾರ. ಇದೇ ರೀತಿ ಮಾಡಿದರೆ ನಿಜವಾಗಿ ಅವರು ಒಂದಲ್ಲ, ಒಂದು ದಿವಸ ಕ್ರಾಂತಿ ಏಳಬೇಕಾಗುತ್ತದೆ. ಆದ್ದರಿಂದ ಹಳ್ಳಿಯ ಜನತೆಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡಿ ಎಂದು ನಾನು ಹೇಳುತ್ತೇನೆ. ಹಳ್ಳಿಯ ಬಡಜನರಿಗೆ, ಸಣ್ಣ ರೈತರಿಗೆ ಎಷ್ಟರ ಮಟ್ಟಿಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂಬುದನ್ನು ಸರ್ಕಾರ ಹೆಚ್ಚಿನ ಮಟ್ಟದಲ್ಲಿ ಯೋಚನೆಮಾಡಿ ರೈತರ ಮತ್ತು ಕೂಲಿಗಾರರ ಹಿತರಕ್ಷಿಸಿ ಅಭಾವ ಪರಿಸ್ಥಿತಿ ಹೋಗಲಾಡಿಸಲು ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಇವತ್ತು ರೈತರು ಸಾಲಗಳನ್ನು ಅನೇಕ ವಿಧದಲ್ಲಿ ಪಡೆದುಕೊಂಡಿದ್ದಾರೆ. ಈ ಸಾಲಗಳ ಜೊತೆಗೆ ಇಂತಹ ಅಭಾವ ಬೇರೆ ಬರುತ್ತದೆ. ಆದ್ದರಿಂದ ರೈತ ಎಷ್ಟರ ಮಟ್ಟಿಗೆ ತಾನು ಮಾಡಿದ ಸಾಲವನ್ನು ತೀರಿಸಬಹುದೆನ್ನುವ ವಿಚಾರವನ್ನು ಸರ್ಕಾರ ಈಗ ಯೋಚನೆ ಮಾಡಬೇಕು. ಸಾಲದ ಮೇಲೆ ಬಡ್ಡಿಕೊಟ್ಟು ಆ ಸಾಲವನ್ನು ಮುಂದುವರಿಸುತ್ತಲೇ ಇದ್ದಾನೆ. ಅದಕ್ಕೆ ಸುಸ್ತಿ ಬಡ್ಡಿ ಬೇರೆ ಅವರು ಕೊಡಬೇಕು. ಅದು ಚಕ್ರಬಡ್ಡಿ. ಪ್ರಿನ್ಸಿಪಲ್‌ಗಿಂತ ಬಡ್ಡಿಯೇ ಜಾಸ್ತಿಯಾಗಿರುತ್ತದೆ. ಒಂದು ತೊಟ್ಟು ಹನಿಯಿಂದ ಒಂದು ಕೊಡವಾಗಿ ಪರಿಣಮಿಸುವ ಹಾಗೆ ರೈತನಾದವನು ಈಗ ಬಹಳ ತೊಂದರೆಗಳನ್ನು ಅನುಭವಿಸುತ್ತಿದ್ದಾನೆ. ಅನೇಕ ಕಷ್ಟಗಳಿಗೀಡಾಗುತ್ತಿದ್ದಾನೆ. ಅದಕ್ಕೋಸ್ಕರ ರೆವಿನ್ಯೂ ಸಚಿವರು ಆ ಕಡೆ ಬಂದಾಗಲೇ ಈ ವಿಚಾರಗಳನ್ನು ತಿಳಿಸಿದ್ದೇನೆ. ಸರ್ಕಾರದವರಲ್ಲಿ ಯೋಚನೆಮಾಡಿ ರೈತರು ಕೊಡುತ್ತಿರುವ ಸುಸ್ತಿ ಬಡ್ಡಿಯನ್ನು ವಜಾಮಾಡಿಸುತ್ತೇನೆಂದು ಭರವಸೆ ಕೊಟ್ಟಿದ್ದರು. ಆದುದರಿಂದ ಆದಷ್ಟು ಜಾಗ್ರತೆಯಾಗಿ ಈ ಸುಸ್ತಿ ಬಡ್ಡಿಯನ್ನು ವಜಾಮಾಡಿಸಿ ತಕ್ಕ ಅನುಕೂಲಗಳನ್ನು ಮಾಡಿಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ತಾಲೂಕಿನಲ್ಲಿ ಕಮರಾ ಫಾರೆಸ್ಟ್ ಇದೆ. ದನಗಳಿಗಾಗಿ ಆ ಕಮರಾ ಗಿಡಗಳ ಸೊಪ್ಪನ್ನು ಉಪಯೋಗಿಸುತ್ತಿದ್ದಾರೆ. ಇಂತಹ ಬರಗಾಲದಲ್ಲಿ ಅದನ್ನು ಉಪಯೋಗಿಸಿ ದನಗಳನ್ನು ಬದುಕಿಸುತ್ತಿದ್ದಾರೆ. ಆದ್ದರಿಂದ ಆ ಕಮರಾ ಗಿಡಗಳ ಸೊಪ್ಪನ್ನು ಕಡಿದುಕೊಂಡು ರೈತರು ಉಪಯೋಗಿಸುವುದಕ್ಕೆ ಸರ್ಕಾರ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಪರ್ಮಿಷನ್ ಕೊಡಬೇಕೆಂದು ತಿಳಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಇನ್ನು ನಮ್ಮಲ್ಲಿ ಜಲಾಶಯ ಒಂದಿದೆ. ಮಳೆ ಇಲ್ಲದಿದ್ದರೂ ಅಂಡರ್‌ಗ್ರೌಂಡ್ ವಾಟರ್‌ಗೆ ಅನುಕೂಲಮಾಡಿದ್ದಾರೆ. ಇದರಿಂದ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಿಗೆ ಹೆಚ್ಚಿಗೆ ಅನುಕೂಲವಾಗಿದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಸಾಲ ಪಡೆದು ಅಲ್ಲಿ ಬಾವಿಗಳನ್ನು ತೆಗೆಯಲು ಅನುಕೂಲವಿದೆ. ಕೆಲವು ರೈತರು ಈ ಲೋನುಗಳಿಗಾಗಿ, ಮತ್ತು ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನುಗಳಿಗಾಗಿ ತಮ್ಮ ಜಮೀನುಗಳನ್ನು ಮಾರ್ಟ್‌ಗೇಜ್ ಮಾಡಿರುತ್ತಾರೆ. ಆದರೆ ಈಗ ಪುನಃ ಅವರು ಬೇರೆ ಬಾವಿ ತೆಗೆಯುವ ಸಾಲಕ್ಕಾಗಲಿ, ಇತರ ಯಾವುದಾದರೂ ಸಹಾಯಕ್ಕಾಗಲಿ ಬ್ಯಾಂಕಿಗೆ ಹೋದರೆ ಅದನ್ನು ಕೊಡುತ್ತಾ ಇಲ್ಲ. ಇದರಿಂದ ರೈತರಿಗೆ ಬಹಳ ಅನಾನುಕೂಲವಾಗುತ್ತಿದೆ. ಆದ್ದರಿಂದ ಅವರ ಜಮೀನು ಮಾರ್ಟ್‌ಗೇಜ್ ಮಾಡಿದ್ದರೂ ಪುನಃ ಬೇರೆ ಕೆಲಸಗಳಿಗೆ ರೈತರಿಗೆ ಬ್ಯಾಂಕಿನಿಂದ ಯಾವ ಒಂದು ಅಡಚಣೆಯೂ ಇಲ್ಲದೆ ಹಣ ಒದಗಿಸುವಂತೆ ಸರ್ಕಾರದವರು ಸೂಚನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. 'ಉದಾಹರಣೆಗೆ ಎನ್‌ಇಎಸ್ ಯಾವ ಆಧಾರವಿಲ್ಲದೆ ಬಾವಿ ತೆಗೆಯುವುದಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆ.

೫-೩೦ ಪಿ.ಎಂ

ಇನ್ನೊಂದು ಏನೆಂದರೆ, ನಮ್ಮಲ್ಲಿ ಬಾವಿಗಳು ಹೆಚ್ಚಿದಾಗ, ಕರೆಂಟಿನ ಅವಶ್ಯಕತೆ ಬಹಳ ಅಗತ್ಯ. ಇವರು ಏಳುವರೆ ಎಚ್‌ಪಿ ಇದ್ದರೆ ಮಾತ್ರ ಕರೆಂಟ್ ಕೊಡುತ್ತೇವೆ, ಇಲ್ಲದಿದ್ದರೆ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಅಂದರೆ, ನಮ್ಮಲ್ಲಿ ಅಭಾವ ಪರಿಸ್ಥಿತಿ ಇರುವುದರಿಂದ ಈ ರೀತಿಯ ಕಾನೂನು ಮಾಡಿದರೆ, ತುಂಬಾ ಜನರಿಗೆ ಅನಾನುಕೂಲವಾಗುತ್ತದೆ. ಆದ್ದರಿಂದ ಸಣ್ಣ ಸಣ್ಣ ಅನೇಕ ಕುಟುಂಬದವರ ಹಿತದೃಷ್ಟಿಯಿಂದ ೩ ಎಚ್‌ಪಿ, ೫ ಎಚ್‌ಪಿಯ ಪಂಪ್ ಸೆಟ್ಟುಗಳಿಗೂ ಕರೆಂಟ್ ಸರ್ಕಾರದವರು ಕೊಡುವಂತೆ ಸೂಚನೆಯನ್ನು ಸಂಬಂಧಪಟ್ಟ ಇಲಾಖೆಯವರಿಗೆ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಮೊಳಕಾಲ್ಮೂರು ಹಿಂದೆ ರೇಶ್ಮೆಗೆ ಹೆಸರುವಾಸಿಯಾದಂತಹ ಸ್ಥಳವಾಗಿತ್ತು. ಇವೊತ್ತಿನ ದಿವಸ ಅಲ್ಲಿನ ನೇಯ್ಗೆಯವರು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಅಲ್ಲಿ ಅಭಾವ ಪರಿಸ್ಥಿತಿ ಇರುವುದರಿಂದ ಅಲ್ಲಿ ಸರ್ಕಾರದವರು ಪವರ್ ಲೂಮುಗಳನ್ನು ಸ್ಥಾಪನೆಮಾಡಿ ಈ ನೇಯ್ಗೆಯ ಜನರಿಗೆ ಕೆಲಸ ದೊರೆಯುವಂತೆ ಅನುಕೂಲ ಕಲ್ಪಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇದಲ್ಲದೆ ಇವತ್ತು ಈ ಬಾವಿಗಳನ್ನು ಮಾಡಿಸುವುದಕ್ಕೆ ಬ್ಲಾಸ್ಟಿಂಗ್ ಮೆಶೀನುಗಳನ್ನು ಇಲಾಖೆಯವರು ತಂದುಹಾಕಿದ್ದಾರೆ. ಆದರೆ ಅದಕ್ಕೆ ಡೈನಮ್ಯಾಟ್ಸ್ ಇಲ್ಲದೆ ೫-೬ ತಿಂಗಳುಗಳಿಂದ ಹಾಗೆಯೇ ಬಿದ್ದಿವೆ. ಈ ಮೆಶೀನುಗಳನ್ನು ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ತಂದರೂ, ಈಗ ಅವುಗಳು ಮೂಲೆಯಲ್ಲಿ ಬಿದ್ದಿವೆ. ಆದ್ದರಿಂದ ಸರ್ಕಾರದವರು ಅದಕ್ಕೆ ಬೇಕಾದ ಡೈನಮ್ಯಾಟ್ಸ್ ತಂದು ಅದನ್ನು ಬೇಗನೇ ಸದುಪಯೋಗಪಡಿಸಿಕೊಳ್ಳುವಂತೆ ಏರ್ಪಾಡು ಮಾಡಬೇಕು ಮತ್ತು ಇವರಿಂದ ರೈತರಿಗೆ ಬಾವಿಗಳನ್ನು ಮಾಡಿಸಲೂ ಅನುಕೂಲವಾಗುವುದರಿಂದ ಇದನ್ನು ಮಾಡಿಸಿಕೊಡಬೇಕಾಗಿ ಕೇಳಿಕೊಂಡು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಸತ್ಯನಾರಾಯಣ ಸಿಂಗ್ (ಹೊಸಪೇಟೆ) ;—ಸನ್ಮಾನ್ಯ ಅಧ್ಯಕ್ಷರೇ, ಈ ಬರಗಾಲ ವಿಚಾರ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಬರಗಾಲ ಬರುವುದಕ್ಕೆ ಅವಕಾಶ ಇದೆಯೇ ಎಂಬ ಸಂಶಯ ಅನೇಕರಲ್ಲಿ ಇರಬಹುದು. ಏಕೆಂದರೆ ಅದು ತುಂಗಭದ್ರಾ ಅಣೆಕಟ್ಟಿನ ನೀರಾವರಿ ಸೌಕರ್ಯವನ್ನು ಹೊಂದಿರುತ್ತದೆ. ಆದರೆ ಇದು ಕೇವಲ ಜಿಲ್ಲೆಯ ಒಂದೆರಡು ಭಾಗಗಳಿಗೆ ಮಾತ್ರ ಆದರೆ ಉಳಿದ ನಾಲ್ಕಾರು ತಾಲೂಕುಗಳಲ್ಲಿ ಜನರು ಯಾವುದೇ ರೀತಿಯ ನೀರಾವರಿ ಸೌಕರ್ಯ-ವಿಲ್ಲದೆ ಬರಗಾಲ ಪರಿಸ್ಥಿತಿಯಿಂದ ಕಷ್ಟಪಡುತ್ತಾರೆ. ಮುಖ್ಯವಾಗಿ ಅರ್ಧಕ್ಕಿಂತ ಹೆಚ್ಚು ಪ್ರದೇಶ ಶಾಶ್ವತವಾಗಿ ಬರಗಾಲ ಪೀಡಿತ ಪ್ರದೇಶವಾಗಿದೆ. ಬಳ್ಳಾರಿಯಲ್ಲಿ ಮಲ್ಲಾಪುರ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕ. ಈ ತಾಲ್ಲೂಕಿನ ಮೂರನೇ ಎರಡು ಭಾಗ ಹಡಗಲಿ ಕ್ಷೇತ್ರಕ್ಕೆ ಸೇರಿದೆ, ಅರ್ಧ ಭಾಗ ನನ್ನ ಕ್ಷೇತ್ರಕ್ಕೆ ಸೇರಿದ ಹಳ್ಳಿಗಳಲ್ಲಿ ಬಹಳ ಕಷ್ಟಮಯವಾದ ಪರಿಸ್ಥಿತಿ ಕಾಣುತ್ತಿದೆ. ಪ್ರತೀ ವರ್ಷ ನಾವು ಇದನ್ನು ಕಾಣುತ್ತಿದ್ದೇವೆ. ಇದಕ್ಕೆ ಕಾರಣ ಇಷ್ಟೆ—ಸರ್ಕಾರದವರು ಈ ಒಂದು ಭಾಗದಲ್ಲಿ ಯಾವ ರೀತಿಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ, ಯಾವ ರೀತಿಯ ಸೌಲಭ್ಯಗಳನ್ನೂ ಅಲ್ಲಿ ಜನರಿಗೆ ಒದಗಿಸದೆ ಇದ್ದನ್ನು. ಉದಾಹರಣೆಗೆ ಹೇಳುವುದಾದರೆ, ಒಂದು ಲಡಕ್ಕನಹಳ್ಳಿ ಲಿಫ್ಟ್ ಇರಿಗೇಶನ್ ಸ್ಕೀಂನ್ನು ತೆಗೆದು ಕೊಂಡು ಮೂರು ವರ್ಷಗಳಿಂದಲೂ ಅದರ ಕೆಲಸಗಳನ್ನು ಮಾಡುತ್ತಿದ್ದಾರೆ. ಆದರೆ ಇವತ್ತಿನ-ವರೆಗೂ ಪೂರ್ತಿಯಾಗಲಿಲ್ಲ. ಅದಲ್ಲದೆ ಮೂರು ಲಿಫ್ಟ್ ಇರಿಗೇಶನ್ ಸ್ಕೀಂ ಈ ಭಾಗದಲ್ಲಿ ಸ್ಯಾಂಕ್ಷನ್ ಆಗಿದೆ. ಆದರೆ ಸರ್ಕಾರದವರು ಅದಕ್ಕೆ ಒಂದು ಶರತ್ತು ಹಾಕಿದ್ದಾರೆ. ಅಲ್ಲಿಯ ಜನರು ಕೊ ಆಪರೇಟಿವ್ ಸೊಸೈಟಿಗೆ ಶೇರ್ ಧನ ಕೂಡಿಸಿದರೆ ಮಾತ್ರ ಆ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆಂದು ಹೇಳುತ್ತಾರೆ. ಅಲ್ಲಿಯ ಜನರಿಗೆ ಒಂದು ಹೊತ್ತಿಗೆ ಆಹಾರ ಇಲ್ಲದೆ ಇರುವಾಗ ಇಷ್ಟೊಂದು ಶ್ಯಾರ್ ಕಲ್ಪಿಸುವುದು ಸಾಧ್ಯ-ವಿಲ್ಲದ ಮಾತು. ಹೀಗಿದ್ದುದರಿಂದ ಈ ಮೂರು ಯೋಜನೆಗಳು ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಕಾರ್ಯಗತವಾಗದೆ, ಈ ಬರಗಾಲ ಪರಿಸ್ಥಿತಿ ಇನ್ನೂ ಹೆಚ್ಚಿನ ಗಂಭೀರ ಪರಿಸ್ಥಿತಿಗೆ ಹೋಗಲು ಕಾರಣ-ವಾಯಿತು. ಆದ್ದರಿಂದ ಸರ್ಕಾರದವರು ಈ ಶ್ಯಾರ್ ಧನ ಕೊಡಬೇಕೆಂದು ಏನು ಮಾಡಿದ್ದಾರೆ, ಆ ಶರತ್ತನ್ನು ಮನ್ನಾಮಾಡಿ ಅದಕ್ಕೆ ಸ್ಪೆಶಲ್ ಎಗ್ಸೆಂಶನ್ ಕೊಟ್ಟು ಆ ಮೂರು ಲಿಫ್ಟ್ ಇರಿಗೇಶನ್ ಸ್ಕೀಮುಗಳನ್ನು ಕಾರ್ಯಗತ ಮಾಡಿದರೆ, ಅಲ್ಲಿಯ ಜನರ ಪರಿಸ್ಥಿತಿ ತಕ್ಕಷ್ಟು ಮಟ್ಟಿಗೆ ಸುಧಾರಿಸುತ್ತದೆಂದು ನಾನು ಹೇಳುತ್ತೇನೆ ಅದಲ್ಲದೆ ಈ ಪ್ರದೇಶದಲ್ಲಿ ಮಾಡಬಿಹಾಳ್ ಲಿಫ್ಟ್ ಇರಿಗೇಶನ್ ಸ್ಕೀಂ ಮತ್ತು ವರ್ಧಾಪರರ ಲಿಫ್ಟ್ ಇರಿಗೇಶನ್ ಸ್ಕೀಂ ಮಾಡುವುದಕ್ಕೆ ಅವಕಾಶ ಇದೆ. ಈ ಪ್ರದೇಶ ತುಂಗಭದ್ರಾ ಅಣೆಕಟ್ಟಿನ ಹಿಂದೆ ಇರುವುದರಿಂದ ಅಲ್ಲಿಗೆ ಲಿಫ್ಟ್ ಇರಿಗೇಶನ್ ಮೂಲಕ ನೀರಾವರಿ ಸೌಲಭ್ಯ ಒದಗಿಸುವುದಕ್ಕೆ

(ಶ್ರೀ ಬಿ. ಸತ್ಯನಾರಾಯಣಸಿಂಗ್)

ಸಾಧ್ಯವಿದೆ. ಇದನ್ನು ಕಾರ್ಯಗತ ಮಾಡಿದರೆ, ಜನರಿಗೆ ಹೆಚ್ಚಿನ ಇರಿಗೇಶನ್ ಸೌಲಭ್ಯ ಒದಗುತ್ತದೆ. ನನ್ನ ಕ್ಷೇತ್ರದಲ್ಲಿ ಹಡಗಲಿಗೆ ಸೇರಿದ ೮-೧೦ ಹಳ್ಳಿಗಳಿವೆ, ಅವುಗಳ ಪರಿಸ್ಥಿತಿ ಬಹಳ ವಿಚಿತ್ರವಾಗಿದೆ. ಒಂದು ಕಾಲದಲ್ಲಿ ಈ ಹಳ್ಳಿಗಳು ಬಹಳ ನೀರಾವರಿ ಸೌಲಭ್ಯಗಳನ್ನು ಹೊಂದಿದ್ದಂತಹ ಪ್ರದೇಶವಾಗಿತ್ತು. ಅಲ್ಲಿಯ ಜನರು ಈ ಅಣೆಕಟ್ಟು ಕಟ್ಟುವುದಕ್ಕೆ ಬಹಳ ತ್ಯಾಗವನ್ನು ಮಾಡಿದ್ದಾರೆ. ಆದರೆ ಇವತ್ತು ಅದೇ ಜನರು ಬರಗಾಲಕ್ಕೆ ತುತ್ತಾಗಿ ಬಹಳ ಕಷ್ಟಪಡುತ್ತಿದ್ದಾರೆ. ಇವರು ತಮ್ಮ ನೆಲ, ಮಣ್ಣು, ಭೂಮಿಗಳನ್ನು ಬಿಟ್ಟುಕೊಟ್ಟು ಭವ್ಯ ಅಣೆಕಟ್ಟನ್ನು ಕಟ್ಟುವುದಕ್ಕೆ ಸಹಾಯ ಮಾಡಿದ್ದಾರೆ. ೧೦-೬ ವರ್ಷಗಳಿಂದ ಈ ಹಳ್ಳಿಯ ಜನರು ಕಷ್ಟವನ್ನು ಎದುರಿಸುತ್ತಿದ್ದಾರೆ. ಸರ್ಕಾರದವರು ಇದಕ್ಕೆ ಯಾವ ಗಮನವನ್ನೂ ಕೊಟ್ಟಿಲ್ಲ, ಮತ್ತು ತಾಲೂಕು ಅಭಿವೃದ್ಧಿ ಮಂಡಲಿಯೂ ಯಾವ ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಆದ್ದರಿಂದ ಆ ಹಳ್ಳಿಗಳ ಬಗ್ಗೆ ಹೆಚ್ಚಿನ ಶ್ರದ್ಧೆ ವಹಿಸಿ ಈ ಪ್ರದೇಶಕ್ಕೆ ಹೆಚ್ಚಿನ ಗಮನ ಕೊಟ್ಟು ಅಲ್ಲಿಯ ಜನರಿಗೆ ಬೇಕಾದ ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಮುಖ್ಯವಾಗಿ ಈ ಒಂದು ಹಡಗಲಿ ಕ್ಷೇತ್ರದಲ್ಲಿ ನಾನು ಹೇಳಿದಂತೆ ಏರಿಯಾ ಡೆವಲಪ್‌ಮೆಂಟ್ ಸ್ಕೀಮ್ ಮಾಡಿದರೆ ಮಾತ್ರ ಒಳ್ಳೆಯ ನೀರಾವರಿ ಸೌಲಭ್ಯವನ್ನು ಸುಧಾರಣೆ ಮಾಡುವುದಕ್ಕೆ ಸಾಧ್ಯ-ವಾಗುತ್ತದೆ. ಅಲ್ಲಿ ಬೇರೆಯಾವ ಕೆರೆ ಕುಂಟೆಗಳೂ ಇಲ್ಲ. ಅಲ್ಲಿ ಇನ್ನೊಂದು ರೀತಿಯಲ್ಲಿ ಸಹಾಯ-ಮಾಡುವುದಕ್ಕೆ ಸಾಧ್ಯ ಇದೆ. ಅದು ಏನೆಂದರೆ ಹಗರಿ ಬೊಮ್ಮನಹಳ್ಳಿ ಪ್ರಾಜೆಕ್ಟಿನಿಂದ ಒಂದು ಕಾಲುವೆ-ಯನ್ನು ತೆಗೆದು ಆ ಪ್ರದೇಶಕ್ಕೆ ನೀರನ್ನು ಒದಗಿಸಿಕೊಟ್ಟರೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದನ್ನು ಸರ್ಕಾರದವರು ಪರಿಶೀಲನೆ ಮಾಡಿ ಈ ಒಂದು ಸವಲತ್ತನ್ನು ಒದಗಿಸಬೇಕು ಎಂದು ನಾನು ಹೇಳುತ್ತೇನೆ.

ಮೂರನೆಯದಾಗಿ ಹೊಸಪೇಟೆ ತಾಲ್ಲೂಕಿನ ವಿಚಾರ ಬಹಳ ವಿಚಿತ್ರವಾಗಿದೆ. ತುಂಗಭದ್ರಾ ಪ್ರಾಜೆಕ್ಟ್ ಬಂದಮೇಲೆ ಎಡಗಡೆ ಮತ್ತು ಬಲಗಡೆ ತುಂಗಭದ್ರಾ ಕಾಲುವೆ ಇದೆ. ಹೆಚ್ಚಿನ ನೀರಾವರಿ ಸೌಲಭ್ಯಗಳೂ ಇವೆ. ಆದರೆ ಹೊಸಪೇಟೆಯ ಅರ್ಧಭಾಗ ಗಾಜನೂರು ಫಿರ್ಕಾದಲ್ಲಿ ಯಾವಾಗಲೂ ಬರಗಾಲ ಇದ್ದೇ ಇರುತ್ತದೆ ಅಲ್ಲಿ ಯಾವರೀತಿಯ ಕೆರೆ ಕುಂಟೆಯೂ ಇಲ್ಲ. ಅಲ್ಲಿ ನೀರಾವರಿ ಸೌಲಭ್ಯ ಇಲ್ಲದೆ ಜನಗಳು ಬಹಳ ಕಷ್ಟಪಡುತ್ತಿದ್ದಾರೆ. ಈಗಾಗಲೇ ಅನೇಕವರ್ಷಗಳಿಂದ ಅಲ್ಲಿ ಬರಗಾಲ ಬರುತ್ತಿದೆ. ಪ್ರತಿವರ್ಷವೂ ಅದರ ನಿವಾರಣೆಗೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ. ಆದರೆ ಕಳೆದ ೧೮ ವರ್ಷಗಳಿಂದಲೂ ಅಲ್ಲಿ ಯಾವ ಅಭಿವೃದ್ಧಿಯ ಕಾರ್ಯಕ್ರಮವನ್ನೂ ಮಾಡಿಲ್ಲ. ಅಲ್ಲಿ ಮೂರು ಕೆರೆಗಳನ್ನು ಕಟ್ಟುವುದಕ್ಕೆ ಅವಕಾಶ ಇದೆ. ಮೊನ್ನೆ ಮೈನರ್ ಇರಿಗೇಷನ್ ಡೆಪ್ಯೂಟಿ ಮಿನಿಸ್ಟರ್ ಅಲ್ಲಿಗೆ ಬಂದಿದ್ದಾಗ ನಾವು ಈ ವಿಚಾರವನ್ನು ಅವರಿಗೆ ತಿಳಿಸಿದ್ದೇವೆ, ಅವರು ಅದನ್ನು ನೋಡಿಕೊಂಡು ಬಂದಿದ್ದಾರೆ. ಆದ್ದರಿಂದ ಆ ಕೆರೆಗಳ ಕೆಲಸವನ್ನು ಈ ಫ್ಯಾಮಿನ್ ರಿಲೀಫ್ ಕೆಲಸದಲ್ಲಿ ತೆಗೆದುಕೊಂಡು ಮಾಡಿದರೆ ಒಳ್ಳೆಯದು. ಮತ್ತು ಹೊಸಪೇಟೆಯ ಸಮೀಪದಲ್ಲಿ ಕಲ್ಲಹಳ್ಳಿ ಎನ್ನುವ ಒಂದು ದೊಡ್ಡ ಕೆರೆ ಇದೆ. ಅಲ್ಲಿ ಮಳೆ ಬಂದರೂ ಕೂಡ ಆ ಕೆರೆಯಲ್ಲಿ ನೀರು ನಿಲ್ಲದೆ ಹರಿದುಹೋಗುತ್ತದೆ. ಅದನ್ನು ಸರಿಯಾಗಿ ಕಟ್ಟಿಸಿ ಕೊಟ್ಟರೆ ಅನುಕೂಲವಾಗುತ್ತದೆ. ಅಲ್ಲಿ ಒಂದು ಸಾವಿರ ಎಕರೆ ನೀರಾವರಿ ಆಗುತ್ತದೆ. ಅಲ್ಲಿ ಮಳೆ ನೀರು ಬಂದು ಹತ್ತಾರು ಎಕರೆ ಬೆಳೆ ನೀರಿನಲ್ಲಿ ಮುಳುಗಿ ಬಹಳ ಹಾನಿಯಾಗುತ್ತಿದೆ. ಈ ಒಂದು ದೃಷ್ಟಿಯಿಂದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಕ್ಷಾಮಪರಿಹಾರ ಕೆಲಸಗಳನ್ನು ವಹಿಸಿ ಕೊಡತಕ್ಕದ್ದು ಉಚಿತವಲ್ಲ. ಅಲ್ಲಿ ಹೆಚ್ಚಿನ ರಾಜಕೀಯ ನಡೆಯುತ್ತಿದೆ. ಇದರಿಂದ ಕ್ಷಾಮಪರಿಹಾರ ಕಾರ್ಯಕ್ಕಾಗಿ ಒದಗಿಸತಕ್ಕಂಥ ಹಣ ದುರುಪಯೋಗವಾಗುವಂತಹ ಸಂಭವ ಹೆಚ್ಚು ಇದೆ. ಆದ್ದರಿಂದ ಈ ಅಭಾವ ಪರಿಹಾರ ಕಾಮಗಾರಿಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮುಖಾಂತರ ಮಾಡಿಸುವುದಕ್ಕೆ ಬದಲಾಗಿ ಪಿ. ಡಬ್ಲ್ಯುಡಿ. ಮುಖಾಂತರ ಈ ಕಾಮಗಾರಿಗಳನ್ನು ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬರಗಾಲಕ್ಕೆ ಸಂಬಂಧಪಟ್ಟ ಹಾಗೆ ಪ್ರತಿಜಿಲ್ಲೆಯಲ್ಲಿಯೂ ಒಂದೊಂದು ಜಿಲ್ಲಾ ಯೋಜನೆಯನ್ನು ಹಾಕಿಕೊಂಡು ಅದನ್ನು ಕಾರ್ಯಗತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೂ ನಾನು ಇದನ್ನು ತಂದಿದ್ದೇನೆ. ಕಲ್ಲಹಳ್ಳಿ ಮತ್ತು ಮಲ್ಲಾಪುರ ಈ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಜಾಸ್ತಿಯಾಗುತ್ತಿದೆ. ಇದರಿಂದ ಜನಗಳಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಆದಷ್ಟು ಜಾಗ್ರತೆ ಆ ಹಳ್ಳಿಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ದೊರಕಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ) :—ಮಾನ್ಯ ಅಧ್ಯಕ್ಷರೇ, ಕ್ಷಾಮ ಪರಿಹಾರದ ಬಗ್ಗೆ ಸರ್ಕಾರದವರು ಕೊಟ್ಟಿರುವಂತಹ ಒಂದು ವರದಿಯನ್ನು ನಾನು ಕೂಲಂಕಷವಾಗಿ ಪರಿಶೀಲನೆ ಮಾಡಿದಾಗ ಅದರಲ್ಲಿ ೨೩ನೇ ಸೆಪ್ಟೆಂಬರ್ ೧೯೭೦ರ ವರೆಗೆ ನಾಲ್ಕು ರೆವಿನ್ಯೂ ವಿಭಾಗಗಳಿಗೆ ಹಂಚಿರತಕ್ಕ ಹಣವನ್ನು ಖರ್ಚು ಮಾಡಿರತಕ್ಕ ತಃಖ್ತೆ ಈ ವರದಿಯಲ್ಲಿ ಇದೆ. ಜಿಲ್ಲಾವಾರು ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ, ಎಷ್ಟೆಷ್ಟು ಜನಗಳನ್ನು ಕಾಮಗಾರಿಗೆ ನೇಮಕ ಮಾಡಿಕೊಂಡು ಕೆಲಸ ಮಾಡಿದ್ದಾರೆ ಎನ್ನುವ ವರದಿಯನ್ನು ಕೊಟ್ಟಿದ್ದಾರೆ. ಒಟ್ಟು ನಮ್ಮ ಸಂಸ್ಥಾನದಲ್ಲಿ ೨ ಕೋಟಿ ೭೨ ಲಕ್ಷ ರೂಪಾಯಿಗಳನ್ನು ರಿಲೀಫ್ ಕಾಮಗಾರಿಗಳಿಗೋಸ್ಕರವಾಗಿ ಖರ್ಚು ಮಾಡಲು ಒದಗಿಸಿದ್ದಾರೆ. ಇದರಲ್ಲಿ ೬ ಜಿಲ್ಲೆಗಳಲ್ಲಿ ಮಾತ್ರ ಹೆಚ್ಚು ಕಾರ್ಯಕ್ರಮವನ್ನು ಹಾಕಿಕೊಂಡು ಆ ಕೆಲಸಗಳಿಗೆ ಜನಗಳನ್ನು ನೇಮಿಸಿಕೊಂಡು ಕೆಲಸ ಮಾಡಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಅನೇಕ ಕಡೆಗಳಲ್ಲಿ ಈ ರಿಲೀಫ್ ಕಾಮಗಾರಿಗಳು ನಡೆಯದೇ ಇರುವುದಕ್ಕೆ ಕಾರಣವೇನು? ಈ ಬಗ್ಗೆ ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡುವುದು ಅತ್ಯಗತ್ಯ ಎಂದು ನಾನು ಭಾವಿಸುತ್ತೇನೆ. ಒಂದು ವೇಳೆ ರಿಲೀಫ್ ಕಾಮಗಾರಿಗಳನ್ನು ಮಾಡಿಸುವ ಅವಶ್ಯಕತೆ ಇಲ್ಲದೆ ಇರಬಹುದೆ? ಅಥವಾ ಕೊಟ್ಟಿರುವ ಹಣವನ್ನು ಉಪಯೋಗ ಮಾಡಿಕೊಳ್ಳುವ ಶಕ್ತಿ ಆ ಸ್ಥಳಗಳವರಿಗೆ ಇಲ್ಲವೇ ಎನ್ನುವ ಸಂಶಯ ಜನಗಳಲ್ಲಿ ಮೂಡಿದೆ, ಇತ್ತೀಚೆಗೆ ಈ ಪರಿಹಾರ ಕಾಮಗಾರಿಗಳಿಗೋಸ್ಕರ ಎರಡೂವರೆ ಕೋಟಿ ರೂಪಾಯಿಗಳನ್ನು ಸಪ್ಲಿಮೆಂಟರಿ ಬಡ್ಜೆಟ್ ಎಸ್ಟಿಮೇಟಿನಲ್ಲಿ ಸರ್ಕಾರ ಈ ಸಭೆಯ ಮುಂದೆ ಮಂಡಿಸಿದ್ದಾರೆ. ಇದಕ್ಕೆ ಕೇಂದ್ರ ಸರ್ಕಾರದವರು ಕೊಡತಕ್ಕಂಥ ೨ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ಸೇರಿಸಿದರೆ ೫ ೧/೨ ಕೋಟಿ ರೂಪಾಯಿಗಳಾಗುತ್ತದೆ, ಈ ೫ ೧/೨ ಕೋಟಿ ರೂಪಾಯಿಗಳನ್ನು ೧೯೭೧ನೇ ಮಾರ್ಚಿ ೩೧ನೇ ತಾರೀಖಿನೊಳಗಾಗಿ ಇಡೀ ಸಂಸ್ಥಾನದಲ್ಲಿ ಕಾಮಪರಿಹಾರ ಕ್ಷಾಮಗಾರಿಗಳಿಗಾಗಿ ಖರ್ಚು ಮಾಡಬೇಕಾಗಿದೆ. ಹಣವನ್ನು ಒದಗಿಸುವಾಗ ಕೆಲವು ಜಿಲ್ಲೆಗಳಿಗೆ ಹೆಚ್ಚು, ಕೆಲವು ಜಿಲ್ಲೆಗಳಿಗೆ ಕಡಿಮೆ ಹಣವನ್ನು ಹಂಚಿದ್ದಾರೆ. ಇನ್ನು ಮುಂದೆ ಈಗ ಕಡಿಮೆ ಕೊಟ್ಟಿರುವ ಜಿಲ್ಲೆಗಳಿಗೆ ಹೆಚ್ಚು ಪ್ರಮಾಣದ ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಮತ್ತು ಕ್ಷಾಮಪರಿಹಾರ ಕಾಮಗಾರಿಗಳಿಗೆ ಹಣವನ್ನು ಏನು ಒದಗಿಸುತ್ತೀರಿ ಆ ಹಣವನ್ನು ಹೆಚ್ಚು ಪ್ರಮಾಣದಲ್ಲಿ ಸಣ್ಣ ನೀರಾವರಿ ಯೋಜನೆಗಳಿಗೆ ಖರ್ಚು ಮಾಡುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ. ಮತ್ತು ಈ ಹಣವನ್ನು ಆಯಾ ಜಿಲ್ಲೆಯಲ್ಲಿರತಕ್ಕ ಪಿ. ಡಬ್ಲ್ಯು. ಡಿ. ಇಲಾಖೆಗೆ ಒದಗಿಸಿ ಅರ್ಧಂಬರ್ಧಕ್ಕೆ ನಿಂತು ಹೋಗಿರತಕ್ಕ ೪೪ ಐ. ಎಸ್. ಇ. ಡಿ. ಕೆಲಸಗಳನ್ನು ಪೂರ್ತಿ ಮಾಡಬೇಕಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕ್ಷಾಮ ಪರಿಹಾರದ ಕೆಲಸಗಳನ್ನು ಕೈಗೊಳ್ಳುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಎಲ್ಲೆಲ್ಲಿ ಇಲ್ಲವೋ ಅಂಥ ಕಡೆಗಳಲ್ಲೆಲ್ಲಾ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನೂ ಅನೇಕ ಕಡೆಗಳಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರು ಇಲ್ಲದೆ ಜನಗಳು ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಜನಗಳಿಗೆ ಕುಡಿಯುವ ನೀರನ್ನು ಒದಗಿಸತಕ್ಕದ್ದು ಸರ್ಕಾರದ ಜವಾಬ್ದಾರಿ ಎಂದು ನಾನು ನಂಬಿದ್ದೇನೆ.

ಕ್ಷಾಮಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುವಾಗ ಪ್ರಾಯೋಗಿಕವಾಗಿ ನೀರಾವರಿ ಬಾವಿಗಳನ್ನು ತೆಗೆಸತಕ್ಕ ಪಾಲಿಸಿಯನ್ನು ಇತ್ತೀಚೆಗೆ ಸರ್ಕಾರದವರು ಅಳವಡಿಸಿಕೊಂಡಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಪರಿಹಾರ ಕಾಮಗಾರಿಗಳಿಗಾಗಿ ಒದಗಿಸತಕ್ಕಂಥ ಹಣದಲ್ಲಿ ಕಾಲುಭಾಗ ಹಣವನ್ನು ಇಂಥಾ ಒಂದು ಉದ್ದೇಶಕ್ಕಾಗಿ ಖರ್ಚು ಮಾಡತಕ್ಕ ಅವಕಾಶವನ್ನು ಇಟ್ಟುಕೊಳ್ಳಬೇಕು ಇಂಥಾ ಒಂದು ಆದೇಶವನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸರ್ಕಾರದವರು ಕೊಡಬೇಕು. ಮತ್ತು ರಿಲೀಫ್ ಕಾಮಗಾರಿ-ಗಳಿಗಾಗಿ ಅಲಾಟ್ ಮಾಡತಕ್ಕ ಹಣವನ್ನು ಆಯಾ ಜಿಲ್ಲೆಯ ರಿಲೀಫ್ ಸಲಹಾ ಸಮಿತಿಯ ಮೂಲಕ ಸಲಹೆಗಳನ್ನು ಪಡೆದು ನಂತರ ಖರ್ಚು ಮಾಡಬೇಕು. ತುಮಕೂರು ಜಿಲ್ಲೆಯಲ್ಲಿರತಕ್ಕ ಕಳ್ಳಂಬೆಳ್ಳ ಬಹಳ ವಿಚಿತ್ರವಾದ ಕ್ಷೇತ್ರವಾಗಿದೆ. ಈ ಕ್ಷೇತ್ರ ೩ ತಾಲ್ಲೂಕುಗಳನ್ನು ಒಳಗೊಂಡ ಒಂದು ಕ್ಷೇತ್ರವಾಗಿದೆ. ಈ ಮೂರು ತಾಲ್ಲೂಕುಗಳಲ್ಲಿರತಕ್ಕ ೫ ಹೋಬಳಿಗಳು ಬಹಳ ಪುರಾತನ ಕಾಲದಿಂದಲೂ ಕ್ಷಾಮಕ್ಕೆ ಹೆಚ್ಚು ತುತ್ತಾಗಿರತಕ್ಕ ಪ್ರದೇಶಗಳು. ೧೯೬೩ನೇ ಇಸವಿಯಲ್ಲಿ ಸರ್ಕಾರದವರು ನೇಮಿಸಿದ್ದ ಒಬ್ಬ ಸ್ಪೆಷಲ್ ಆಫೀಸರು ಕೊಟ್ಟಂತ ವರದಿಯ ಮುಖಾಂತರ ನನ್ನ ಕ್ಷೇತ್ರದ ಸ್ಥಿತಿಗತಿಗಳು ಸರ್ಕಾರದ ಗಮನಕ್ಕೆ ಬಂದಿದೆ. ಮತ್ತು ರಾಮಮೂರ್ತಿ ಕಮಿಷನ್ನಿನವರು ತುಮಕೂರು ಜಿಲ್ಲೆಯಲ್ಲಿ ಪರೀಕ್ಷೆಯನ್ನು ನಡೆಸಿದಾಗ ಅವರು ನಮ್ಮ ಕ್ಷೇತ್ರದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸೂಕ್ತವಾದ ವರದಿಯನ್ನು ಸಲ್ಲಿಸಿದ್ದಾರೆ ಅಂತಹ ವರದಿಗಳನ್ನು ಸಾಧ್ಯವಾದರೆ ಸರ್ಕಾರದವರು ಈ ಸಭೆಯ ಮಾನ್ಯ ಸದಸ್ಯರಿಗೆ ಒದಗಿಸಿದರೆ ಯಾವ ಯಾವ ತಾಲ್ಲೂಕುಗಳು ಯಾವ ಯಾವ ಪ್ರದೇಶಗಳು ಆ ವರದಿಯಲ್ಲಿ ಸೇರಿವೆ ಎಂಬುದನ್ನು ನಾವು ತಿಳಿದುಕೊಂಡು ಆ ಬಗ್ಗೆ ನಾವು ಕೂಡ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಕ್ಷಾಮ

(ಶ್ರೀ ಬಿ. ಗಂಗಣ್ಣ)

ಬಂದಾಗ ರೈತರಿಗೆ ಆಹಾರ ಪಾದಾರ್ಥಗಳನ್ನು ಕೊಳ್ಳುವ ಶಕ್ತಿ ಇರುವುದಿಲ್ಲ. ಏಕೆಂದರೆ ಕ್ಷಾಮ ಪರಿಹಾರದ ಕೆಲಸ ಮಾಡುವಂತಹ ಜನರಿಗೆ ಕೊಡುವ ಕೂಲಿ ಬಹಳ ಕಡಿಮೆ ಇರುತ್ತದೆ. ಆದ್ದರಿಂದ ಕ್ಷಾಮ ಪರಿಹಾರದ ಬಗ್ಗೆ ಖರ್ಚು ಮಾಡುವಂತ ಹಣದಲ್ಲಿ ಸಲ್ಪ ಭಾಗವನ್ನು ಆಹಾರ ಇಲಾಖೆಯವರಿಗೆ ಕೊಟ್ಟು ಆಹಾರ ಇಲಾಖೆಯವರಿಂದಲೇ ಕೂಲಿ ಕೆಲಸ ಮಾಡುವವರಿಗೆ ಒಂದು ಕೆ.ಜಿ ಗೆ ೮೦ ಪೈಸೆ ಯಂತೆ ಆಹಾರಧಾನ್ಯವನ್ನು ಒದಗಿಸುವ ಏರ್ಪಾಡು ಮಾಡಬೇಕು ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಸರ್ಕಾರದವರಲ್ಲಿ ಬೇಡಿಕೊಳ್ಳುತ್ತೇನೆ. ಕ್ಷಾಮ ಬಂದಾಗ ದನಕರುಗಳ ಮೇವಿಗೂ ಕೂಡ ಕಷ್ಟ ಬರುತ್ತದೆ ಓಳನೇ ಫಾರೆಷ್ಟ್ ಆಕ್ಟನ ತಿದ್ದುಪಡಿಯ ಪ್ರಕಾರ ಫಾರೆಷ್ಟ್ ಅಧಿಕಾರಿಗಳ ಅನುಮತಿಯಿಲ್ಲದೆ ದನಕರುಗಳು ಕಾಡಿನಲ್ಲಿ ಮೇಯುವುದಕ್ಕೆ ಅವಕಾಶವಿಲ್ಲ. ಪ್ರೊಟೆಕ್ಟ್ಡ್ ಫಾರೆಸ್ಟ್ ಆಗಲಿ, ಅಥವಾ ಡಿಸ್ಟ್ರಿಕ್ಟ್ಡ್ ಫಾರೆಷ್ಟ್ ಆಗಲೀ, ಕೊನೆಯ ಪಕ್ಷ ತುಮಕೂರು ಜಿಲ್ಲೆಯಲ್ಲಿಯಾದರು ಕೂಡ ಈಗಿನ ಕಾನೂನನ್ನು ಸಡಿಲಗೊಳಿಸಿ ಕಾಡಿನಲ್ಲಿ ದನಕರುಗಳು ಮೇಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಬೇಡುತ್ತೇನೆ. ನಮ್ಮ ಸರ್ಕಾರದವರು ಈಗ ಕೆಲವು ಜಿಲ್ಲೆಗಳಲ್ಲಿ ರೂರಲ್ ವರ್ಕ್ಸ್ ಪ್ರಾಜೆಟ್ ಪ್ರೋಗ್ರಾಮನ್ನು ಕೈಗೊಳ್ಳುವ ಬಗ್ಗೆ ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ. ಇದರಲ್ಲಿ ನಮ್ಮ ತುಮಕೂರು ಜಿಲ್ಲೆ ಸೇರಿಲ್ಲ. ತುಮಕೂರು ಜಿಲ್ಲೆ ತೀವ್ರ ಅಭಾವಕ್ಕೆ ಒಳಗಾದ ಜಿಲ್ಲೆ ಎಂಬುದೇ ನಮ್ಮ ಸರ್ಕಾರದವರಿಗೆ ಗೊತ್ತಿದೆ. ಆದ್ದರಿಂದ ಈ ಜಿಲ್ಲೆಯಲ್ಲಿ ಕೂಡ ರೂರಲ್ ವರ್ಕ್ಸ್ ಪ್ರಾಜೆಟ್ ಪ್ರೊಗ್ರಾಮ್‌ನ್ನು ಕೈಗೊಳ್ಳುವುದಕ್ಕೆ ನಮ್ಮ ಸರ್ಕಾರದವರು ವಿಶಾಲ ಮನಸ್ಸು ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ತುಮಕೂರು ಜಿಲ್ಲೆಯಲ್ಲಿ ನೀರಾವರಿಯಾಗತಕ್ಕಂಥ ಜಮೀನು ಶೇಕಡ ಆರರಷ್ಟು ಮಾತ್ರ ಇದೆ. ನಮ್ಮ ಜಿಲ್ಲೆಯಲ್ಲಿ ನದಿ ನೀರಿನ ಸೌಕರ್ಯ ಇಲ್ಲ. ಈ ಕಾರಣದಿಂದ ಸರ್ಕಾರದವರು ಹೇಮಾವತಿ ಮತ್ತು ಯಗಚಿ ನದಿಗಳಿಂದ ನೀರನ್ನು ಒದಗಿಸುವ ಬಗ್ಗೆ ವಿಚಾರ ಮಾಡಬೇಕು. ಈ ವಿಚಾರ ಸರ್ಕಾರದವರ ಪರಿಶೀಲನೆಯಲ್ಲಿದೆಯೆಂದು ಕೂಡ ಕೇಳಿದ್ದೇನೆ. ಈಗ ತಾನೆ ಮಾತನಾಡಿದಂಥ ಮಾನ್ಯ ರಾಮಣ್ಣನವರು ಈ ನದಿಗಳಿಂದ ನೀರನ್ನು ತುಮಕೂರು ಜಿಲ್ಲೆಗೆ ಒದಗಿಸುವ ವಿಚಾರವನ್ನು ಸರ್ಕಾರದವರು ಕೈಬಿಟ್ಟು ಬೇರೆ ಕಡೆಗಳಿಗೆ ಒದಗಿಸುವುದಕ್ಕೆ ವಿಚಾರ ಮಾಡುತ್ತಿದ್ದಾರೆಂದು ಹೇಳಿದರು. ಅದು ನಿಜವಿದ್ದರೆ ನಮ್ಮ ಜಿಲ್ಲೆಯ ರೈತರಿಗೆ ಬಹಳ ವಿಷಾದವಾಗುತ್ತದೆ. ಹಿಂದೆ ಶ್ರೀಮಾನ್ ಚನ್ನಬಸಪ್ಪನವರು ಲೋಕೋಪಯೋಗಿ ಮಂತ್ರಿಗಳಾಗಿದ್ದಾಗ ಕೂಡ ಹೇಮಾವತಿ ಮತ್ತು ಯಗಚಿ ನದಿಗಳ ನೀರನ್ನು ತುಮಕೂರು ಜಿಲ್ಲೆಗೆ ಒದಗಿಸುವ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿದ್ದರು. ಆದರೆ ಅದು ಕಾರ್ಯಗತವಾಗಲಿಲ್ಲ ಈಗಲಾದರು ಕೂಡ ನಮ್ಮ ಸರ್ಕಾರದವರು ಈ ನದಿಗಳಿಂದ ನಮ್ಮ ಜಿಲ್ಲೆಗೆ ನೀರನ್ನು ಒದಗಿಸುವ ಬಗ್ಗೆ ಸೂಕ್ತ ಏರ್ಪಾಡು ಮಾಡಬೇಕು. ಇಲ್ಲದಿದ್ದರೆ ನಮ್ಮ ಜಿಲ್ಲೆಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಶಾಶ್ವತವಾದಂಥಾ ಒಂದು ನೀರಾವರಿ ಕಾಮಗಾರಿ ಯೋಜನಯನ್ನು ಕೈಗೊಳ್ಳುವ ಸಲುವಾಗಿ ೫೦ ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಒಂದು ಯೋಜನೆಯನ್ನು ತಯಾರು ಮಾಡಿ ಅದನ್ನು ಕೇಂದ್ರ ಸರ್ಕಾರದವರ ಮಂಜೂರಾತಿಗಾಗಿ ಶೀಘ್ರವೇ ಕಳುಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆ ರೀತಿ ಒಂದು ಯೋಜನೆಯನ್ನು ಕೈಗೊಂಡರೆ ನಮ್ಮ ಜಿಲ್ಲೆಯಲ್ಲಿ ಸುಮಾರು ೪–೫ ಲಕ್ಷ ಎಕರೆ ಪ್ರದೇಶ ನೀರಾವರಿಗೆ ಒಳಪಡುತ್ತದೆ. ಈ ಬಗ್ಗೆ ತುಮಕೂರು ಜಿಲ್ಲೆಯಲ್ಲಿ ಮತ್ತು ಚಿತ್ರದುರ್ಗದ ಕೆಲವು ಭಾಗಗಳಲ್ಲಿ ಸರ್ವೆ ಕೆಲಸ ನಡೆಯುತ್ತಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ತುಮಕೂರು ಜಿಲ್ಲೆಯಲ್ಲಿರುವ ಚಿಕ್ಕನಾಯಕನಹಳ್ಳಿ, ಪಾವಗಡ, ಕೊರಟಗೆರೆ, ಸಿರಾ ಮುಂತಾದ ತಾಲ್ಲೂಕುಗಳು ಯಾವಾಗಲೂ ಕ್ಷಾಮದಿಂದ ಕೂಡಿರುತ್ತವೆ. ಆದ್ದರಿಂದ ಈ ಪ್ರದೇಶಗಳಿಗೆ ಭದ್ರಾ ನದಿಯಿಂದ ನೀರನು ಒದಗಿಸುವುದಕ್ಕೆ ಒಂದು ಅಂದಾಜನ್ನು ತಯಾರು ಮಾಡುವುದಕ್ಕೆ ಸರ್ಕಾರದವರು ಆದೇಶ ಕೊಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ವಿ. ಕೌಜಲಗಿ (ಕಂದಾಯ ಇಲಾಖೆಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ ಕಳೆದ ಮೂರು ದಿವಸಗಳಿಂದ ಈ ದೇಶದಲ್ಲಿ ಮೇಲಿಂದ ಮೇಲೆ ಬರುತ್ತಿರುವ ಅಭಾವ ಪರಿಸ್ಥಿತಿಯ ಬಗ್ಗೆ ಮತ್ತು ಈ ವರ್ಷ ಉಂಟಾಗಿದ್ದ ಅಭಾವ ಪರಿಸ್ಥಿತಿಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿ, ಬಹಳ ಉಪಯುಕ್ತವಾದಂಥ ಸಲಹೆಗಳನ್ನು ನೀಡಿದ್ದಾರೆ. ತಮ್ಮ ಅನುಭವದ ನಾಲ್ಕು ಮಾತುಗಳನ್ನು ಹೇಳಿದ್ದಾರೆ. ಅವರೆಲ್ಲರಿಗೂ ನಾನು ಉಪಕೃತನಾಗಿದ್ದೇನೆ. ಮೊದಲನೆಯದಾಗಿ ಈ ಕ್ಷಾಮ ನಮ್ಮ ದೇಶದಲ್ಲಿ ಬಹಳ ವರ್ಷಗಳಿಂದ ಬರುತ್ತಿದೆ. ಈ ಮಾತು ಒಪ್ಪಿಗೆಯಾಗಿದೆ. ನಮ್ಮ ರಾಜ್ಯದ ಬಗ್ಗೆ ವಿಚಾರ ಮಾಡುವುದಾದರೆ ಸರ್ವೇ ಸಾಧಾರಣವಾಗಿ ೭೦–೭೨ ತಾಲ್ಲೂಕುಗಳಲ್ಲಿ ಅಭಾವಪರಿಸ್ಥಿತಿ ಇದೆ. ಆದರೆ ಈ ಅಭಾವ ಪರಿಸ್ಥಿತಿಯನ್ನು ಕಾಯಂ ಆಗಿ ಹೋಗಲಾಡಿಸುವುದಕ್ಕೆ ಸರ್ಕಾರ ಸೂಕ್ತವಾದಂಥ ಯಾವ ಕಾರ್ಯಕ್ರಮವನ್ನೂ ಸಹ ಕೈಗೊಂಡಿಲ್ಲ. ಅಭಾವ ಪರಿಸ್ಥಿತಿ ಬಂದಾಗ ಕೇಂದ್ರ ಸರ್ಕಾರದವರಿಂದ ಹಣ

ಪಡೆದು ತಾಂತ್ರಿಕವಾಗಿ ಖರ್ಚು ಮಾಡಿರುತ್ತಾರೆ, ಇದರಿಂದ ಯಾವ ಪ್ರಯೋಜನವೂ ಸಹ ಆಗುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಆದರೆ ಆ ರೀತಿ ಏನೂ ಮಾಡಿಲ್ಲ. ನಮ್ಮ ದೇಶದಲ್ಲಿ ತತ್ಕಂಥ ಅಭಾವ ಪರಿಸ್ಥಿತಿಯ ತಾಲ್ಲೂಕ್‌ಗಳು ಏನಿವೆ, ಅಲ್ಲಿ ಕಾಯಂ ಪರಿಹಾರ ಕಾರ್ಯಕ್ರಮ ಕೈಕೊಳ್ಳಬೇಕೆಂಬ ಉದ್ದೇಶದಿಂದ ಇದುವರೆಗೆ ಅನೇಕ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಅಲ್ಲದೆ ಈ ಬಗ್ಗೆ ೧೯೬೦ನೇ ಇಸವಿಯಲ್ಲಿ ಎಸ್. ವಿ. ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಷನನ್ನು ನೇಮಕ ಮಾಡಲಾಗಿತ್ತು. ಆ ಕಮಿಷನ್ನಿನವರು ಏನು ಒಂದು ರಿಪೋರ್ಟ್ ಕೊಟ್ಟಿದ್ದರು, ಆದರ ಆಧಾರದ ಮೇಲೆ ನಮ್ಮ ಸರ್ಕಾರದವರು ೨೮೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿ ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ೧೯೬೩ ನೇ ಇಸವಿಯಲ್ಲಿ ಕಳಿಸಲಾಗಿತ್ತು. ಆ ಬಗ್ಗೆ ಕೇಂದ್ರ ಸರ್ಕಾರದವರು ಇಡೀ ಪ್ರಾಂತ್ಯದ ಬಗ್ಗೆ ಯೋಜನೆಯನ್ನು ತಯಾರು ಮಾಡಿ ಕಳಿಸಿದರೆ ಅವನ್ನು ವಿಚಾರ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು, ಮತ್ತು ಆ ಬಗ್ಗೆ ಒಂದು ನಿರ್ದಿಷ್ಟವಾದ ಉತ್ತರವನ್ನು ಸಹ ಕೊಡಲಿಲ್ಲ. ಒಮ್ಮೆಗೆ ಇಷ್ಟೊಂದು ಹಣವನ್ನು ಕೊಡುವುದು ಕಷ್ಟವಾಗುತ್ತದೆಂದು ಕೇಂದ್ರ ಸರ್ಕಾರದವರು ನಂತರ ತಿಳಿಸಿದ ಮೇಲೆ ೧೯೬೮ರಲ್ಲಿ ೨೨ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿ ಕೇಂದ್ರಸರ್ಕಾರಕ್ಕೆ ಕಳಿಸಲಾಯಿತು. ಆ ಬಗ್ಗೆ ಕೇಂದ್ರಸರ್ಕಾರದವರು ಕಾಯಂ ಪರಿಹಾರ ಯೋಜನೆ ಕೈಕೊಳ್ಳಬೇಕಾದರೆ ಅನೇಕ ಕೋಟಿ ರೂಪಾಯಿಗಳು ಬೇಕಾಗುತ್ತದೆ, ಇಷ್ಟೊಂದು ಹಣವನ್ನು ಒಂದೇ ವರ್ಷದಲ್ಲಿ ಖರ್ಚು ಮಾಡುವುದಕ್ಕಾಗುವುದಿಲ್ಲ, ಅನೇಕ ವರ್ಷಗಳು ಬೇಕಾಗುತ್ತದೆ, ನಾಲ್ಕನೇ ಪಂಚ ವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಸಹ ಸೇರಿಸಿದರೆ ಇದಕ್ಕಾಗಿಯೇ ಮೀಸಲಾಗಿಟ್ಟಿರುವ ೧೦೦ ಕೋಟಿ ರೂಪಾಯಿಗಳಲ್ಲಿ ಮೈಸೂರು ರಾಜ್ಯಕ್ಕೆ ೧೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದಾರೆ.

6-00 P. M.

ತಮಗೆ ಒದಗಿಸಿರುವ ಬಡ್ಜೆಟ್ಟು ಪತ್ರಗಳೊಡನೆ ಕೆಲವು ಯೋಜನೆ ಕಾರ್ಯಕ್ರಮಗಳನ್ನು ಮಾಡಿರುವುದೂ ಇವೆ. ಇದರಲ್ಲಿ ಬರಗಾಲದಲ್ಲಿ ಶಾಶ್ವತವಾದ ಪರಿಹಾರ ಕ್ರಮಗಳು ಯಾವುವು ಮಾಡಿವೆ ಎನ್ನುವುದು ಗೊತ್ತಾಗುತ್ತದೆ. ನಾವು ಪರ್ಮನೆಂಟು ರಿಲೀಫ್ ಮೆಷರ್‌ಸ್‌ಗಳನ್ನು ಮಾಡುತ್ತಿಲ್ಲ ಎಂದು ತಿಳಿಯಬಾರದು, ಕಳೆದ ಏಳೆಂಟು ವರ್ಷಗಳಿಂದಲೂ ಮಾಡುತ್ತ ಬಂದಿದ್ದೇವೆ. ನಮ್ಮಲ್ಲಿ ಅನೇಕ ನೀರಾವರಿ ಪ್ರಾಜೆಕ್ಟ್‌ಗಳು ಎಂದರೆ, ತುಂಗಭದ್ರಾ, ಮಲಪ್ರಭಾ, ಘಟಪ್ರಭಾ ಹಾಗೂ ಇನ್ನಿತರ ಯೋಜನೆಗಳು ಆರಂಭವಾಗಿ ಇವೆಲ್ಲಾ ಒಂದೊಂದು ಸ್ಟೇಜಿನಲ್ಲಿವೆ ಆದರೂ ಇವರ ಉಪಯೋಗ ಅಲ್ಲಲ್ಲಿ ಜನರಿಗೆ ಆಗುತ್ತಿದೆ. ಇದರ ಹೊರತಾಗಿ ರಾಜ್ಯ ಸರ್ಕಾರದವರು ಪ್ರತಿ ವರ್ಷವೂ ಮೇಜರು ಇರಿಗೇಷನ್ ಕೆಲಸಗಳಿಗಾಗಿ ಹೆಚ್ಚು ರೊಕ್ಕವನ್ನು ಬಡ್ಜೆಟ್ಟಿನಲ್ಲಿಟ್ಟು ಖರ್ಚು ಮಾಡುತ್ತಿದ್ದೇವೆ. ೧೯೬೭-೬೮ ಹಾಗೂ ೧೯೬೮-೬೯ರಲ್ಲಿ ಸುಮಾರು ಮೂರು ಕೋಟಿಯವರೆಗೆ ಖರ್ಚು ಮಾಡಿದ್ದೇವೆ. ಈ ವರ್ಷ ೨.೨೨ ಕೋಟಿ ಖರ್ಚು ಅಷ್ಟೇ ಅಲ್ಲ ನಮಗೆ ಈ ಸಾಲಿನಲ್ಲಿ ಸೆಂಟ್ರಲ್ ಗೌವರ್ನಮೆಂಟ್‌ನವರು ಹತ್ತು ಕೊಟಿಯಷ್ಟು ನೆರವು ಕೊಡುತ್ತೇವೆಂದು ಹೇಳಿದ್ದಾರೆ. ಇವರು ಕೊಡುವ ಸಹಾಯದಿಂದ ದೇಶದಲ್ಲಿ ಬಹುಭಾಗ ಇರುವ ಇರಿಗೇಷನ್ ಟ್ಯಾಂಕುಗಳನ್ನು ದುರಸ್ತಿಗೊಳಿಸುವುದು, ಡೀಸಿಲ್ಟಿಂಗು ಮಾಡುವುದು, ಇತ್ಯಾದಿ ಕೆಲಸಗಳಿಗೆ ಹೆಚ್ಚು ಅವಕಾಶ ಮಾಡಿದ್ದೇವೆ. ಇದ್ದ ಕೆರೆಗಳನ್ನು ದುರಸ್ತಿ ಮಾಡಿ ಮತ್ತು ಕೆಲವು ಕಡೆಗಳಲ್ಲಿ ಹೊಸ ಕೆರೆಗಳನ್ನು ಕಟ್ಟಲು ಕಳೆದ ನಾಲ್ಕೈದು ವರ್ಷಗಳಿಂದಲೂ ಖರ್ಚು ಮಾಡುತ್ತಿದ್ದೇವೆ. ಇನ್ನು ಇರಿಗೇಷನ್ ವೆಲ್ಸ್ ಮಾಡಲು ಸಹಾಯ ಮಾಡುತ್ತಿದ್ದೇವೆ, ಇರುವ ಬಾವಿಯನ್ನು ಇನ್ನೂ ಆಳ ಮಾಡಲು ಯಂತ್ರಗಳನ್ನುಪಯೋಗಿಸಿ ಇದರಿಂದ ಹೆಚ್ಚು ನೀರು ಪಡೆಯಲು ಅನುಕೂಲವಾಗುವಂತೆ ಜನರಿಗೆ ಸಹಾಯ ಮಾಡಲಾಗುತ್ತಿದೆ. ಇಂತಹ ಒಂದು ಯೋಜನೆ ತೆಗೆದುಕೊಂಡಾಗ ಜನರಿಂದ ಕೂಡ ಇದರ ಬಗ್ಗೆ ಹೆಚ್ಚು ಸಹಾಯ ಬೇಕೆಂದು ಬೇಡಿಕೆ ಬಂದುದರಿಂದ ಆರೇಳು ವರ್ಷಗಳಿಂದಲೂ ಸುಮಾರು ಎಪ್ಪತ್ತು ಸಾವಿರ ಇರಿಗೇಷನ್ ವೆಲ್ಸ್‌ಗಳು ಆಗಿವೆ. ಇದಕ್ಕಾಗಿ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ಕೆಲವು ಸದಸ್ಯರು ಲ್ಯಾಂಡು ಡೆವಲಪ್‌ಮೆಂಟ್ ಬ್ಯಾಂಕು ಬಗ್ಗೆ ಇಲ್ಲಿ ಹೇಳಿದರು.

ಲ್ಯಾಂಡು ಡೆವಲಪ್‌ಮೆಂಟು ಬ್ಯಾಂಕು ಮೂಲಕ ಸಾಲವನ್ನು ರೈತರಿಗೆ ಕೊಟ್ಟಿದ್ದಾರೆ. ಇದರಿಂದ ಅವರು ಚೆನ್ನಾಗಿ ಬೆಳೆ ಮಾಡಬೇಕಿತ್ತು. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಬರಗಾಲಕ್ಕೆ ತುತ್ತಾಗಿ ಸರಿಯಾಗಿ ಪೀಕು ಬಾರದೆ ಹೋಗಿರುವುದರಿಂದ ಇವರು ಕೊಡುವ ಕಂತುಗಳನ್ನೂ ಸರಿಯಾಗಿ ವಾಪಸು ಕೊಡಲು ಆಗಲಿಲ್ಲ. ಇದರಿಂದಾಗಿ ಇವರಿಗೆ ಮತ್ತೆ ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಸಿಗುತ್ತಿಲ್ಲ. ಇಂತಹ ಕಡೆಗಳಲ್ಲಿ ಎಲ್ಲಿ ಬೆಳೆ ಬಂದಿಲ್ಲವೋ ಇಂತಹ ಜನರ ಅನುಕೂಲಕ್ಕೆ ತಕ್ಕ ಯಾವುದಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದೇನೋ ಸರಿ, ಆದರೆ ಇದರ ಬಗ್ಗೆ ರಿಸರ್ವ್

(ಶ್ರೀ ಹೆಚ್. ವಿ. ಕೌಜಲಗಿ)

ಬ್ಯಾಂಕಿನವರು ಸಹಾಯ ಮಾಡಬೇಕೆಂದು ಈಗಾಗಲೇ ಪತ್ರ ವ್ಯವಹಾರ ನಡೆಯುತ್ತಿದೆ. ಅವರು ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಸರಕಾರ ಇದರ ಬಗ್ಗೆ ಏನಾದರೂ ಒಂದು ರೀತಿಯ ಕಾರ್ಯಕ್ರಮ ಮಾಡಿ ಜನಕ್ಕೆ ಅನುಕೂಲ ಮಾಡಬೇಕು ಎಂದು ಯೋಚನೆ ಮಾಡಿ ವ್ಯವಹಾರ ನಡೆಸುತ್ತಿದ್ದೇವೆ. ನಮ್ಮಲ್ಲಿ ಹೆಚ್ಚು ನೀರಾವರಿ ಬಾವಿಗಳನ್ನು ತೆರೆಯಲು ಸಾಧ್ಯವಿದೆ ಮತ್ತು ಇದರಿಂದ ಹೆಚ್ಚು ಅನುಕೂಲ ಪಡೆಯಬೇಕು ಎನ್ನುವುದು ಸರಕಾರದ ಉದ್ದೇಶ, ಈ ದೃಷ್ಟಿಯಿಂದ ಸಹಾಯ ಮಾಡಬೇಕು ಎಂದು ಸಾಲ ಕೊಡುತ್ತಿದ್ದೇವೆ. ಕೆಲವು ಕಡೆ ಬಾವಿಗಳಲ್ಲಿ ಬೇಸಿಗೆಯಲ್ಲಿ ನೀರು ಬತ್ತಿಹೋಗುತ್ತದೆ. ಇದನ್ನು ಆದಷ್ಟು ಆಳವಾಗಿ ಮಾಡಿದರೆ ಇನ್ನೂ ನೀರು ಪಡೆಯಬಹುದು ಎಂದು ಇದಕ್ಕಾಗಿ ಹೆಚ್ಚು ಹಣ ಸಾಲ ಕೊಟ್ಟು ಜನರಿಗೆ ಸೌಕರ್ಯ ಮಾಡುತ್ತಿದ್ದೇವೆ ಮತ್ತು ಫ್ಯಾಮಿನ್ ರಿಲೀಫ್ ಫಂಡಿನಿಂದ ಹೆಚ್ಚು ಸಾಲ ಕೊಟ್ಟು ಬಾವಿಗಳನ್ನು ಆಳ ಮಾಡಲು ಅನುಕೂಲ ಮಾಡಿಕೊಡಲಾಗಿದೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ಬಗ್ಗೆ ಪರ್ಮನೆಂಟಾಗಿ ಯಾವ ಕೆಲಸಗಳನ್ನೂ ಮಾಡಿಲ್ಲ ಎಂದು ಇಲ್ಲಿ ಹೇಳಿದರು. ಇದನ್ನು ಮಾಡಿದರೆ ಅಲ್ಲಲ್ಲಿ ಜನ ಇದರ ಅನುಕೂಲ ಪಡೆಯಲು ಅವಕಾಶ ಇದೆ. ಈಚೆಗೆ ಇದರ ಕೆಲಸಗಳನ್ನು ಹೆಚ್ಚು ಮಾಡಲು ಶುರು ಮಾಡಿದ್ದಾರೆ. ಕಳೆದ ಒಂದು ವರ್ಷದಲ್ಲಿ ಇದಕ್ಕಾಗಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾಡಲು ಎರೆ ಭೂಮಿ ಇದ್ದರೆ ಸರಿಯಾಗುವುದಿಲ್ಲ ಎಂದು ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಎಲ್ಲಿ ಕೆಂಪು ಭೂಮಿ ಇರುತ್ತದೆಯೋ ಅಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸ ಮಾಡಲು ಸರಿಯಾಗುತ್ತದೆ. ಇದರ ಕೆಲಸಗಳನ್ನು ಮಾಡುವ ಖಾತೆಯೇ ಬೇರೆ ಇದಕ್ಕೆ ತಕ್ಕ ಸ್ಪೆಸಿಫಿಕೇಷನ್ ಇರುತ್ತೆ. ಇದರಂತೆ ಇಲ್ಲಿನ ಅಧಿಕಾರಿಗಳು ಸರಿಯಾದ ಸೂಚನೆ ಕೊಟ್ಟು ಕೆಲಸಗಳನ್ನು ಮಾಡಿಸುತ್ತಾರೆ. ಈಗ ಇದು ದೊಡ್ಡ ಪ್ರಮಾಣದಲ್ಲಿ ಆಗುತ್ತಿದೆ. ಇದರ ಬಗ್ಗೆ ಸರಿಯಾದ ಸೂಪರ್‌ವಿಷನ್ ಆಗುತ್ತಿದೆ ಎಂದು ಕೆಲವು ಸದಸ್ಯರು ಹೇಳಿದ್ದಾರೆ. ಸಂಬಂಧಪಟ್ಟ ಖಾತೆಯವರಿಗೆ ಇದರ ಬಗ್ಗೆ ಹೇಳಿ ಸಾಕಷ್ಟು ಶೀಘ್ರವಾಗಿ ಮತ್ತು ಚೆನ್ನಾಗಿ ಎಲ್ಲ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತೆ ಅವರಿಗೆ ಹೇಳುತ್ತೇನೆ.

ಇನ್ನು ಕಮ್ಯೂನಿಟಿ ವೆಲ್ಸ್ ಬಗ್ಗೆ ಜನರ ಲಕ್ಷ್ಯ ಈಚೆಗೆ ಹೆಚ್ಚು ಹೋಗುತ್ತಿದೆ, ಇದು ಎಲ್ಲಾ ಕಡೆಯಲ್ಲೂ ಆಗುತ್ತಿದೆ. ಕೆಲವು ಕಡೆಗಳಲ್ಲಿ ಇದು ಯಶಸ್ವಿಯಾಗಿದೆ. ತುಮಕೂರು ಹಾಗೂ ಚಿತ್ರದುರ್ಗ ಜಿಲ್ಲೆಯಲ್ಲಿ ನಾನು ನೋಡಿ ಬಂದಿದ್ದೇನೆ. ಇಲ್ಲಿ ಮಾಡಿರುವ ಬಾವಿಗಳು ಯಶಸ್ವಿಯಾಗಿವೆ ಮತ್ತು ಇಲ್ಲಿರುವ ಬಾವಿಗಳ ನೀರಿನಿಂದ ಸುಮಾರು ೨೦–೨೫ ಎಕರೆ ಭೂಮಿಯನ್ನು ಸಾಗು ಕೂಡ ಮಾಡುತ್ತಿದ್ದಾರೆ. ಇಂತಹ ಬಾವಿಗಳಿಗೆ ಹೆಚ್ಚು ಸಾಲ ಕೊಟ್ಟು ಪ್ರೋತ್ಸಾಹ ಕೊಡಬೇಕೆಂದು ಹೇಳಿದ್ದಾರೆ. ಕಳೆದ ಎರಡು ವರ್ಷಗಳಿಂದ ಇಂತಹ ಕಮ್ಯೂನಿಟಿ ವೆಲ್ಸ್‌ಗಳ ಮಾಗಣಿ ಬಹಳವಾಗಿ ಬಂದಿವೆ. ಕ್ಷಾಮಪರಿಹಾರ ಕಾರ್ಯಕ್ರಮಗಳಿಗಾಗಿ ಸುಮಾರು ೧೦–೧೫ ವರ್ಷಗಳವರೆಗೆ ಆಗುವ ಒಂದು ಯೋಜನೆಯನ್ನೂ ಮಾಡಿ ಅನೇಕ ಕಾರ್ಯಕ್ರಮಗಳನ್ನು ಮಾಡಬೇಕೆಂದು ಇದ್ದೇನೆ.

ಶ್ರೀ ಬಿ. ಎಲ್. ಗಂಗಾಧರ್ :—೧೫–೨೦ ವರ್ಷಗಳಿಂದ ಈ ರಾಜ್ಯದಲ್ಲಿ ಐದಾರು ಮಂತ್ರಿಮಂಡಲಗಳು ಬಂದಾದವು. ಕಳೆದ ಇಪ್ಪತ್ತು ವರ್ಷಗಳಿಂದಲೂ ನಮ್ಮ ತುಮಕೂರು ಜಿಲ್ಲೆಗೆ ಏನು ಖರ್ಚಾಗಿದೆ ಎನ್ನುವುದನ್ನು ಹೇಳುತ್ತೀರಾ?

ಶ್ರೀ ಎಚ್ ವಿ ಕೌಜಲಗಿ :—ನಮ್ಮ ರಾಜ್ಯದಲ್ಲಿ ಬರಗಾಲಕ್ಕೆ ಮುಖ್ಯವಾದ ಜಾಗಗಳು ಎಂದರೆ ತುಮಕೂರು, ಚಿತ್ರದುರ್ಗ, ಕೋಲಾರ ಹಾಗೂ ಬೆಂಗಳೂರು ಎನ್ನುವುದು ಎಲ್ಲರಿಗೂ ಮೊದಲಿನಿಂದಲೂ ಗೊತ್ತಿದೆ. ಇದಕ್ಕಾಗಿ ಹೆಚ್ಚು ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ. ತುಮಕೂರು ಜಿಲ್ಲೆಗೆ ಖರ್ಚ ಮಾಡಿಲ್ಲ ಎಂದು ತಾವು ಇಲ್ಲಿ ಹೇಳುವುದು ಸರಿಯಲ್ಲ. ಸಾಕಷ್ಟು ಖರ್ಚು ಮಾಡಲಾಗಿದೆ.

ಶ್ರೀ ಬಿ. ಪಿ. ಗಂಗಾಧರ್ : ದುಡ್ಡೇನೋ ಖರ್ಚಾಗಿದೆ. ಆದರೆ ಕೆಲಸಗಳು ಏನಾಗಿವೆ ?

ಶ್ರೀ ಹೆಚ್. ವಿ. ಕೌಜಲಗಿ : ಪರ್ಮನೆಂಟು ರಿಲೀಫ್ ಮೇಷರ್ಸ್ ಬಗ್ಗೆ ಈಗಾಗಲೆ ಕೆಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ, ಎಲ್ಲೆಲ್ಲಿ ನೀರಾವರಿ ಯೋಜನೆಗಳನ್ನು ಮಾಡಲು ಸಾಧ್ಯ ಇದೆ ಅವುಗಳನ್ನು ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಅಲ್ಲಲ್ಲಿ ಕೆರೆಗಳನ್ನು ದುರಸ್ತಿ ಮಾಡುವ ಕೆಲಸಕಾರ್ಯಗಳು ನಡೆಯುತ್ತಿವೆ ಮತ್ತು ದುಡ್ಡು ಕೂಡ ಇದಕ್ಕಾಗಿ ಖರ್ಚಾಗುತ್ತಿದೆ. ನಾಲ್ಕೈದು ವರ್ಷಗಳಿಂದ ಇರಿಗೇಷನ್ ವೆಲ್ಸ್ ಹಾಗೂ ಕೆರೆಗಳ ದುರಸ್ತಿ ಕೆಲಸಗಳು ನಡೆಯುತ್ತಿವೆ, ಇದರ ಜೊತೆಗೆ ಕೆಲವು ಕಡೆ ಟೆಂಪರರಿ

ಮೆಷರ್ಸ್‌ಗಳನ್ನೂ ತೆಗೆದುಕೊಳ್ಳುವ ಅವಶ್ಯಕತೆ ಇದೆ. ಇದರ ಬರಗಾಲದ ಕಾಲದಲ್ಲಿ ಜನರಿಗೆ ಉದ್ಯೋಗ-ಗಳನ್ನು ದೊರಕಿಸಿ ಕೊಡಬೇಕು. ಬರಗಾಲದಲ್ಲಿ ಜನಕ್ಕೆ ಹೆಚ್ಚು ತ್ರಾಸು ಕೊಡಬಾರದು ಕೆಲವು ಕಡೆ ಕೆಲಸಗಳನ್ನು ಆರಂಭ ಮಾಡಿ ಜನರಿಗೆ ಉದ್ಯೋಗಗಳನ್ನು ಕೊಡುವ ಬಗ್ಗೆ ವಿಚಾರ ಮಾಡಬೇಕಾಗಿದೆ. ಇದರ ಬಗ್ಗೆ ಜನರಲ್ಲಿ ಭಿನ್ನಾಭಿಪ್ರಾಯ ಕೂಡ ಉಂಟಾಗಿದೆ. ಕೆಲವು ಸದಸ್ಯರು ಎಲ್ಲ ಖರ್ಚನ್ನೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮೂಲಕ ಮಾಡಬೇಕು ಎಂದು ಹೇಳುತ್ತಾರೆ, ಉದಾಹರಣೆಯಾಗಿ ಇನ್ನೊಬ್ಬರು ಕುಣಿಗಲ್ ತಾಲ್ಲೂಕು ಬಗ್ಗೆ ಇಲ್ಲಿ ಹೇಳಿದರು. ಇಲ್ಲಿಗೆ ೫೦ ಸಾವಿರ ರೂಪಾಯಿಗಳು ಎಂದು ಹಂಚುವಾಗ ಇಲ್ಲಿರುವ ಎಲ್ಲ ಪಂಚಾಯಿತಿಗಳಿಗೂ ಒಂದೊಂದು ಸಾವಿರ ರೂಪಾಯಿಗಳನ್ನು ಖರ್ಚುಮಾಡುವುದು ಎಂದು ಅವರ ಮೂಲಕ ಹಣ ಹಂಚಿಕೆ ಮಾಡಿದರೆ ಅನುಕೂಲವಾಗುತ್ತದೆ ಎಂದು ಸಲಹೆ ಕೊಟ್ಟಿದ್ದಾರೆ ನಿನ್ನೆ ಚನ್ನೇಗೌಡರು ಕೂಡ ಇದರ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ.

ಕೆಲವು ಸದಸ್ಯರು ಹೇಳಿದರು ಹತ್ತು ಸಾವಿರ ಒಂದು ಸಾವಿರ ಹೀಗೆ ಅಲ್ಲಲ್ಲಿ ದುಡ್ಡನ್ನು ಖರ್ಚು ಮಾಡಿದರೆ ಅದರಿಂದ ದೇಶಕ್ಕೆ ಶಾಶ್ವತವಾದ ಕೆಲಸಗಳನ್ನು ಮಾಡಿದಂತಾಗುವುದಿಲ್ಲವೆಂದು ಎಂದು ಅದಕ್ಕಾಗಿ ಸರ್ಕಾರದವರು ಇಂಥ ವ್ಯಾಲೀಲಿ ದೊಡ್ಡ ದೊಡ್ಡ ಕೆಲಸಗಳನ್ನು ತೆಗೆದುಕೊಂಡರೆ ಶಾಶ್ವತವಾದ ಕೆಲಸ ಗಳನ್ನು ಮಾಡಿಸಿದಂತಾಗುತ್ತದೆಂದು ಶ್ರೀಮಾನ್ ದೊಡ್ಡ ಬೋರೇಗೌಡರು ಹೇಳಿದರು. ಇನ್ನು ಶ್ರೀ ಪಂಚಗಾವಿಯವರು ಕೂಲಿಗಾರರು ಮನೆಯನ್ನು ಬಿಟ್ಟು ಕೂಲಿ ಕೆಲಸಕ್ಕಾಗಿ ೩-೪ ಮೈಲಿಗಳ ದೂರ ಏಕೆ ಹೋಗಬೇಕೆಂದೂ ಅವರವರ ಮನೆಯ ಬಾಗಿಲಲ್ಲೇ ಅವರಿಗೆ ಕೆಲಸಗಳನ್ನು ಒದಗಿಸುವುದಕ್ಕಾಗುವುದಿಲ್ಲವೇ ಎಂದು ಕೇಳಿದ್ದಾರೆ ಜನರನ್ನು ಸಂರಕ್ಷಣೆ ಮಾಡುವುದು ಸರ್ಕಾರದವರ ಕರ್ತವ್ಯ. ಇದು ಹಿಂದಿನ ಕಾಲ ಅಲ್ಲ. ಈಗ ಬದಲಾಯಿಸಿದೆ ಸಾಧ್ಯವಾದ ಮಟ್ಟಿಗೂ ಕೂಲಿ ಕೆಲಸಗಳನ್ನು ಅವರ ಮನೆ ಬಾಗಿಲಲ್ಲೇ ಕೊಡಬೇಕು. ಆದರೆ ಅದು ಎಲ್ಲಿ ಸಾಧ್ಯವಿಲ್ಲವೋ ಅಲ್ಲಿ ಮಾತ್ರ ಅವರು ಹಾಗೆ ದೂರ ಹೋಗಲೇಬೇಕು. ನಾವು ದುಡ್ಡನ್ನು ಖರ್ಚುಮಾಡುವುದು ಮುಖ್ಯವಲ್ಲ ಆದರೆ ನಮಗೆ ಕೆಲಸಗಳು ಆಗಬೇಕು ಅನ್ನುವಂಥ ಮಾತನ್ನು ನಾನು ಒಪ್ಪುತ್ತೇನೆ. ಸಣ್ಣ ಪುಟ್ಟ ಕೆಲಸಗಳನ್ನು ಕೈಗೊಂಡರೆ ಜನರಿಗೆ ಬಹುಕಾಲ ಕೂಲಿ ಕೆಲಸ ಗಳನ್ನು ಕೊಡುವುದಕ್ಕಾಗುವುದಿಲ್ಲ, ಮಧ್ಯೆ ಅವರು ಕೂಲಿ ಸಿಕ್ಕದೆ ತೊಂದರೆಪಡತಕ್ಕ ಸಂದರ್ಭಗಳೂ ಬರುತ್ತವೆ, ಆದ್ದರಿಂದ ದೊಡ್ಡ ದೊಡ್ಡ ಕಾಮಗಾರಿಗಳನ್ನು ಕೈಗೊಂಡರೆ ಜನರಿಗೆ ಕೆಲವು ಕಾಲ ಕೂಲಿ ನಿರಾಂತಂಕವಾಗಿ ಸಿಗುತ್ತೆ. ಆದ್ದರಿಂದ ನಾನು ಎಲ್ಲೆಲ್ಲಿ ಪ್ರವಾಸ ಹೋಗುತ್ತಿದ್ದೆನೋ ಅಲ್ಲೆಲ್ಲಾ ಆದಷ್ಟೂ ದೊಡ್ಡ ಕೆಲಸಗಳನ್ನೇ ಕೈಗೊಳ್ಳಬೇಕೆಂದು ಹೇಳಿದ್ದೇನೆ ಎಲ್ಲೆಲ್ಲಿ ಕೆರೆಗಳನ್ನು ದುರಸ್ತಿ ಮಾಡುವುದಕ್ಕೆ ಅವಕಾಶವಿದೆ ಅಲ್ಲೆಲ್ಲಾ ಆ ಕೆಲಸಗಳನ್ನೇ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ.

ಇನ್ನು ಕೆಲವು ಕಂಟ್ರಾಕ್ಟರುಗಳ ಒತ್ತಡಕ್ಕೆ ಮತ್ತು ಹಿಂದೆ ಕೆಲವು ರಾಜಕೀಯ ಕಾರಣಗಳಿಗಾಗಿ ೧೯೬೫-೧೯೬೬ರಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕ್ಷಾಮಪರಿಹಾರದ ನೆಪದಲ್ಲಿ ಖರ್ಚುಮಾಡಿದರೆಂದು ಕೆಲವರು ಆಪಾದನೆಗಳನ್ನು ಮಾಡಿದ್ದಾರೆ, ಆ ಹಣವನ್ನು ನಾವು ಚುನಾವಣೆಗೆ ಎಂದೂ ಬಳಸಿಲ್ಲ. ನಾವು ಜನರಿಗೆ ಸೇವೆ ಮಾಡಿದ್ದರಿಂದ ಅವರು ನಮ್ಮನ್ನು ಮತ್ತೆ ಆರಿಸಿ ಕಳುಹಿಸಿದ್ದಾರೆ, ಹಿಂದೆ ರೆವಿನ್ಯೂ ಇಲಾಖೆಯ ಮೂಲಕ ಈ ಕೆಲಸಗಳನ್ನು ಮಾಡಿಸಬೇಕಾಗಿತ್ತು. ಆದರೆ ಈಗ ಅದನ್ನು ಬದಲಾಯಿಸಿ ಪಿಡಬ್ಲ್ಯೂಡಿ ಮೂಲಕವೂ ಮತ್ತು ಟಿಡಿ ಬೋರ್ಡಿನ ಮೂಲಕವೂ ಮಾಡಿಸಬೇಕೆಂದು ತೀರ್ಮಾನಮಾಡಿದ್ದೇವೆ, ಎಲ್ಲೆಲ್ಲಿ ಏನೇನು ಕೆಲಸಗಳನ್ನು ನಡಸಬೇಕೆಂಬ ಬಗೆ ಆಯಾಯ ಸ್ಥಳೀಯ ಶಾಸನಸಭಾ ಸದಸ್ಯ ರನ್ನು ಕೇಳಿ ಅವರ ಸಲಹೆಗಳನ್ನೂ ಸಹಾ ಪಡೆಯಲಾಗುತ್ತಿದೆ,

ಇನ್ನು ಕೆಲವು ಸದಸ್ಯರು ಕೆಲವು ನೌಕರರು ಮತ್ತು ಜಿಲ್ಲಾಧಿಕಾರಿಗಳು ಈ ಕೆಲಸ ಕಾರ್ಯಗಳನ್ನು ಮಾಡುವುದರಲ್ಲಿ ಕಳಕಳಿಯನ್ನು ತೋರಿಸುತ್ತಿಲ್ಲ ಅಲ್ಲೆಲ್ಲಾ ಬಹಳ ರೆಡ್ಟೇಪಿಜಂ ಇದೆ ಎಂದು ಹೇಳಿದರು. ಅದನ್ನು ನಾನು ಪೂರಾ ಅಸತ್ಯ ಎಂದು ಹೇಳಲಾರೆ. ಕೆಲವು ಕಡೆ ಅದಿದೆ. ಕೆಲವು ಮಾನ್ಯ ಸದಸ್ಯರಿಗೆ ಅಂಥ ವಿಚಾರಗಳು ಗೊತ್ತಿದ್ದರೆ ನನಗೆ ಅವರು ದಯವಿಟ್ಟು ತಿಳಿಸಲಿ, ನಾನು ಯಾರ ದಾಕ್ಷಿಣ್ಯವೂ ಇಲ್ಲದೆ ಅವರ ಬಗ್ಗೆ ಕಾರ್ಯಕ್ರಮ ಕೈಗೊಳ್ಳುತ್ತೇನೆ,

ಇನ್ನು ಮೂರನೆಯದಾಗಿ ಒಂದು ಮಾತು ಎಂದರೆ—ಸದಸ್ಯರು ಕೆಲವರ ಬಗ್ಗೆ ದೂರುಗಳನ್ನು ಕೊಟ್ಟರೆ ಅವುಗಳನ್ನು ತಕ್ಷಣ ಚೌಗಾಸಿ ಮಾಡುತ್ತಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಆ ರೀತಿಯೇನೂ ಮಾಡುತ್ತಿಲ್ಲ. ಅನೇಕ ಕಡೆ ಅವರವರ ರೆಸ್‌ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಿ ಅವರ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. ಇನ್ನು ಕೆಲವು ಕೇಸುಗಳನ್ನು ವಿಜಿಲೆನ್ಸ್ ಕಮಿಷನ್ನಿಗೆ ವಿಚಾರಣೆಗೆ ವಹಿಸಲಾಗಿದೆ. ಇನ್ನು ಕೆಲವು ಸಂದರ್ಭಗಳಲ್ಲಿ ಯಾರ ದಯದಾಕ್ಷಿಣ್ಯವು ಇಲ್ಲದೆ ಆಕ್ಷನ್ ತೆಗೆದುಕೊಂಡಿದ್ದೇವೆ. ಈ ದಿವಸ ಮಿಡಲ್ ಮ್ಯಾನನ್ನು ತೆಗೆಯಬೇಕೆಂದೇ ಈ ಕೆಲಸಗಳನ್ನು ಟಿಡಿಬಿ ಮತ್ತು ಪಿಡಬ್ಲ್ಯೂಡಿ ಗೆ ವಹಿಸಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪನವರು : ದುಡ್ಡೇನೋ ಖರ್ಚಾಗುತ್ತದೆ. ಆದರೆ ಅದು ಯಾರಿಗೆ ಮುಟ್ಟಬೇಕೋ ಅವರಿಗೆ ಮಾತ್ರ ಮುಟ್ಟುತ್ತಿಲ್ಲ. ನಾನು ಹಿಂದೆ ತಮಗೆ ತಿಳಿಸಿದ್ದು ಒಂದು ಸಂದರ್ಭದಲ್ಲಿ ೨—೩ ಲಕ್ಷ ರೂಪಾಯಿಗಳ ದುರ್ವಿನಿಯೋಗವಾಗಿದೆ. ತಾವೇನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಚ್. ವಿ. ಕೌಜಲಗಿ : ಅದನ್ನೇ ನಾನೂ ಹೇಳುತ್ತಿದ್ದೇನೆ ಅದೆಲ್ಲವನ್ನೂ ವಿಚಾರಣೆ ಮಾಡಿಸುತ್ತಿದ್ದೇವೆ. ಇನ್ನು ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ನನ್ನನ್ನು ಅಂಜುಬುರುಕ ಎಂದು ಹೇಳೇ ಬಿಟ್ಟಿದ್ದಾರೆ. ಒಂದು ವೇಳೆ ನಾನು ಬಾಳ್ವೆ ಮಾಡೋದರಲ್ಲಿ ಇದ್ದರೂ ಇರಬಹುದು. ಆದರೆ ಸರ್ಕಾರಿ ಕೆಲಸಗಳಲ್ಲಿ ಹಾಗೇನೂ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ ; ಅರಕಲಗೂಡು ಮತ್ತು ಹೆಗ್ಗಡದೇವನಕೋಟೆ ವಿಚಾರಗಳನ್ನು ತಾವು ಏನು ಮಾಡಿದಿರಿ ?

SRI H. V. KOUJALGI : That is now before the Vigilance Commission. Some Officers are taken to task ವಿಚಾರಣೆ ಮಾಡಿಸುತ್ತಿದ್ದೇವೆ, ನಡೀತಾ ಇದೆ. ಅದನ್ನು ವಿಜಿಲೆನ್ಸ್ ಕಮಿಷನ್ನಿನವರು ವಿಚಾರಣೆ ನಡೆಸುತ್ತಿದ್ದಾರೆ.

ಇನ್ನು ಕುಡಿಯುವ ನೀರಿನ ಅಭಾವದ ಬಗ್ಗೆ ಕೆಲವು ಸದಸ್ಯರು ಹೇಳಿದ್ದಾರೆ. ಈ ವರ್ಷವೇ ಇದು ಹೊಸದಾಗಿ ಬಂದ ಕಷ್ಟ ಎಂದು ಹೇಳಿದರೆ ತಪ್ಪಾಗಲಾರದು. ಏತಕ್ಕೆಂದರೆ ಇದುವರೆಗೆ ನಮ್ಮ ರಾಜ್ಯದಲ್ಲಿ ಸಾಕಷ್ಟು ಮಳೆ ಆಗುತ್ತಿತ್ತು. ಯಾವಾಗಲೂ ನಮ್ಮ ರಾಜ್ಯದಲ್ಲಿ ಆಹಾರ ಅಭಾವ ಆಗುತ್ತಿತ್ತೆ ವಿನಃ ಕುಡಿಯುವ ನೀರಿನ ಅಭಾವ ಆಗುತ್ತಿರಲಿಲ್ಲ. ಕಳೆದ ೫—೬ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಸಾಕಷ್ಟು ಮಳೆ ಆಗದೆ ಇದ್ದುದರಿಂದ ಆಹಾರದ ಬೆಳೆ ಸಾಕಷ್ಟು ಆಗುತ್ತಿರಲಿಲ್ಲ. ಪ್ರತಿವರ್ಷವೂ ಹೀಗಾಗುತ್ತಾ ಇರುವುದರಿಂದ ನಾವು ತಜ್ಞರ ಅಭಿಪ್ರಾಯವನ್ನು ಪಡೆದಿದ್ದೇವೆ. ನಮ್ಮಲ್ಲಿ ಏನಾಗಿದೆ ಎಂದರೆ ಅಂಡರ್‌ಗ್ರೌಂಡ್ ವಾಟರ್ ಸಪ್ಲೈ ಏನು ಇದೆ ಅದು ಬಹಳ ಕೆಳಗೆ ಇದೆ. ಹೀಗಿರುವಾಗ ನಮಗೆ ಇರುವ ಬಾವಿಗಳಲ್ಲಿ ನೀರು ಬಹಳ ಕಡಿಮೆಯಾಗುತ್ತದೆ. ಆದುದರಿಂದ ಅದನ್ನು ಹೆಚ್ಚು ಹೆಚ್ಚು ಆಳವಾಗಿ ತೆಗೆಯಬೇಕು ಎಂದು ಹೇಳುತ್ತೇನೆ. ಈ ರೀತಿ ಆಗಿರುವುದು ನಿಜ. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರದ ಸೂಚನೆ ಇತ್ತು. ಈ ನೀರನ್ನು ಸಂಗ್ರಹ ಮಾಡುವುದಕ್ಕೆ ಅಂಡರ್ ಗ್ರೌಂಡ್ ವಾಟರ್ ಸಪ್ಲೈ ಏನು ಇದೆಯೋ ಅದು ಬೇಕಾಗಿದೆ. ಇದನ್ನು ಹೆಚ್ಚು ಹೆಚ್ಚಾಗಿ ಮಾಡಬೇಕಾಗಿದೆ. ಇದನ್ನು ಕೇಂದ್ರ ಸರ್ಕಾರದವರು ಸ್ಯಾಂಕ್ಷನ್ ಮಾಡಬೇಕು. ಸಾಧ್ಯವಾದಷ್ಟು ಮಟ್ಟಿಗೆ ಕೇಂದ್ರ ಸರ್ಕಾರದವರೂ ಕೂಡ ಈ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂನ್ನು ಕ್ಷಾಮ ಪೀಡಿತ ಪ್ರದೇಶಗಳಿಗೆ ಕೊಡಬೇಕು ಎನ್ನುವ ಬಗ್ಗೆ ಗಮನ ಇಡುತ್ತಾರೆ. ಯಾರು ೧೦ ಪರ್ಸೆಂಟು ಕಾಂಟ್ರಿಬ್ಯೂಷನ್ ಕೊಡುತ್ತಾರೋ ಅವರ ಬಗ್ಗೆಯೂ ಮತ್ತು ಕ್ಷಾಮ ಪೀಡಿತ ಪ್ರದೇಶಗಳಿಗೂ ಈ ಕೆಲಸವನ್ನು ತ್ವರಿತವಾಗಿ ಮಾಡಿಸಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ಮಾಡಿದ್ದೇವೆ ದೊಡ್ಡ ದೊಡ್ಡ ಊರುಗಳಿಗೆ ೧೦—೧೨ ಸಾವಿರ ಜನಸಂಖ್ಯೆ ಇರತಕ್ಕಂಥ ಊರುಗಳಿಗೆ ಕಾಂಟ್ರಿಬ್ಯೂಷನ್ ತೆಗೆದುಕೊಂಡು ಈ ಕೆಲಸವನ್ನು ಮಾಡಬಹುದು. ಸಣ್ಣ ಸಣ್ಣ ಗ್ರಾಮಗಳಿಗೆ ಅಂದರೆ ೪—೫ ಸಾವಿರ ಜನಸಂಖ್ಯೆ ಇರತಕ್ಕಂಥ ಗ್ರಾಮಗಳಿಗೆ ಪ್ರತ್ಯೇಕವಾಗಿ ಬಾವಿ ತೆಗೆಸದೇ ಇದ್ದರೆ ಆಗುವುದಿಲ್ಲ. ಬೋರ್‌ವೆಲ್ ಮಾಡಿದರೂ ಆಗುವುದಿಲ್ಲ. ಅಲ್ಲಿ ಎರಡನೇ ಬಾವಿ ತೆಗೆಯಬೇಕು ಎಂದರೆ ತಾಲ್ಲೂಕು ಬೋರ್ಡ್‌ನವರು ಅವಕಾಶ ಕೊಡುವುದಿಲ್ಲ ಅಂತಹ ಊರುಗಳಿಗೆ ಕುಡಿಯುವ ನೀರಿನ ಬಾವಿಯನ್ನು ಪ್ರತ್ಯೇಕವಾಗಿ ಮಾಡಿಸಬೇಕಾಗಿದೆ. ಅದಕ್ಕೋಸ್ಕರ ಇದರಲ್ಲಿ ಹಣವನ್ನು ಒದಗಿಸಲಾಗಿದೆ.

ಈಗ ನಾವು ೨೭ ಸಾವಿರ ಬಾವಿಗಳನ್ನು ತೆಗೆಸಿದ್ದೇವೆ. ಈಗ ಕೊರತೆ ಇರುವುದು ೨೭೦೦ ಹಳ್ಳಿಗಳಲ್ಲಿ ಮಾತ್ರ. ಅದರಲ್ಲಿ ೧೭೦೦ ಹಳ್ಳಿಗಳಲ್ಲಿ ಕೆಲಸ ನಡೆದಿದೆ. ಇನ್ನು ಒಂದು ಸಾವಿರ ಹಳ್ಳಿಗಳನ್ನು ಬಿಟ್ಟರೆ ನಮ್ಮ ಪ್ರಾಂತದಲ್ಲಿ ಯಾವತ್ತೂ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗೆ ಕಷ್ಟ ಇರುವುದಿಲ್ಲ. ದುರ್ದೈವದಿಂದ ಮಳೆ ಕಡಿಮೆ ಆಗುವುದರಿಂದ ವರ್ಷಕ್ಕೆ ೨—೩ ತಿಂಗಳು ಈ ಕುಡಿಯುವ ನೀರಿನ ಅಭಾವ ಆಗುತ್ತದೆ. ಇದಕ್ಕೆ ತಜ್ಞರ ಸಲಹೆ, ಅವರ ಅಭಿಪ್ರಾಯ ಪಡೆದುಕೊಂಡು ನಾವೇನಾದರೂ ಮಾಡಬೇಕಾಗುತ್ತದೆ.

ಇನ್ನು ಎರಡನೆಯದಾಗಿ ಶ್ರೀಯುತರುಗಳಾದ ಅರಕೇರಿಯವರು, ಗಂಗಣ್ಣನವರು, ಗಂಗಾಧರ್‌ರವರು ಈ ಅಭಾವಪೀಡಿತ ಪ್ರದೇಶಗಳಿಗೆ ಪಕ್ಷಪಾತ ಮಾಡಿದ್ದಾರೆ ಎಂದು ಹೇಳಿದರು

ಶ್ರೀ ಅಜೀಜ್ ಸೇಟ್ :—ಸ್ವಾಮಿ, ಮಾಸ್ತಿ ಅನ್ನುವ ಊರಿಗೆ ತಾಲ್ಲೂಕು ಬೋರ್ಡ್‌ನವರು ಎಂದು ಬಾವಿ ಸ್ಯಾಂಕ್ಷನ್ ಮಾಡಿದರು. ಆ ಕಂಟ್ರಾಕ್ಟರು ಬಿಲ್ ಮಾಡಿ ದುಡ್ಡನ್ನು ತೆಗೆದುಕೊಂಡರು. ಆದರೆ ಬಾವಿ ಕೆಲಸ ಆಗಲಿಲ್ಲ. ಇದರಿಂದ ಬಡವರಿಗೆ ಬಾವಿಯೂ ಇಲ್ಲ, ನೀರೂ ಇಲ್ಲ. ದುಡ್ಡು ಕಂಟ್ರಾಕ್ಟರಿಗೆ ಹೋಯಿತು. ಬೆಲೆಗೆ ರುಜು ಸಹ ಪಡೆದರು. ಅಂತಹ ಬಾವಿಗಳು ಇವೆ. ಅದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎಚ್. ವಿ. ಕೌಜಲಗಿ : ನಮ್ಮ ಪ್ರಾಂತ್ಯದಲ್ಲಿ ಸುಮಾರು ೭೦—೭೨ ತಾಲ್ಲೂಕುಗಳು ಬ್ಯಾಕ್‌ವರ್ಡ್ ಏರಿಯಾ ಎಂದು ಕೇಂದ್ರ ಸರ್ಕಾರ ಪರಿಗಣಿಸಿ ಅದಕ್ಕೆ ತೀವ್ರವಾದ ಪರಿಹಾರ ಕೊಡಬೇಕೆಂದು ಯೋಚನೆ ಮಾಡಿದ್ದಾರೆ, ಆದರಲ್ಲಿ ಯಾವುದಾದರೂ ಎರಡು ಜಿಲ್ಲೆಗಳು ಆರಿಸಿ ಎಂದು ತಿಳಿಸಿದರು. ಆದರೆ ೨ ಜಿಲ್ಲೆಗಳನ್ನೇ ತೆಗೆದುಕೊಂಡರೆ ಇಡೀ ಪ್ರಾಂತದಲ್ಲಿರುವ ಜನರಿಗೆ ಅಸಮಾಧಾನವಾಗಿ ನಮಗೆ ಒಂದು ಅಪವಾದ ಬರುತ್ತದೆ ಎಂದು ತಿಳಿದು ೫೨ ತಾಲ್ಲೂಕುಗಳನ್ನು ಶಿಫಾರಸು ಮಾಡಿದೆವು. ಆದರೆ ಅವರು ಅದಕ್ಕೆ ಒಪ್ಪಲಿಲ್ಲ ಅವರು ಬಿಜಾಪುರ ಜಿಲ್ಲೆಯಲ್ಲಿ ೫ ತಾಲ್ಲೂಕು. ಚಿತ್ರದುರ್ಗ ಜಿಲ್ಲೆಯಲ್ಲಿ ೭ ತಾಲ್ಲೂಕುಗಳನ್ನು ಆರಿಸಿದರು. ಯಾವ ಆಧಾರದ ಮೇಲೆ ಈ ತಾಲ್ಲೂಕುಗಳನ್ನು ಆಯ್ಕೆ ಮಾಡಲಾಯಿತು ಎಂಬುದು ನಮಗೆ ಗೊತ್ತಿಲ್ಲ.

ಶ್ರೀ ಎಸ್. ಎಸ್. ಅರಕೇರಿ :—ಬಿಜಾಪುರದ ೫ ತಾಲ್ಲೂಕುಗಳನ್ನು ಏನು ಹೇಳಿದ್ದೀರಿ ಅದನ್ನು ತಾವು ಶಿಫಾರಸು ಮಾಡಲಿಲ್ಲವೆ?

ಶ್ರೀ ಎಚ್. ವಿ. ಕೌಜಲಗಿ :—ಈ ತಾಲ್ಲೂಕುಗಳನ್ನು ಆಯ್ಕೆ ಮಾಡಿದ್ದು ಕೇಂದ್ರವೇ ವಿನಃ ರಾಜ್ಯ ಸರ್ಕಾರದ ಶಿಫಾರಸ್ಸು ಏನೂ ಇಲ್ಲ ಅವರು ಎರಡು ಜಿಲ್ಲೆಗಳನ್ನೇ ಆರಿಸಿ ಎಂದು ತಿಳಿಸಿದರೂ ಕೂಡ ನಾವು ಅದಕ್ಕೆ ಒಪ್ಪಲಿಲ್ಲ. ಇಡೀ ಕರೆಸ್ಪಾಂಡೆನ್ಸ್‌ನ್ನೇ ತೋರಿಸಿ ಎಂದರೆ ನಾವು ತೋರಿಸುತ್ತೇವೆ, ಇಂತಿಂಥ ತಾಲ್ಲೂಕುಗಳನ್ನು ತೆಗೆದುಕೊಳ್ಳಬೇಕೆಂದು ೫೨ ತಾಲ್ಲೂಕುಗಳನ್ನು ಸೂಚಿಸಿದೆವು. ಆದುದರಿಂದ ೨ ಜಿಲ್ಲೆಗಳನ್ನೇ ಆರಿಸಿದ್ದರೆ ಈ ಸ್ಕೇರಿಟಿ ಪರಿಹಾರ ಕೊಡತಕ್ಕಂಥದ್ದು. ನಮ್ಮ ಕೈಯಲ್ಲೇ ಇದ್ದಿದ್ದರೆ ಇಂದಿಗಿ ಮತ್ತು ಸಿಂಧಗಿ ಇವು ಸ್ಕೇರ್ಸಿಟಿ ಅಫೆಕ್ಟೆಡ್ ಏರಿಯಾಸ್ ಆದಾಗ ನನ್ನ ತಾಲ್ಲೂಕನ್ನೇ ಹಾಕಿಸಿಕೊಳ್ಳುತ್ತಿದ್ದೆ.

ಇನ್ನು ಅನೇಕ ಸದಸ್ಯರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ನಾನು ನನ ಮಾತನ್ನು ಮುಗಿಸುವ ಪೂರ್ವಭಾವಿಯಾಗಿ ಒಂದೆರಡು ವಿಷಯಗಳನ್ನು ಈ ಸಭೆಯ ಮುಂದೆ ತಿಳಿಸಬಯಸುತ್ತೇನೆ. ಅದು ಏನೆಂದರೆ ಈಗ ಮಳೆ ಆಯಿತು, ಈಗ ಬರಗಾಲ ಕಾಮಗಾರಿ ಕೆಲಸ ಏನು ಇದೆಯೋ ಈ ಕೆಲಸವನ್ನು ಏಕಾಏಕಿ ನಿಲ್ಲಿಸುತ್ತಾರೆ ಎನ್ನುವ ಭಯವನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ :—ಅನೇಕ ಕಡೆ ಸರ್ಕ್ಯುಲರ್ ಕಳುಹಿಸಿದ್ದಾರೆ.

ಶ್ರೀ ಎಚ್. ವಿ. ಕೌಜಲಗಿ ;—ಯಾವ ಸರ್ಕ್ಯುಲರ್ ಕಳುಹಿಸಿದರೂ ಅದನ್ನು ತಮ್ಮ ಮುಂದೆ ಮುಚ್ಚುವುದಕ್ಕೆ ಬರುವುದಿಲ್ಲ. ಸೆಂಟ್ರಲ್ ಗೌರ್ನಮೆಂಟ್ ಇದರ ಬಗ್ಗೆ ಸಾಕಷ್ಟು ಸಹಾಯ ಮಾಡುವುದಕ್ಕೆ ತಯಾರಿದ್ದಾರೆ. ನಮ್ಮ ಮುಖ್ಯ ಮಂತ್ರಿಗಳೂ ಇದಕ್ಕೆ ೫ ಕೋಟಿ ರೂಪಾಯಿ ಬೇಕು ಎಂದು ಪತ್ರ ಬರೆದ ತಕ್ಷಣ ತಾತ್ಕಾಲಿಕವಾಗಿ ೨ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಹೋದ ವರ್ಷ ೧೯೬೮–೬೯ನೇ ಸಾಲಿನಲ್ಲಿ ನಾವು ೧೦ ಕೋಟಿ ರೂಪಾಯಿ ಬೇಕು ಎಂದು ಬರೆದಿದ್ದಕ್ಕೆ ೨ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ನಾವು ಕೃತಜ್ಞತೆಯನ್ನು ಸಲ್ಲಿಸಬೇಕಾಗಿದೆ. ಹಾಗೆ ಕೇಂದ್ರವು ದುಡ್ಡು ಕೊಡಲಿಕ್ಕೆ ಮತ್ತು ಮಂಜೂರು ಮಾಡಲಿಕ್ಕೆ ಸಿದ್ಧವಾಗಿರುವಾಗ ನಮಗೆ ಅಗತ್ಯ ಇರುವ ತನಕ ಕಾಮಗಾರಿ ಕೆಲಸವನ್ನು ಮುಂದುವರಿಸುತ್ತೇವೆ ಎಂದು ತಮಗೆ ಈ ಸಮಯದಲ್ಲಿ ಆಶ್ವಾಸನೆ ಕೊಡುತ್ತೇವೆ. ಸಾಧ್ಯವಾದಷ್ಟೂ ಕಂಟ್ರಾಕ್ಟರುಗಳಿಗೆ ಕೊಡುವುದಿಲ್ಲ. ಕಂಟ್ರಾಕ್ಟರಿಗೆ ಕೊಡಬಾರದು ಎನ್ನುವ ನಿಯಮವಿದೆ. ಹಾಗೆ ಕೊಡುವುದಿಲ್ಲ.

6-30 P.M.

ದುಡ್ಡು ಒದಗಿಸುವ ವಿಚಾರದಲ್ಲಿ ನನ್ನ ಜವಾಬ್ದಾರಿ ಇದೆ, ಅದನ್ನು ನಾನು ನೋಡಿಕೊಳ್ಳುತ್ತೇನೆ. ಕೆಲಸ ಸುಸ್ತಾಗಬಾರದು, ರೆಡ್ ಟೇಪಿಸಂ ಹೋಗಬೇಕು ಎನ್ನುವ ಬಗ್ಗೆ ನಾವು ಕೆಳಗಿನ, ಅಧಿಕಾರಿಗಳಿಗೆ

(ಶ್ರೀ ಎಚ್. ವಿ. ಕೌಜಲಗಿ)

ಕೊಟ್ಟಿರುವ ಪವರ್ಸ ಬಹಳ ಕಡಿಮೆ. ಅಸಿಸ್ಟೆಂಟ್ ಕಮಿಷನರಿಗೆ ೫ ಸಾವಿರ ರೂಪಾಯಿ, ಡೆಪ್ಯೂಟಿ ಕಮಿಷನರಿಗೆ ೧೦ ಸಾವಿರ ರೂಪಾಯಿವರೆಗೂ ಕೆಲಸಗಳನ್ನು ಮಂಜೂರು ಮಾಡುವ ಅಧಿಕಾರವಿದೆ. ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಅಲ್ಲಿಂದಲ್ಲೇ ಕೆಲಸ ಮಂಜೂರುಮಾಡಿ ತೀವ್ರ ಕೆಲಸ ತೆಗೆದು ಕೊಳ್ಳಲಿಕ್ಕೆ ಅಧಿಕಾರ ಕೊಡಬೇಕು ಎನ್ನುವ ಬಗ್ಗೆ ರೂಲ್ಸ್ ತೀವ್ರ ದುರಸ್ತುಮಾಡಿ ಕಳುಹಿಸಿಕೊಡುತ್ತೇವೆ.

ಲ್ಯಾಂಡ್ ರೆವಿನ್ಯೂ ವಗೈರೆ ವಸೂಲು ಮಾಡುವುದರಲ್ಲಿ ಕೋಯರ್ಸೀವ್ ಮೆಥೆಡ್ಸ್ ಉಪಯೋಗ ಮಾಡುತ್ತಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈ ಬಗ್ಗೆ ನಾವು ಇನ್ನೂ ಒಮ್ಮೆ ಸೂಚನೆಗಳನ್ನು ಕಳುಹಿಸಿಕೊಡುತ್ತೇವೆ.

ದುಡ್ಡು ಹಂಚುವುದರಲ್ಲಿ ಪಕ್ಷಪಾತವಿದೆ ಎಂದು ಹೇಳಿದ್ದಾರೆ. ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ದುಡ್ಡು ಬೇಕು ಎಂದು ಶಿಫಾರಸು ಮಾಡಿದ್ದರು ಆ ಪ್ರಕಾರ ದುಡ್ಡು ಕೊಟ್ಟಿದ್ದೇವೆ. ಪಕ್ಷಪಾತ ಮಾಡುವಂಥ ಪ್ರಶ್ನೆ ಇಲ್ಲ. ಅಲ್ಲಿಯ ಪರಿಸ್ಥಿತಿ, ಅಲ್ಲಿಯ ಕೆಲಸ, ಅಲ್ಲಿಯ ಗ್ರ್ಯಾವಿಟಿ ಆಫ್ ದಿ ಸಿಚುಯೇಷನ್ ನೋಡಿ ದುಡ್ಡು ಮಂಜೂರು ಮಾಡುತ್ತೇನೆ. ಇದರಲ್ಲಿ ಯಾವ ತರಹ ಪಕ್ಷಪಾತ ಮಾಡುವುದಿಲ್ಲ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಕೆಲವು ಕಡೆ ಎಂದರೆ ಗುಲ್ಬರ್ಗ, ಬಿದರೆ, ತೀರ ಪ್ರದೇಶಗಳಲ್ಲಿ ಮಳೆ ಹೆಚ್ಚಾಗಿದೆ.. ಇದರಲ್ಲಿ ಎರಡು ಪ್ರಶ್ನೆ ಬರುತ್ತದೆ. ಪ್ರವಾಹ ಅಕಸ್ಮಾತ್ತಾಗಿ ಬರುತ್ತದೆ. ಇದಕ್ಕೆ ಪ್ರಿವೆಂಟಿವ್ ಮೆಷರ್ಸ್ ತೆಗೆದುಕೊಳ್ಳ ಬೇಕಾಗುತ್ತದೆ. ಬಹಳ ಮಳೆ ಆಗಿ ಪೀಕು ನಷ್ಟವಾಗಿದೆ, ಇದ್ದ ಮನೆಗಳು ಬಿದ್ದು ಹೋಗಿವೆ. ಫ್ಲಡ್ ಪ್ರಿವೆನ್‌ಷನ್ ದೆಸೆಯಿಂದ ಕೇಂದ್ರ ಸರ್ಕಾರದವರು ಕೆಲವು ಯೋಜನೆಗಳನ್ನು ಮಾಡಬೇಕಾಗುತ್ತದೆ. ಇದು ತಜ್ಞರ ಅಭಿಪ್ರಾಯ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇಂಥ ಪರಿಸ್ಥಿತಿ ಬರುತ್ತದೆ.

ಬಿದರ ಜಿಲ್ಲೆಯಲ್ಲಿ ಹೆಚ್ಚು ರಿಲೀಫ್ ಕೊಡುತ್ತೇವೆ. ಅವರಿಗೆ ಸಾಲ ಕೊಡುತ್ತೇವೆ.

ಅನೇಕ ಸದಸ್ಯರು ಎಷ್ಟೋ ಸಲಹೆಗಳನ್ನು ಮಾಡಿದ್ದಾರೆ, ಏನೇನು ಕೆಲಸಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಅದರ ಕಡೆಗೆ ಲಕ್ಷ್ಯ ಕೊಟ್ಟು ಅವರು ಹೇಳಿದಂಥ ಯಾವತ್ತು ಸಲಹೆಗಳನ್ನು ಸಾಧ್ಯವಿದ್ದಷ್ಟು ಹೆಚ್ಚು ಹೆಚ್ಚು ಮಾಡುತ್ತೇವೆಂದು ಹೇಳಿ ತಮಗೆ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಶ್ರೀ ವಿ. ಎಲ್. ಶಿವಪ್ಪ :—ನಮ್ಮದು ಬಯಲು ಸೀಮೆ. ಖುಷ್ಕಿ ಕಂದಾಯ ವಜಾ ಮಾಡಿದ್ದಾರೆ ಖುಷ್ಕಿ ಕಂದಾಯ ವಜಾ ಮಾಡಿದ ಕಾಲದಲ್ಲಿ ಬಾಗಾಯತು ಕಂದಾಯ ವಜಾ ಮಾಡಲಿಲ್ಲ. ಮಳೆ ಬರಲಿಲ್ಲ ವೆಂದು ಖುಷ್ಕಿ ಕಂದಾಯವನ್ನು ವಜಾ ಮಾಡಿರುವಾಗ ಬಾಗಾಯತು ಕಂದಾಯವನ್ನೂ ಏಕೆ ವಜಾ ಮಾಡ ಲಿಲ್ಲ ಎನ್ನುವುದಕ್ಕೆ ಉತ್ತರ ಕೊಡಬೇಕು ಎಂದು ತಮ್ಮ ಮೂಲಕ ಕೇಳುತ್ತೇನೆ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ:—ಮೈಸೂರು ಜಿಲ್ಲೆಯಲ್ಲಿ ಲ್ಯಾಂಡ್ ರೆಕ್ಲಮೇಷನ್ ಕೆಲಸದ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಯೋಜನೆ ಮಾಡಿದ್ದಾರೆಯೇ? ಅದರಲ್ಲಿ ಗುಂಡ್ಲುಪೇಟೆ, ಚಾಮರಾಜನಗರ ಮತ್ತು ಹುಣಸೂರು ತಾಲ್ಲೂಕುಗಳು ಬರುತ್ತದೆಯೇ? ಮುಖ್ಯವಾಗಿ ಗುಂಡ್ಲುಪೇಟೆ ತಾಲ್ಲೂಕು ಅದರಲ್ಲಿ ಬರುತ್ತದೆಯೇ ಇಲ್ಲವೇ ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎ. ಆರ್. ಪಂಚಗಾವಿ; —ಮುಂಬೈ ಕರ್ನಾಟಕದಲ್ಲಿ ಕೆಲಸಗಾರರಿಗೆ ಕೊಡುವ ವೇಜಸ್ ಬಹಳ ಕಡಿಮೆ. ಬಹಳ ಹಿಂದೆ ಗೊತ್ತು ಮಾಡಿರುವ ರೇಟನ್ನು ಕೊಡುತ್ತಿದ್ದಾರೆ. ಅದನ್ನು ಜಾಸ್ತಿ ಮಾಡುವ ಬಗ್ಗೆ ಹೇಳುತ್ತಾರೆಯೇ?

ಶ್ರೀ ಎ. ಮುನಿಯಪ್ಪ:—ಕ್ಷಾಮ ಬಂದಾಗ ಕಂದಾಯ ಮತ್ತು ಸಾಲದ ಕಂತುಗಳನ್ನು ವಸೂಲು ಮಾಡುವುದನ್ನು ಮುಂದುವರಿಸಿದ್ದರು. ಈ ಕ್ಷಾಮ ಪರಿಸ್ಥಿತಿ ಹೋಗಿದೆ ಎಂದು ಆ ಸಾಲಿನ ಕಂದಾಯವನ್ನೂ ಸಾಲದ ಕಂತುಗಳನ್ನು ಬಡ್ಡಿ, ಸುಸ್ತಿ ಬಡ್ಡಿ, ಚಕ್ರಬಡ್ಡಿ ಎಲ್ಲ ಸೇರಿಸಿ ಅಸಲಿಗಿಂತ ಹೆಚ್ಚಾಗಿ ವಸೂಲು ಮಾಡಿದ್ದಾರೆ ಇದಕ್ಕೆ ಪರಿಹಾರವೇನು?

ಶ್ರೀ ಕೆ. ಪ್ರಭಾಕರ: - ಮಳೆಗೆ ಸಂಬಂಧವಿಲ್ಲದೆ ಇದ್ದರೂ ಕೂಡ ಬೆಂಗಳೂರು ನಗರದಿಂದ ಬರತಕ್ಕ ಕೊಚೆ ನೀರನ್ನು ಬೇಸಾಯಕ್ಕೆ ಉಪಯೋಗಿಸಿಕೊಳ್ಳತಕ್ಕ ಯೋಜನೆ ಮಾಡುವುದರಿಂದ ಬೆಂಗಳೂರು ಉತ್ತರ ಮತ್ತು ದಕ್ಷಿಣ ತಾಲ್ಲೂಕು, ಹೊಸಕೋಟೆ ಮತ್ತು ಆನೇಕಲ್ ತಾಲ್ಲೂಕಿನ ಭಾಗಗಳಲ್ಲಿ ಹೆಚ್ಚಿನ ಬೇಸಾಯಕ್ಕೆ ಅನುಕೂಲವಾಗುತ್ತದೆ. ಇಂಥ ಒಂದು ಯೋಜನೆಯನ್ನು ಹಿಂದೆ ಸರ್ಕಾರ ಮಾಡಿದೆ. ಇದನ್ನು ಜಾರಿಗೆ ತರುವುದರಿಂದ ಬರಗಾಲ ನಿವಾರಣೆಗೆ ತುಂಬ ಸಹಾಯವಾಗುತ್ತದೆ.

ಚಾಮರಾಜ ವಾಟರ್ ವರ್ಕ್ಸ್‌ಗೆ ನೀರು ಒದಗಿಸುತ್ತಿರುವ ದೊಡ್ಡಬಳ್ಳಾಪುರ, ನೆಲಮಂಗಲ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಇರಿಗೇಷನ್‌ಗೆ ತೆಗದುಕೊಳ್ಳುವುದಕ್ಕೆ ಮರಡಿಹಳ್ಳಿ ಹತ್ತಿರ ಆಗಬೇಕಾದ ಒಂದು ಕೆಲಸ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಿಂದ ಕಾರ್ಯಗತವಾಗದೆ ಇವೆ. ಇದನ್ನು ಬೇಗ ಮಾಡಿಸಬೇಕು. ಇವೆರಡಕ್ಕೂ ಸೂಕ್ತ ಉತ್ತರ ಕೊಡಬೇಕು.

ಶ್ರೀ ಬಿ. ಎಂ. ಇದಿನಬ್ಬ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಂಪ್ ಸೆಟ್‌ಗಳನ್ನು ಇಡುವುದನ್ನು ನಿಲ್ಲಿಸಬೇಕೆಂಬ ಕಾರಣದಿಂದ ಎಷ್ಟೋ ರೈತರು ಬೆಳೆ ಬೆಳೆಸುವುದಕ್ಕೆ ತುಂಬ ಅನಾನುಕೂಲವಾಗಿ ಕಷ್ಟಪಡತಕ್ಕ ಪರಿಸ್ಥಿತಿ ಇದೆ. ಇದನ್ನು ಬಂಟವಾಳದ ಸದಸ್ಯರೂ ಹೇಳಿದ್ದಾರೆ ನೇತ್ರಾವತಿ ನದಿಯ ಎರಡೂ ದಂಡೆಗಳಲ್ಲಿ ಕೃಷಿ ಮಾಡತಕ್ಕ ಜನಗಳಿಗೆ ವಿಶೇಷ ಮಳೆ ಬಂದು ಅವರು ಇಟ್ಟಿದ್ದ ಬೆಳೆಯೆಲ್ಲ ಕೊಚ್ಚಿ ಹೋಗಿ ನಷ್ಟವಾಗಿದೆ ಆ ರೈತರಿಗೆ ಕಂದಾಯ ಮಾಫಿಮಾಡಿ ಏನಾದರೂ ಪರಿಹಾರವನ್ನು ಕೊಡುತ್ತಾರೆಯೇ ?

SRI G. CHANDRAKANTH:—Th: Hor. Mioist r stated that crops have totally failed in Bidar District i all the five t luks due to excess rains. But the Gov rnment has done little by sanctioning only a few lakhs of rupees to the sufferers. In addition, I appeal to the Government to see that land revenue remission is also given, and I request the Hon. Minister for Revenue to decla e it now alone.

SRI B. P. GANGADHAR:—Sir, I made a specific allegation in my speech with respect to a blue-print so far as my district is concerned. The Hon. Minister did not touch that point at all in his reply. Where is a blue-print with respect to the famine affected areas, but so far as Tumkur district is concerned they have not prepared it. I request that the officers should be directed to prepare it immediately and we should be informed when we meet next.

SRI B. B. SAYANAK:—In my speech I referred to the construction of Bellary Na'a. I request the Hon. Minister to reply to my point also.

ಶ್ರೀ ಭೋಳರಘುರಾಮಶೆಟ್ಟಿ:—ಈ ಪರಿಹಾರ ಕ್ರಮದಲ್ಲಿ ಸಾಯಿಲ್, ಕನ್‌ಸರ್ವೇಷನ್ ಕೂಡ ಸೇರಿದೆ. ಈ ಕೆಲಸ ದಕ್ಷಿಣ ಜಿಲ್ಲೆಯಲ್ಲಿ ಅಗತ್ಯವಾಗಿ ಆಗಬೇಕು. ಈ ವರ್ಷ ಒಂದೂವರೆ ಲಕ್ಷ ರೂಪಾಯಿ ಇದಕ್ಕಾಗಿ ದೇಶದಲ್ಲಿ ಖರ್ಚಾಗಿದ್ದರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೆಲಸ ಮಾಡದಿರಲು ಕಾರಣವೇನು?

ಶ್ರೀ ಬಿ. ಭಾಸ್ಕರಶೆಟ್ಟಿ:—ಮೂರನೆ ಯೋಜನೆಯಲ್ಲಿ ಫ್ಲಡ್ ಕಂಟ್ರೋಲ್‌ಗೆ ಕೇಂದ್ರ ಸರಕಾರ ದೇಶದಲ್ಲಿ ೫೬ ಕೋಟಿ ರೂಪಾಯಿ ಖರ್ಚುಮಾಡಿದೆ. ನಮ್ಮ ಪ್ರಾಂತ್ಯದಲ್ಲಿ ನೆರೆ ಹಾವಳಿ ಹೆಚ್ಚಾಗಿದ್ದರೂ ನಮ್ಮ ಸರಕಾರ ಒಂದು ಕಾಸೂ ಕೂಡ ಆ ಹಣವನ್ನು ಕ್ಲೈಂ ಮಾಡಿಲ್ಲ. ನಾಲ್ಕನೆ ಯೋಜನೆಯಲ್ಲಿ ೨೫ ಕೋಟಿ ಇದಕ್ಕೆ ಒದಗಿಸಿದೆ. ಅದರಲ್ಲಿ ನಮಗೆ ಎಷ್ಟು ಕ್ಲೈಂ ಮಾಡಲಾಗಿದೆ, ಎಷ್ಟು ಬರುವುದು, ಖರ್ಚು ಮಾಡುವುದೆಷ್ಟು ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ನೆರೆ ಬಂದು ಗದ್ದೆಗಳಿಗೆ ಮತ್ತು ಮನೆಗಳಿಗೆ ತೊಂದರೆಯಾಗಿದೆ, ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದ್ದರೂ ಸರಕಾರ ಏಕೆ ಒಂದು ಕಾಸೂ ಕೂಡ ಮೂರನೆಯ ಯೋಜನೆಯಲ್ಲಿ ಪಡೆದಿಲ್ಲ. ಕಾರಣವೇನು?

ಶ್ರೀಮತಿ ಲೀಲಾವತಿ ರೈ:—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಹಿಡುವಳಿದಾರರು ಎರೋಷನನಿಂದ ವ್ಯವಸಾಯ ಮಾಡಲು ತೊಂದರೆಯಾಗಿದೆ. ಅದನ್ನು ತಪ್ಪಿಸಲು ವ್ಯವಸ್ಥೆಮಾಡಬೇಕು ಮತ್ತು ಇದಿನಬ್ಬರವರು ಹೇಳಿದಂತೆ ಲಿಫ್ಟ್ ಇರಿಗೇಷನ್ನಿಗೆ ಅವಕಾಶಮಾಡಿ ನೇತ್ರಾವತಿ ನೀರನ್ನು ಉಪಯೋಗಿಸಲು ಅವಕಾಶ ಮಾಡಿಕೊಡಬೇಕು.

ಶ್ರೀ ಚಿಕ್ಕೇಗೌಡ:—ನಮ್ಮ ತಾಲ್ಲೂಕಿನಲ್ಲಿ ಡಿವಿಜನಲ್ ಕಮೀಶರು ಮತ್ತು ರೆವೆನ್ಯೂ ಮಂತ್ರಿಗಳು ನೋಡಿರುವಂತೆ ಅನೇಕ ಅಡಿಕೆ ಮತ್ತು ತೆಂಗಿನಮರಗಳು ಹೋಗಿವೆ. ಕೆರೆಗಳಲ್ಲಿ ನೀರಿಲ್ಲ. ಕುಡಿಯುವ ನೀರಿನ ಕೊರತೆ ಇದೆ. ತಾಲ್ಲೂಕು ಬೋರ್ಡಿನಿಂದ ಹಣ ಕೊಟ್ಟರೂ ಬಾವಿ ತೆಗೆಸಿಲ್ಲ. ತುಮಕೂರು ಜಿಲ್ಲೆಯನ್ನು ಅಭಾವಕ್ಕೆ ಗುರಿಯಾಗಿದೆ ಎಂದು ಪರಿಗಣಿಸಬೇಕು. ಬಾವಿಗಳನ್ನು ತೆಗೆಸಬೇಕು ಎಂದು ಹೇಳುವಾಗ ೫ ಸಾವಿರ ಕೊಟ್ಟರೆ ಬಾವಿ ಕೆಲಸ ಪೂರ್ತಿಯಾಗುವುದಿಲ್ಲ. ಆದುದರಿಂದ ಎಸ್ಟಿಮೇಟ್ ಪ್ರಕಾರ ಹಣ ಕೊಡಬೇಕು.

ಶ್ರೀ ಎಸ್. ವಿ. ಅಗ್ನಿಹೋತ್ರಿ:—ರಸ್ತೆ, ಕೆರೆ, ಬಾವಿ ಮುಂತಾದ ಕೆಲಸಗಳನ್ನು ದೊಡ್ಡ ಕಂಟ್ರಾಕ್ಟರು ಗಳಿಗೆ ವಹಿಸದೆ ಆಯಾ ಪ್ರದೇಶಗಳಲ್ಲಿರುವ ರೈತರಿಗೆ ವಹಿಸಬೇಕು, ನರಗುಂದ ಮತ್ತು ನವಿಲಗುಂದ ಈ ಭಾಗಗಳಲ್ಲಿ ಬರಗಾಲ ಹೆಚ್ಚಾಗಿದೆ. ರೈತರಿಗೆ ೨೦೦ ರೂಪಾಯಿನಂತೆ ಕೊಡುತ್ತಿದ್ದುದನ್ನು ತಾಸಿಲ್ದಾರರು ೭೫ ರೂಪಾಯಿಗೆ ಇಳಿಸಿದ್ದಾರೆ. ಅದನ್ನು ಬದಲಾಯಿಸಿ ಅಧಿಕಾರಿಗಳಿಗೆ ೨೦೦ ರೂಪಾಯಿ ಗಳನ್ನು ಹಿಂದಿನಂತೆ ಕೊಡಬೇಕೆಂದು ಆದೇಶ ಕೊಡಬೇಕು. ಅಲ್ಲಿ ಬರಗಾಲ ಹೆಚ್ಚಾಗಿದೆ.

ಶ್ರೀ ಎಚ್. ವಿ. ಕೌಜಲಗಿ:—ಅಧ್ಯಕ್ಷರೆ, ಅನೇಕ ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಿದ್ದಾರೆ. ಸಾಧ್ಯವಿರುವ ಮಟ್ಟಿಗೆ ಅವಕ್ಕೆ ಉತ್ತರ ಹೇಳುತ್ತೇನೆ. ಶಿವಪ್ಪನವರು ಬಾಗಾಯ್ತು ಫಸಲಿಗೆ ಇತರ ಫಸಲುಗಳಿಗೆ ರೆಮಿಷನ್ ಕೊಡುವಂತೆ, ಕಂದಾಯ ವಜಾಮಾಡುವಂತೆ ಫಸಲಿಗೆ ತೊಂದರೆಯಾದಾಗ ಮಾಡುತ್ತಿಲ್ಲ, ಮಾಡಬೇಕು ಎಂದು ಹೇಳಿದರು. ಹಳೆಯ ಮೈಸೂರಿನಲ್ಲಿ ತೆಂಗು ಮುಂತಾದ ಫಸಲು ಸರಿಯಾಗಿ ಆಗದಿದ್ದರೆ ಕಲ್ಮಮಟ್ಟಿಗೆ ರೆಮಿಷನ್ ಕೊಡುವದ ಪದ್ಧತಿಯಿತ್ತು. ಆದರೆ ಈಗ ಅಂಥ ರೂಲ್ ಇಲ್ಲ. ಅದಕ್ಕೆ ಅಡಚಣೆಯೇನೆಂದರೆ ಜೋಳ, ಗೋದಿ ಮುಂತಾದ ಬೆಳೆಗಳು ಎಷ್ಟಾಯಿತೆಂದು ನೋಡಲು ಅವಕಾಶವಿದೆ. ಆದರೆ ತೆಂಗು ಮುಂತಾದ ಫಸಲು ಎಷ್ಟಾಯಿತೆಂದು ತಿಳಿಯುವುದು ಕಷ್ಟ.

ಶ್ರೀಮತಿ ನಾಗರತ್ನಮ್ಮನವರು ಹೇಳಿದಂತೆ ಎಲ್ಲೂ ಕೂಡ ಆಗಿಲ್ಲ. ಆದರೂ ಸಹಿತ ಈ ಸ್ಕೀಮಿಗೆ ಸಂಬಂಧಿಸಿದ ಕೆಲಸಗಳನ್ನು ಪಕ್ಷಾತೀತವಾಗಿ ಎಷ್ಟು ಕೆಲಸ ಆಗಬೇಕೋ ಅಷ್ಟನ್ನೂ ಮಾಡಬೇಕೆಂದು ಸೂಚಿಸುತ್ತೇನೆ.

ಎಲ್ಲೆಲ್ಲಿ ಪೀಕು ಸರಿಯಾಗಿ ಬಂದಿಲ್ಲ ಅಥವಾ ಸಸ್‌ಪೆನ್‌ಷನ್, ರೆಮಿಸನ್ಸ್ ಕೊಡುವಂತಹ ಪರಿಸ್ಥಿತಿ ಇದೆ ಎಂಬುದನ್ನು ಮಾನ್ಯ ಸದಸ್ಯರಿಗೆ ಅನೇಕ ಸಲ ಹೇಳಿದ್ದೇನೆ. ರೆವಿನ್ಯೂ ಇಲಾಖೆಯಲ್ಲಿ ರೂಲ್ಸ್ ಮಾಡಿ ಕಳೆದ ೬ ವರ್ಷಗಳ ಹಿಂದಿನಿಂದ ರಿಟ್ರಾಸ್ಪೆಕ್ಟೀವ್ ಇಫೆಕ್ಟ್‌ಗೆ ಕೊಟ್ಟು ಯಾವ ಯಾವ ಭಾಗದಲ್ಲಿ ಅದು ಅಮಲು ಆಗಬೇಕೆಂಬುದನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ರೆಕಾರ್ಡ್ ಬಿಲ್ಡ್ ಅಪ್ ಮಾಡಿರಿ ಅಂತ ಹೇಳುವ ಅವಶ್ಯಕತೆ ಇಲ್ಲ, ಮಾಡಬೇಕಾದ್ದು ಅವರ ಕರ್ತವ್ಯ, ಹಾಗೆ ಮಾಡದಿದ್ದರೆ, ಬರೆದು ಕೊಟ್ಟರೆ I will take action against such officers. What you say, please put it in writing and give it to me.

(Interruption by Sri Aziz Sait)

MR. DEPUTY SPEAKER:—Hon. Member should not interrupt the Hon. Minister like that.

SRI AZIZ SAIT:—I have right to ask for information. I am not your subordinate.

MR. DEPUTY SPEAKER:–The Hon. Member may interrupt only if the Speaker permits him.

ಶ್ರೀ ಎ. ಮುನಿಯಪ್ಪ:—ಅಜೀಜ್ ಸೇಟ್‌ರವರು ಆ ರೀತಿ ಮಧ್ಯೆ ಮಧ್ಯೆ ಮಾತನಾಡುವುದು ಸರಿಯಲ್ಲ, ಸ್ಪೀಕರ್‌ರವರ ಸ್ಥಾನಕ್ಕೆ ಮರ್ಯಾದೆ ಕೊಡಬೇಕು.

(*'Sri Anjanappa and Sri Aziz sait were simultaneously talking which was not audible'*)

ಶ್ರೀ ಎಚ್. ವಿ. ಕೌಜಲಗಿ:—ಶ್ರೀಮಾನ್ ಪಂಚಗಾವಿಮಠರವರು ಹೇಳಿದ ವಿಷಯ, ಈಗ ಆ ರೂಲ್ ತೆಗೆದು ಹಾಕಿದೆ. ಹೆಣ್ಣು ಮಕ್ಕಳಿಗೆ ಗಂಡು ಮಕ್ಕಳಿಗೆ ಅಂತಿಸು ಮಿನಿಮಮ್ ಪೀಜಸ್ ಕೊಡಬೇಕೆಂದು ಮಾಡಿದೆ. ಆದ್ದರಿಂದ ಮೂರನೇ ಒಂದು ಅಂಶ ವಜಾ ಮಾಡುವ ಪ್ರಶ್ನೆಯೇ ಇಲ್ಲ.

ಕೆಲವು ಕಡೆ ಪೀನಲ್ ಇಂಟರೆಸ್ಟ್ ವಸೂಲು ಮಾಡುತ್ತಾ ಇದ್ದಾರೆ ಎಂದು ಹೇಳಿದರು. ಅದಕ್ಕೆ ಸಂಬಂಧಪಟ್ಟಂತೆ ರೂಲ್ಸ್ ಸ್ಪಷ್ಟವಾಗಿದೆ. ಎಲ್ಲಿ ಸ್ಕೇರ್ಸಿಟಿ ಅಂತ ಡಿಕ್ಲೇರ್ ಮಾಡುತ್ತೇವೆಯೋ ಅಲ್ಲಿ ಪೀನಲ್ ಇಂಟರೆಸ್ಟ್ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ತೆಗೆದುಕೊಂಡಿದ್ದರೆ ತಪ್ಪು, ಅದನ್ನು ಕೊಡಬೇಕಾಗುತ್ತದೆ. ಅಷ್ಟೇ ಅಲ್ಲ, ಇನ್‌ಸ್ಟಾಲ್‌ಮೆಂಟ್ ಪೇಮೆಂಟ್ ಸಹಿತ ಮುಂದೆ ವಸೂಲು ಮಾಡಬೇಕಾಗುತ್ತದೆ. ಆದ್ದರಿಂದ ತಪ್ಪು ಕಾರ್ಯಕ್ರಮ ತೆಗೆದುಕೊಂಡಿದ್ದರೆ ಅದನ್ನು ಸರಿಪಡಿಸುತ್ತೇವೆ ಎಂದು ಸ್ಪಷ್ಟವಾಗಿ ಈ ದಿವಸ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಇದಿನಬ್ಬರವರು ಹೇಳಿದ ವಿಷಯಕ್ಕೆ ಸಂಬಂಧಪಟ್ಟಂತೆ ಲ್ಯಾಂಡ್ ರೆವಿನ್ಯೂ ರೆಮಿಷನ್ ಕೊಡುವಂತಹ ಪರಿಸ್ಥಿತಿ ಮುಂದೆ ಬರುತ್ತದೆ, ನವೆಂಬರ್. ಡಿಸೆಂಬರ್‌ನಲ್ಲಿ ಆಣೆವಾರಿ ಮಾಡುತ್ತೇವೆ, ಆ ಕಾಲಕ್ಕೆ ೪ ಆಣೆ ಒಳಗೆ ಬರುವ ಲ್ಯಾಂಡ್ ಎಷ್ಟು ಬರುತ್ತದೆ ಎಂಬುದನ್ನು ನೋಡಿಕೊಂಡು ಮಾಡಬೇಕಾಗುತ್ತದೆ. To Whatever remi sion they are entitled under the rules, it will be given to them.

ಶ್ರೀ ಎನ್. ಹುಚ್ಚಮಾಸ್ತಿಗೌಡ:— ಕಂದಾಯ ರೆಮಿಷನ್ ಮಾಡಿರುವ ಕಡೆ ಕಂದಾಯ ವಸೂಲು ಮಾಡಿಲ್ಲ. ಕೆಲವು ಕಡೆ ಸೆಸ್ ವಸೂಲು ಮಾಡಿದ್ದಾರೆ, ಅದನ್ನು ತಾವು ಆಲೋಚನೆ ಮಾಡುತ್ತೇನೆ ಎಂದು ಹೇಳಿದ್ದೀರಿ, ಅದನ್ನು ದಯಮಾಡಿ ಅಧಿಕಾರಿಗಳಿಗೆ ತಿಳಿಸಬೇಕು.

ಶ್ರೀ ಎಚ್. ವಿ. ಕಾಜಲಗಿ:— ಎಜ್ಯುಕೇಷನಲ್ ಸೆಸ್ಸ್, ಹೆಲ್ತ್ ಸೆಸ್ಸು ಈ ಆಕ್ಟ್‌ಗಳಿಗೆ ಅವಕ್ಕೆ ರೆಮಿಷನ್ ಕೊಡಲಿಕ್ಕೆ ಅಥವಾ ಸಸ್‌ಪೆಂಡ್ ಮಾಡಲಿಕ್ಕೆ ಪ್ರೊವಿಜನ್ ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ:— ಪ್ರೊವಿಜನ್ ಇಲ್ಲದೇ ಇದ್ದರೆ ತಿದ್ದುಪಡಿ ಮಾಡಿ.

SRI H. V. KOUJALGI: If the House approves it, it is a different matter.

ಬಿದರ್ ಬಗ್ಗೆ ಟೆಂಪೊರೆರಿಯಾಗಿ ೫ ಲಕ್ಷ ರೂಪಾಯಿ ಕೊಟ್ಟಿದ್ದೇವೆ, ಜಿಲ್ಲಾಧಿಕಾರಿಗಳಿಂದ ರಿಪೋರ್ಟ್ ಅವೇಟ್ ಮಾಡುತ್ತಾ ಇದ್ದೇವೆ. ಅವರು ಎಷ್ಟು ಬೇಡುತ್ತಾರೋ ಅಷ್ಟು ಕೊಡುತ್ತೇವೆ. ಡಿವಿಜನಲ್ ಕಮೀಷನರು ಇನ್ನೂ ೨೦ ಲಕ್ಷ ರೂಪಾಯಿ ಬೇಕು ಸಾಕಾಗುವುದಿಲ್ಲ ಎಂದರೆ ಕೊಡುತ್ತೇವೆ.

ಸೌತ್ ಕೆನರಾದಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸ ಶುರು ಮಾಡಿಲ್ಲ ಎಂದು ಹೇಳಿದರು, ಸ್ಕೇರ್ಸಿಟಿ ಇರಲಿ, ಇಲ್ಲದೆ ಇರಲಿ, ಎಲ್ಲಾ ಕಡೆಯಲ್ಲೂ ಅದರ ದೆಸೆಯಿಂದ ಪರ್ಮನೆಂಟ್ ಮೆಷರ್ಸ್ ಮಾಡಬೇಕೆಂದು ಹೇಳಿ ಉದ್ದೇಶ ಇದೆ. ಆದ್ದರಿಂದ ಅಲ್ಲೂ ಸಹಿತ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಸಂಬಂಧಪಟ್ಟ ಖಾತೆಯವರಿಗೆ ಹೇಳುತ್ತೇನೆ.

(Sri H. V. Koujalgi)

ಇನ್ನು ಫ್ಲಡ್ ರಿಲೀಫ್ ದೆಶೆಯಿಂದ ಸೌತ್ ಕೆನರಾದಲ್ಲಿ ದುಡ್ಡು ಖರ್ಚು ಮಾಡಿಲ್ಲ ಎಂದು ಹೇಳಿದರು ಇದು ಪಿ. ಡಬ್ಲ್ಯೂ. ಡಿ. ಗೆ ಸಂಬಂಧಿಸಿದಂತಹ ವಿಷಯ. ಇದರ ಬಗ್ಗೆ ಕೂಡ ಸರ್ಕಾರದ ಲಕ್ಷ ಇದೆ. ಏನು ಯೋಜನೆ ಮಾಡಬೇಕೆಂಬ ವಿಚಾರ ಮಾಡಲಿಕ್ಕೆ ಹತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ:— ಫ್ಲಡ್ ರಿಲೀಫ್ ವರ್ಕ್ಸ್‌ಗೆ ಕೇರಳದಲ್ಲಿ ಬೇಕಾದಷ್ಟು ಹಣ ಸಹಾಯ ತೆಗೆದುಕೊಂಡಿದ್ದಾರೆ, ಈ ಸರ್ಕಾರದವರು ಇದುವರೆಗೂ ಅದರ ಕಡೆಗೆ ಯೋಜನೆಯೇ ಮಾಡಿಲ್ಲ ಎಂದು ಹೇಳಿದರು, ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಚ್. ವಿ. ಕಾಜಲಗಿ:— ಯೋಚನೆಯೇ ಮಾಡಿಲ್ಲ ಎಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ ಯೋಜನೆಗಳೇನೋ ಆಗಿವೆ, ಆದರೆ ಇನ್ನೂ ಕಾರ್ಯಗತಕ್ಕೆ ಬಂದಿಲ್ಲ ಎಂದು ಹೇಳುತ್ತೇನೆ.

Sri K. H. Srinivasa:— In the State there are a number of medium size irrigation projects and flood-cum-irrigation projects for which central assistance has not been given. Hitherto we have failed to get the necessary asaistance from the Centre. All other States are getting this assistanee continuously. Therefore I urge upon the Hon. Minister to give top-priority to get this assistance from the Centre.

Sri H. V. Koujalgi: I take note of it. ಸದಸ್ಯರು ಸ್ಮಾಲ್ ಹೋಲ್ಡರ್ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ನಾವು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

7-00 P.M.

ಮಾನ್ಯ ಗಂಗಾಧರ್‌ರವರು ತುಮಕೂರು ಡಿಸ್ಟ್ರಿಕ್ಟ್ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಾ ಎಂದು ಕೇಳಿದ್ದಾರೆ. ೧೯೬೩ನೇ ಇಸವಿಯೊಳಗೆ ನಮ್ಮ ಇಡೀ ದೇಶಕ್ಕೆ ಸಂಬಂಧಪಟ್ಟಂತೆ ೭೮೦ ಕೋಟಿ ರೂಪಾಯಿಗಳ ಒಂದು ರಿಪೋರ್ಟನ್ನು ತಯಾರಿಸಿದ್ದೇವೆ. ಅದರಲ್ಲಿ ತುಮಕೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ವಿಷಯಗಳು ಇವೆ. ಕೇಂದ್ರ ಸರಕಾರದವರು ಇದಕ್ಕೆ ಒಪ್ಪಲಿಲ್ಲ. ೨೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ತುಮಕೂರು ಡಿಸ್ಟ್ರಿಕ್ಟಿಗೆ ಏನೇನು ಮಾಡಬೇಕು ಎನ್ನುವ ಬಗ್ಗೆ ಅದರೊಳಗೆ ಬರೆದಿದೆ. ಒಂದೊಂದು ಪ್ರಾಂತ್ಯಕ್ಕೂ ನಾವು ಏನು ಬೇಡಿದ್ದೇವೋ ಅದನ್ನು ಕೊಡುವುದಕ್ಕೆ ಆಗುವುದಿಲ್ಲ. ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ೧೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರು ಅದರೊಳಗೆ ತುಮಕೂರನ್ನು ಸೇರಿಸಿದೆ. ಆದುದರಿಂದ ತುಮಕೂರು ಡಿಸ್ಟ್ರಿಕ್ಟನ್ನು ಅಲಕ್ಷ್ಯ ಮಾಡಿಲ್ಲ ಎಂದು ಹೇಳುತ್ತೇನೆ.

ಶ್ರೀಮಾನ್ ಅಗ್ನಿಹೋತ್ರಿಯವರು ಹೇಳಿದರು ನರಗುಂದ, ಮಲಪ್ರಭ ಪ್ರಾಜೆಕ್ಟುಗಳು ಏನಿವೆ ಅಲ್ಲಿ ಜಮೀನನ್ನು ಅಕ್ವೈರ್ ಮಾಡಿದಾಗ ಜಮೀನಿಗೆ ಸರಿಯಾಗಿ ವಾರ್ಷಿಕ ಉತ್ಪನ್ನದ ಕಿಮ್ಮತ್ತು ಕೊಟ್ಟಿಲ್ಲ ಎಂದು ಹೇಳಿದರು. ಇದು ಲ್ಯಾಂಡ್ ಅಕ್ವಿಜಿಷನ್ ಖಾತೆಗೆ ಸಂಬಂಧಪಟ್ಟ ವಿಷಯ ಸ್ಥಳೀಯ ಅಧಿಕಾರಿಗಳ ಜೊತೆಯಲ್ಲಿ ವಿಚಾರ ಮಾಡಿ ಅನ್ಯಾಯವಾಗದಂತೆ ನೋಡಬೇಕೆಂದು ಹೇಳುತ್ತೇನೆ.

ಶ್ರೀಮಾನ್ ಸಯನಾಕ್‌ರವರು ಬಳ್ಳಾರಿ ನಾಲೆಯಿಂದ ಬೆಳಗಾಂನಲ್ಲಿ ಸಾವಿರಾರು ಎಕರೆ ಭೂಮಿಯಲ್ಲಿ ಪೀಕು ನಷ್ಟವಾಗಿದೆ ಎಂದು ಹೇಳಿದರು. ಅಲ್ಲಿ ಸಾವಿರಾರು ಜನ ಬಳ್ಳಾರಿ ನಾಲೆಯ ಬಾಜೂ ಬಾಜೂಗಳಲ್ಲಿ ಅತಿಕ್ರಮಣ ಮಾಡಿರುವುದರಿಂದ ಪೀಕು ಲುಕ್ಸಾನು ಆಗುವುದಕ್ಕೆ ಕಾರಣವಾಗಿದೆ.

Sri B. B. Sayanak :— Sir, the Revenue Officers have already surveyed this Bellary Nalla and yet you have not constructed the same.

Sri H. V. KOUJALGI :— That is true, but the difficulty is that there are many persons who are not co-operating with the Government in the matter of acquisition of land etc.

ಶ್ರೀ ಕೆ, ಪ್ರಭಾಕರ್ :— ಬೆಂಗಳೂರು ಸೂಯರೇಜ್ ವಾಟರ್ ಇರಿಗೇಷನ್ನಿಗೆ ಉಪಯೋಗವಾಗಿದೆ. ಅದಕ್ಕೆ ಸಂಬಂಧಪಟ್ಟ ಯೋಜನೆ ಕಾರ್ಯಗತ ಮಾಡಲು ಬಹಳ ದಿವಸಗಳಿಂದಲೂ ಡಿಲೇ ಆಗಿದೆ. ಆದಷ್ಟು ಬೇಗ ಗಮನಿಸಬೇಕೆಂದು ಹೇಳುತ್ತೇನೆ. ವರ್ತನ ಹಳ್ಳಿ. ಬೆಂಗಳೂರು ನಾರ್ತ್ ಜಿಲ್ಲೆ, ಹೊಸಕೋಟೆ, ಆನೇಕಲ್ಲು ಇವುಗಳ ಬಗ್ಗೆ ಆ ಒಂದು ಸ್ಕೀಮನ್ನು ಹಾಕಿದ್ದಾರೆ ಅದು ಬಹಳ ಡಿಲೇ ಆಗುತ್ತಾ ಇದೆ ಎಂದು ಗೊತ್ತಾಗಿದೆ. ಇದರ ಬಗ್ಗೆ ತಾವು ಉತ್ತರ ಕೊಟ್ಟು ದೇಶಕ್ಕೆ ಉಪಕಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ವಿ. ಕೌಜಲಗಿ :— ತಾವು ಹೇಳಿದ ವಿಷಯಗಳನ್ನು ಸಂಬಂಧಪಟ್ಟ ಖಾತೆಗಳಿಗೆ ತಿಳಿಸಿ ಅದಕ್ಕೆ ಸರಕಾರದವರು ಪರಿಹಾರ ನೀಡುವುದಕ್ಕೆ ಪ್ರಯತ ಮಾಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಮಾನ್ಯ ಮಂತ್ರಿಗಳು ೧೯೬೩ನೇ ಇಸವಿಯಲ್ಲಿ ಸ್ಪೆಷಲ್ ಆಫೀಸರನ್ನು ನೇಮಕ ಮಾಡಿದ್ದಾಗ ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ ತುಮಕೂರು ಜಿಲ್ಲೆಯನ್ನು ಸೇರಿಸಿದೆ ಎಂದು ಹೇಳಿದರು. ನಮಗೆ ಕೊಟ್ಟಿರತಕ್ಕ ಉತ್ತರದಲ್ಲಿ ತುಮಕೂರನ್ನು ಸೇರಿಸಿಲ. It is stated this.

> "Schemes have been prepared under this programme for 7 taluks in Bijapur District, 5 taluks in Chitradurga district and 8 taluks in Kolar district"

೭ ಜಿಲ್ಲೆಗಳಲ್ಲಿ ಕೋಲಾರ ಜಿಲ್ಲೆಯನ್ನು ಮಾತ್ರ ಸೇರಿಸಿದ್ದಾರೆ. ತುಮಕೂರನ್ನು ಸೇರಿಸಿಲ್ಲ. ಸೇರಿಸಬೇಕೆಂದು ಹೇಳುತ್ತೇನೆ. ಮಂಡ್ಯ ಡಿಸ್ಟ್ರಿಕ್ಟ್ ನಾಗಮಂಗಲ ತಾಲ್ಲೂಕನ್ನು ಸೇರಿಸಬೇಕೆಂದು ತಮಗೆ ಹೇಳಿದೆ. ತಾವು ಸೇರಿಸಿದೆ ಎಂದು ಹೇಳುತ್ತೀರಿ. ಇದರಲ್ಲಿ ಯಾವುದು ಸರಿ ?

ಶ್ರೀ ಹೆಚ್. ವಿ. ಕೌಜಲಗಿ:— ೧೯೬೮ನೇ ಇಸವಿಯಲ್ಲಿ ಕಳುಹಿಸಿದ್ದಂಥ ರಿಪೋರ್ಟ್‌ನಲ್ಲಿ ಸೇರಿಸಿದ್ದಾರೆ ಎಂದು ಹೇಳಿದೆ.

ಶ್ರೀ ಎಸ್. ಪುಟ್ಟಸ್ವಾಮಿ:— ಮಾನ್ಯ ಸಚಿವರು ಹೇಳಿದಂತೆ ನಾನು ಮತ್ತು ಶ್ರೀಮತಿ ನಾಗರತ್ನಮ್ಮನವರು ಬರೆದು ಕಳುಹಿಸಿಕೊಟ್ಟಿದ್ದೇವೆ. ಅದನ್ನು ಫೈಲಿಗೆ ಹಾಕಿಕೊಂಡು ತಾವು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಪಿ. ಗಂಗಾಧರ್ :— ತುಮಕೂರು ಟೌನಿಗೆ ನೀರು ಸರಬರಾಜು ಮಾಡುವ ವಿಷಯ. ಈ ಪ್ರಶ್ನೆ ಬಂದಾಗ ಕೂಡ ಟೈಂ ಆಗಿದ್ದುದ್ದರಿಂದ ಇದರ ಮೇಲೆ ನಾನು ಈ ಪ್ರಶ್ನೆಯನ್ನು ಕೇಳಲಿಕ್ಕೆ ಆಗಲಿಲ್ಲ. ಆದುದರಿಂದ ಇದಕ್ಕೆ ಪ್ರಯಾರಿಟಿ ಕೊಟ್ಟು ನಾಳೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ

ಉಪಾಧ್ಯಕ್ಷರು ;— ಆಗಲಿ ನೋಡೋಣ.

CALLING ATTENTION TO MATTERS OF URGENT PUBLIC IMPORTANCE

(i) re : *Affairs of the Amalgamated Electric Co , Ltd., Belgaum.*

SRI B. B SAYANAK (Belganm): Sir, I call the attention of the Hon, Minister for Law, Labour and Parliamentary Affairs to the "Go slow tactics" adopted by the workers of the Amalgamated Electric Company Limited, Belgaum.

SRI D. PARMESHWARAPPA (Deputy Minister for Major Irrigation and Electricity:—Sir, in response to the call attention by the Hon. Member, I beg to state as follows:

The Amalgamated Electric Company Limited, is a licence under the Electricity Act of 1910 to supply power to the Belgaum town only. It is not agency for the generation of power. The power that is supplied by the Company to the consumers in Belgaum town *i.e.*, the licenced area is purchased by it in bulk from the Mysore State Electricity Board.

The Management have written to the Commissioner of Labour alleging that the workers have resorted to ' go slow ' tactics and as a result of this, the company's work has run to heavy arrears. The local Labour Officer held enquiries into this. The Union is reported to have refuted the allegation of the management that there has been slowing down of work as alleged by the management and that they have resorted to "work to rule' only. Since the Labour Officer was unable to bring about an amicable settlement between the parties, Deputy Labour Commissioner, Belgaum Division has been asked to enquire into the matter and endeavour to bring about a settlement and submit a report in this behalf. His report is awaited. The situation is being watched.

SRI B. B. SAYANAK:—Sir, there is no mention about the National Tribunals award. The reason for g slow tactics by the workers there is due to the fact that the management has not respected the award of National Tribunal. I request the Government to force the management to accept and implement the National Tribunal award.

SRI D. PARAMESWRAPPA:—As a matter of fact, the award of the National Industrial Tribunal has not expired and during the pendency of the award the workmen have resorted this go slow tactics.

SRI AZIEZ SAIT:—The Hon. Deputy Minister was pleased to say that there is a National Industrial Tribunal award. He also said that the Deputy Commissioner has been asked to look into the matter and bring about an amicable settlement. Before he can look into the matter and submit an interim report, how do you conclude that the workers have taken to the go slow tactics?

SRI D. PARAMESWARAPPA:—All earnest efforts are made to bring about an amicable settlement but no amicable settlement has been possible. As I stated before, in spite of the award of the National Industrial Tribunal, the workmen have resorted to go slow tactics. That is the report.

SRI B. B. SAYANAK:—There are so many contracts pending in the company. May I know whether the Government is going to request the company to hand over these contracts to the lincensed electrical agent and to increase the number of workers?

SRI D. PARAMESWARAPPA:—As far as I know, this contract is in force till 1972. Then the question will arise whether the Government should take over this undertaking or not.

(ii) *re: RSS volunteers attack on persons in Nagamangala*

SRI AZIZ SAIT:—Sir, I call the attention of the Chief Minister to the R. S. S. volunteers' attack on some persons who were witnessing the Kabadi match at Nagamangala.

SRI MANIK RAO PATIL (Deputy Minister for Home):—Sir, It is not a fact that the R.S.S.S volunteers numbering about 1500 attacked the persons who were witnessing the Kabadi Match at Nagamangala. It is reported that on 27th September 1970, the finals of the Kabadi match of the Dasara Taluk Level Committee took place between Shivaji Team and Star Team. When the referee gave a decision in favour of Shivaji Team, Shri Nazeer Ahmed, Municipal President, as well as the president of the tournament, Nagamangala, took away the prizes kept for distribution, to the Municipal Office. This resulted in a commotion and about 200-300 persons pelted stones and forced Shri Nazeer Ahmed to come out of the Office and apologise for his action. As a result of stone throwing, one Head Constable and one Police Constable who were on bandobust duty sustained injuries. Four street lights were damaged near the Bus Stand. The agitators damaged the Fruit shop of Shri Nazeer Ahmed in the Bus Stand. The local police took immediate action to disperse the mob. On receipt of the information regarding the incident, the Superintendent of Police, Mandya District, rushed to the spot with a party of District Armed Reserve and brought the situation under control. On the complaint

(Sri Manik Rao Patil)

of Shri Nazeer Ahmed, a case has been registered by the Nagamangala Police under Sections 143, 147, 148, 427 and 324 I. P. C. against seventeen persons. Police patrolling has been arranged and the situation is peaceful.

Sri Aziz Sait :—Only yesterday we have received some letters and newspaper reports from Mandya wherein it is stated that it was not actually the R. S. S. workers who are responsible for it but somebody else. Also, the Assistant Commissioner, Pandavapura, the Superintendent of Police, Mandya and some leading citizens of Nagamangala have brought about peace between the two communities. In view of that, will the Government think of dropping the proceedings ?

Sri Manik Rao Patil :—The question of dropping proceedings does not arise now; the law will take its own course.

Mr. Deputy Speaker :—The House will now adjourn to meet tomorrow at 1 p. m.

The House adjourned at Twenty Minutes Past Seven of the Clock to meet at one of the Clock on Thursday, the 15th October 1970.

WD 15518—GPB—550 30-12-70